ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 43 ಆಕ್ಟೋಬರ್ 20-26, 1997 ಬೆಲೆ ರೂ. 2.00



ರವೀಂದ್ರನಾಥ್ ಟಾಗೋರ್ 1905ರಲ್ಲಿ

ದೇಶದ ಸ್ವಾತಂತ್ರ್ಯಕ್ಕಾಗಿಯೂ ಜೈಲು ವಾಸ ಉಪನ್ಯಾಸಕರ ನೇಮಕಾತಿಗಾಗಿಯೂ ಸೆರೆವಾಸ

ಎಸ್. ಕೆ. ಉಪಾಧ್ಯಾಯ

ಕೇಂದ್ರ ಮತ್ತು ರಾಜ್ಯ ಸರಕಾರಗಳು ಐವತ್ತನೆಯ ಸ್ವಾತಂತ್ರ್ಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದಲೇ ದೇಶಾದ್ಯಂತ ಆಚರಿಸಿದವು. ಭಾರತ ಸ್ವಾತಂತ್ರ್ಯ ಪಡೆದ ಈ ಉತ್ಸವವನ್ನು ನಾನಾ ರೀತಿಯಲ್ಲಿ ಆಚರಿಸುವ ಕಾರ್ಯಕ್ರಮಗಳನ್ನು ಸರಕಾರ ಮತ್ತು ವಿವಿಧ ಸಂಘ-ಸಂಸ್ಥೆಗಳು ಹಮ್ಮಿಕೊಂಡಿವೆ.

ಆದರೆ ಅತ್ಯಂತ ಆಶ್ಚರ್ಯಕರ ಸಂಗತಿ ಎಂದರೆ, ಸ್ವಾತಂತ್ರ್ಯದ ಸ್ವರ್ಣೋತ್ಸವವನ್ನು ಹೆಮ್ಮೆಯಿಂದ ಉತ್ಸಾಹದಿಂದ ಆಚರಿಸುತ್ತಿರವಾಗಲೇ ಕರ್ನಾಟಕದ ಕಾಲೇಜು ವಿದ್ಯಾರ್ಥಿಗಳು ಭಾರತ ವಿದ್ಯಾರ್ಥಿ ಫೆಡರೇಶನ್ನಿನ (ಎಸ್.ಎಫ್.ಐ) ನೇತೃತ್ವದಲ್ಲಿ ರಾಜ್ಯ ಸರಕಾರದ ಶಿಕ್ಷಣ ನೀತಿ, ವಿದ್ಯಾರ್ಥಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಗಂಭೀರ ಹೋರಾಟ ನಡೆಸಿ ಬಂಧನಕ್ಕೊಳಗಾಗುವ, ಜೈಲುವಾಸ ಅನುಭವಿಸುವ ಘಟನೆ ನಡೆಯುತ್ತಿದೆ. ಇದು ಅತ್ಯಂತ ವಿಷಾದನೀಯುವಲ್ಲವೇ? ಮೂವತ್ತು-ನಾಲ್ವತ್ತರ ದಶಕಗಳಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿ ಜೈಲುಗಳಲ್ಲಿ ನರಕಯಾತನೆಗೊಳಗಾಗಿದ್ದ ಸ್ವಾತಂತ್ರ್ಯ ಯೋಧರ, ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ನೀಡಿದ ಅಂದಿನ ಯುವಕರ ಮಕ್ಕಳು ಮೊಮ್ಮಕ್ಕಳು ಇಂದು ಐವತ್ತು ವರ್ಷಗಳ ನಂತರ ಮತ್ತೆ ಅದೇ ಜೈಲಿಗೆ ಹೋಗುವಂಥ ಪರಿಸ್ಥಿತಿ ಬಂದಿದೆಯಲ್ಲಾ!

ನಾವು ಸ್ವತಂತ್ರರಾದರೆ ನಮ್ಮವರು ನಮಗೆ ದೇಶಕ್ಕೂ, ಜೀವನಕ್ಕೂ ಸದುಪಯೋಗವಾಗುವ ಶಿಕ್ಷಣ ಒದಗಿಸಬಹುದೆಂಬ ಮಹದಾಶೆಯಿಂದ ಕಾಲೇಜು ವಿದ್ಯಾರ್ಥಿಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲು ವಾಸ ಅನುಭವಿಸಿದ್ದರು. ತಮ್ಮ ತಾತಂದಿರ ಹೋರಾಟಗಳಿಂದಾಗಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದರೂ, ಶಿಕ್ಷಣ ರಂಗಕ್ಕೆ ಸ್ವಾತಂತ್ರ್ಯ ಸಿಕ್ಕಿಲ್ಲವೆಂದು ಈಗಿನ ವಿದ್ಯಾರ್ಥಿಗಳು ಹೋರಾಟ ಮಾಡಬೇಕಾಗಿ ಬಂದಿರುವುದು ದುರದೃಷ್ಟಕರ ಸಂಗತಿಯಾಗಿದೆ.

ನಮ್ಮ ರಾಜ್ಯದ ಶಿಕ್ಷಣ ರಂಗ ಕೊಳೆತು ನಾರುತ್ತಿದೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಬಿ.ಎ, ಬಿ.ಎಸ್.ಸಿ. ಬಿ.ಕಾಂ., ಬಿ.ಇ., ಎಂ.ಬಿ.ಬಿ.ಎಸ್., ಎಂ.ಎ., ಪಿ.ಎಚ್.ಡಿ., ವರೆಗೂ ಚಿಂತನಶೀಲ, ವಾಸ್ತವಿಕ ವಿಚಾರ ಧಾರೆಗಳೆಂಬುದಿಲ್ಲ. ಆಡಳಿತೆಯ ಇತರ ಅಂಗಾಂಗಗಳಂತೆಯೇ ಶಿಕ್ಷಣರಂಗವೂ ನಿರ್ಲಕ್ಷಿಸಲ್ಪಟ್ಟಿದೆ. ಎರಡು ವಿಭಾಗಗಳಾಗಿ ಪರಿವರ್ತನೆ ಗೊಂಡಿವೆ. ಉಳ್ಳವರು ದುಡ್ಡು ಕೊಟ್ಟು ಶಿಕ್ಷಣ ಪಡೆಯುವ ಅವಕಾಶ. ಅದರಲ್ಲಿ ಸರ್ಕಾರದ ಜವಾಬ್ದಾರಿ ಎಂಬುದೇ ಇಲ್ಲ. ಇನ್ನೊಂದು ಸರಕಾರವೇ ನಡೆಸುತ್ತಿರುವ ಶಿಕ್ಷಣ ವಿಭಾಗ. ಇದು ಬಡವರ, ಮಧ್ಯಮವರ್ಗದ ಒಂದು ವಿಭಾಗದ ಆಶ್ರಯದಾತ. ಐದನೆಯ ಇಯತ್ತೆಯವರೆಗೂ ಒಬ್ಬನೇ ಹೆಡ್ ಮಾಸ್ತರೂ-ಕ್ಲಾಸ್ ಮಾಸ್ತರೂ ಆಗಿರುವ ಪ್ರಾಥಮಿಕ ಶಾಲೆಗಳು, ಶಾಲೆಯ ಕೊಠಡಿ ಬಿದ್ದು ಹೋಗಿ ಮರಗಳ ಕೆಳಗೆ ನಡೆಸಲ್ಪಡುವ ಕ್ಲಾಸುಗಳು, ಬೀಡಿ-ಸಿಗರೇಟು ಸೇದುತ್ತಾ ಇಸ್ಪೀಟ್ ಆಟಗಳಲ್ಲಿ ಮಗ್ನರಾಗಿರುವ ಶಿಕ್ಷಕರನ್ನೊಳಗೊಂಡ ಶಾಲೆಗಳು ಕಣ್ಣಿಗೆ 'ರಮಣೀಯ' ದೃಶ್ಯ ನೀಡುತ್ತಿವೆ. ಸರಕಾರಿ ಕಾಲೇಜುಗಳಲ್ಲಿ ಇದಕ್ಕಿಂತ ಉತ್ತಮ ದೃಶ್ಯಗಳಿದ್ದಂತೆ ಕಂಡುಬರುವುದಿಲ್ಲ. ಹೀಗಾಗಿ ಎಷ್ಟೇ ಕಷ್ಟಗಳನ್ನನುಭವಿಸಬೇಕಾದರೂ ಕೂಡ ಪಾಲಕರು ಖಾಸಗಿ ಶಾಲೆಗಳಿಗೆ ಮೊರೆ ಹೋಗಬೇಕಾಗಿದೆ.

ಪ್ರಾಥಮಿಕ ಶಾಲೆಗಳು ಶಿಕ್ಷಕರಿಲ್ಲದೆ ಬರಿದಾಗಿವೆ. ಪ್ರಾಥಮಿಕ ಶಿಕ್ಷಕರನ್ನು ನೇಮಿಸುವ ಆಶ್ವಾಸನೆಗಳೆಲ್ಲ ಹುಸಿಯಾಗಿವೆ. ಕಾಲೇಜುಗಳಲ್ಲಿಯೂ ಜನತಾ ಸರಕಾರ ಇಂಥದ್ದೇ ಪರಿಸ್ಥಿತಿಯನ್ನುಂಟುಮಾಡಿದೆ. ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಪ್ರತಿ ವರ್ಷ ಹೆಚ್ಚಾಗುತ್ತಿದೆ. ಅದಕ್ಕನುಗುಣವಾಗಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಬೇಕು. ಸರಕಾರ ಖಾಯಂ ಉಪನ್ಯಾಸಕರನ್ನು ನೇಮಿಸಿಕೊಳ್ಳದೆ, ಅರೆಕಾಲಿಕ ಉಪನ್ಯಾಸಕರ ಮೇಲೆ ನಿರ್ಬಂಧ ಹೇರಿ ಕಾಲೇಜು ವಿದ್ಯಾರ್ಥಿಗಳ ಅಭ್ಯಾಸಕ್ಕೆ ಕೊಡಲಿಯೇಟು ಕೊಟ್ಟಿದೆ. ಹೋದ ವರ್ಷ ಆರು ಸಾವಿರದಷ್ಟು ಉಪನ್ಯಾಸಕರ ಅವಶ್ಯಕತೆ ಇತ್ತು. ಈ ವರ್ಷ ಒಂದೂವರೆ ಸಾವಿರದಷ್ಟು ಉಪನ್ಯಾಸಕರ ಅವಶ್ಯಕತೆಯಿದೆ. ಖಾಸಗಿ ಕಾಲೇಜುಗಳಲ್ಲಿ ಅವಶ್ಯಕತೆಗನುಸರಿಸಿ ಉಪನ್ಯಾಸಕರನ್ನು ನೇಮಿಸಿ ಅವಶ್ಯಕತೆ ಬಿದ್ದಲ್ಲಿ ಅರೆಕಾಲಿಕ ಉಪನ್ಯಾಸಕರನ್ನು ನೇಮಿಸಿ ಕೊಳ್ಳುವ

ಪುಟ 2 ನೋಡಿ

ಈ ಹಾವಳಿ ಬರಿದೆ ಹಾವಳಿಯಲ್ಲವೋ!

ಮತ್ತೆ ವೀರಪ್ಪನ್ ಸುದ್ದಿ ಪತ್ರಿಕೆಗಳಲ್ಲಿ ರಾರಾಜಿಸುತ್ತಿದೆ. ಈಬಾರಿ ಬಂಡೀಪುರದಲ್ಲಿ ಇಬ್ಬರು ಛಾಯಾಚಿತ್ರಕಾರರು, ಒಬ್ಬರು ವಿಜ್ಞಾನಿ ಸೇರಿದಂತೆ ಆರು ಮಂದಿಯನ್ನು ಅಪಹರಿಸಿ, ಕುವೆಂಪು ಧ್ವನಿ ಮುದ್ರಿತವಾಗಿದ್ದ ಕ್ಯಾಸೆಟ್‌ನಲ್ಲಿ ತನ್ನ 'ಸಂದೇಶ' ಕಳಿಸಿದ್ದಾನೆ – ನನ್ನ ಬೇಡಿಕೆ ಈಡೇರಿಸಿ, ಇಲ್ಲವಾದರೆ ೫೦೦೦೦ ಜನರನ್ನು ಕೊಲ್ಲುತ್ತೇನೆ ಎಂದು ಬೆದರಿಸಿದ್ದಾನಂತೆ. ಇದೊಂದು ಮೂರ್ಛೆರೋಗದಂತೆ ಮತ್ತೆ ಮತ್ತೆ ಬಾಧಿಸುತ್ತಿದೆ ಎಂದಿದ್ದಾರೆ ನಮ್ಮ ಮುಖ್ಯಮಂತ್ರಿಗಳು. ಈ ರೋಗಕ್ಕೆ ಮದ್ದೇ ಇಲ್ಲವೇ? ಕಾಡುಗಳ್ಳ, ದಂತಚೋರ, ನರ ಹಂತಕ ಎಂದೆಲ್ಲಾ 'ಬಿರುದಾಂಕಿತ' ಈತನನ್ನು ಬಂಧಿಸಿ ನ್ಯಾಯಾಲಯದ ಕಟಕಟೆಗೆ ತರಲು ಒಂದು ರಾಜ್ಯ ಸರಕಾರಕ್ಕೆ ಸಾಧ್ಯವೇ ಇಲ್ಲವೇ?

ನಮ್ಮ ಮುಖ್ಯಮಂತ್ರಿಗಳು ತಮಿಳುನಾಡು ಮುಖ್ಯಮಂತ್ರಿಗಳನ್ನು ಸಂಪರ್ಕಿಸಿದ್ದಾರೆ. ದಿಲ್ಲಿಗೆ ಹೋಗಿ ಪ್ರಧಾನ ಮಂತ್ರಿ, ಕೇಂದ್ರ ಗೃಹ ಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ 'ಎರಡು ದಿನಗಳಲ್ಲಿ ಶರಣಾಗು, ಇಲ್ಲವೇ ಕಾರ್ಯಾಚರಣೆ ಎದುರಿಸು" ಎಂದು ಹೇಳಿರುವುದಾಗಿಯೂ ಸುದ್ದಿಯಾಗಿದೆ.

ಸಾಮಾನ್ಯವಾಗಿ ಇದೊಂದು ಬೃಹತ್ ಸಮಸ್ಯೆಯಿರಬೇಕು ಎಂದು ಜನ ಪರಿಗಣಿಸುವಂತಾಗಿದೆ. ಇನ್ನೊಂದೆಡೆ ಇದರಿಂದ ತಮ್ಮ ದೈನಂದಿನ ಸಮಸ್ಯೆಗಳಾದ ಬಡತನ, ಹಣದ ಅಭಾವ, ಬೆಲೆಯೇರಿಕೆ, ಪ್ರಯಾಣದರ ಏರಿಕೆ, ಮಕ್ಕಳ ಶಾಲೆ-ಕಾಲೇಜು ಶಿಕ್ಷಣದ ಸಮಸ್ಯೆ, ನೌಕರಿ-ವಿವಾಹಗಳ ಸಮಸ್ಯೆ ಇವೆಲ್ಲವುಗಳಿಂದ ಜನಗಳ ಗಮನ ಸ್ವಲ್ಪಕಾಲ ವೀರಪ್ಪನ್‌ನ ದುಸ್ಸಾಹಸಗಳ ಕಡೆ ಹೋಗುತ್ತದೆ.

ನಿಜವಾಗಿಯೂ ಸರಕಾರವೊಂದು ಬಗೆಹರಿಸಲಾಗದ ಬೃಹತ್ ಸಮಸ್ಯೆ ಇದು ಎಂದರೆ ಯಾರೂ ನಂಬುವುದಿಲ್ಲ. ಮನಸ್ಸಿದ್ದರೆ ಮಾರ್ಗ ಎನ್ನುವಂತೆ ಈ ಮೊದಲೇ ಎಂದೋ ಈ ಹಾವಳಿಯನ್ನು ಅಡಗಿಸಬಹುದಿತ್ತು. ಇಬ್ಬರು ಹಿರಿಯ ಪೋಲೀಸ್ ಅಧಿಕಾರಿಗಳೂ ಇತ್ತೀಚೆಗೆ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಇಷ್ಟೊಂದು ದೀರ್ಘಕಾಲದ ನಂತರವೂ ಏಕೆ ಆಗಲಿಲ್ಲ ಎಂಬುದು ವಿಚಾರಮಾಡ ಬೇಕಾದ ಸಂಗತಿ.

ದುಷ್ಟಕೂಟದ ಅಂಗ

ವೀರಪ್ಪನ್ ಆನೆಗಳನ್ನು ಸಾಯಿಸಿ ದಂತವನ್ನು ಮಾರುತ್ತಾನೆ, ಶ್ರೀಗಂಧದ ಮರ ಮತ್ತು ಇತರ ಕಾಡಿನ ಉತ್ಪನ್ನಗಳನ್ನು ಮಾರುತ್ತಾನೆ. ಇವುಗಳಲ್ಲೆಲ್ಲಾ ವ್ಯವಹರಿಸುವುದು ಸಾಮಾನ್ಯ ವರ್ತಕರೇನಲ್ಲ-ವ್ಯಾಪಾರ-ಉದ್ದಿಮೆ ರಂಗದಲ್ಲಿ ದೊಡ್ಡ ಸ್ಥಾನಗಳಲ್ಲಿರತಕ್ಕಂತಹ ಕೋಟ್ಯಾಧೀಶ್ವರರು, ವ್ಯಾಪಾರಿಗಳು, ರಾಜಕಾರಣಿಗಳು- ಅಧಿಕಾರಶಾಹಿಗಳು- ಕ್ರಿಮಿನಲ್‌ಗಳ ಚತುಷ್ಕೋಣ ದುಷ್ಟಕೂಟದ ಬಗ್ಗೆ ಈಗ ಬಹಳಷ್ಟು ವಿಚಾರ ನಡೆದಿದೆ. ಈ ವೀರಪ್ಪನ್ ಹಾವಳಿ ಇದೇ ದುಷ್ಟಕೂಟದ ಭಾಗ ಎಂಬ ಬಗ್ಗೆ ಜನತೆಗೆ ಏನೇನೂ ಸಂದೇಹವುಳಿದಿಲ್ಲ. ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಮೈಸೂರು ಜಿಲ್ಲೆಯ ಒಂದು ವಿಧಾನಸಭಾ ಕ್ಷೇತ್ರದಿಂದ ಒಬ್ಬ ಉಮೇದುವಾರನನ್ನು ಗೆಲ್ಲಿಸುವುದಕ್ಕೆ ವೀರಪ್ಪನ್ ಸಂಪೂರ್ಣ ಖರ್ಚು ಮಾಡಿದ ಎಂಬ ಸುದ್ದಿಯೂ ಜನಜನಿತವಾಗಿದೆ.

ನಿಜ, ಇದು ಕರ್ನಾಟಕ ಸರಕಾರ ಅಥವಾ ತಮಿಳುನಾಡು ಸರಕಾರದ ಪ್ರಶ್ನೆ ಮಾತ್ರವೇ ಅಲ್ಲ. ವೀರಪ್ಪನ್‌ನ್ನು ಹಿಡಿಯಲು ವಿಶೇಷ ಕಾರ್ಯಾಚರಣೆ ಪಡೆ (STF) ರಚಿಸಿದ್ದು ಆಯ್ತು. ಹಿಂದೆ ಕೇಂದ್ರ ಸರ್ಕಾರ ಈ ಉದ್ದೇಶಕ್ಕಾಗಿ ವಿಶೇಷ ಪೋಲೀಸ್ ಪಡೆಯನ್ನೂ ಕಳಿಸಿತ್ತು. ಅದನ್ನು ರಾಜ್ಯ ಸರಕಾರ ಸರಿಯಾಗಿ ಉಪಯೋಗಿಸಿಕೊಳ್ಳಲಾಗಲಿಲ್ಲ ಎಂಬ ಮಾತೂ ಇದೆ.

ಕಳೆದ ಬಾರಿ ಕರ್ನಾಟಕ ಅರಣ್ಯ ಇಲಾಖೆಯ ಒಂಭತ್ತು ಸಿಬ್ಬಂದಿಯನ್ನು ವೀರಪ್ಪನ್ ಅಪಹರಿಸಿದಾಗ ತಮಿಳು ವಾರಪತ್ರಿಕೆ 'ನಕ್ಕೀರನ್' ನ ಸಂಪಾದಕ ಗೋಪಾಲ್ ಮಧ್ಯಸ್ಥಿಕೆಯಿಂದ ಕೊನೆಗೂ ಅವರ ಬಿಡುಗಡೆಯಾಯಿತು. ಆಗ ವೀರಪ್ಪನ್ ಶರಣಾಗತನಾಗುವ ಸುದ್ದಿಯೂ ಬಂತು. ಕೆಲವು ರಾಜಕೀಯ ಮುಖಂಡರ, ಮಾಜಿ ಉನ್ನತ ಪೋಲೀಸ್ ಅಧಿಕಾರಿಗಳ ಹೇಳಿಕೆಗಳಿಂದಾಗಿ ಅದು ಮುಂದೆ ಹೋಯಿತು ಎಂಬ ಭಾವನೆ ಇದೆ.

ಶೋಷಕ ವ್ಯವಸ್ಥೆಯ ಲಕ್ಷಣ

ಆದರೆ ವೀರಪ್ಪನ್‌ನ್ನು ಹಿಡಿಯುವುದು ಸರಕಾರಕ್ಕೆ ಕಷ್ಟವೇ ಎಂಬ ಪ್ರಶ್ನೆ ಹಾಗೆಯೇ ಉಳಿದಿದೆ. ವಾಸ್ತವವಾಗಿ ಈ ವೀರಪ್ಪನ್‌ಗಳು ನಮ್ಮ ಬಂಡವಾಳಶಾಹಿ-ಜಮೀನುದಾರಿ ಸಮಾಜದ ಒಂದು ಲಕ್ಷಣವೇ ಆಗಿದ್ದಾರೆ. ಈ ಸಮಸ್ಯೆ ಈ ಸಮಾಜದ ಕಾಯಿಲೆಯನ್ನು ಬಹಿರಂಗಪಡಿಸಿದೆಯಷ್ಟೇ. ಆಳುವ ಪಕ್ಷ ಅಥವಾ ಸರಕಾರ ಶೋಷಕ ಶಕ್ತಿಗಳ ಹಿತಾಸಕ್ತಿ ಗಳನ್ನೇ ಕಾಪಾಡುವ ಉದ್ದೇಶವಿಟ್ಟು ಕೊಂಡಿದ್ದರೆ ಈ ಕಾಯಿಲೆ ವಾಸಿಯಾಗುವುದು ಹೇಗೆ? ಕೆಲವರ ಸಂಪತ್ತು, ಅಧಿಕಾರಕ್ಕೆ ಕೂಡಾ ಈ ವೀರಪ್ಪನ್‌ಗಳೇ ಆಧಾರವಾಗಿದ್ದರೆ, ಅದುವರೆಗೆ ವೀರಪ್ಪನ್‌ನಂತಹವರನ್ನು ಹಿಡಿಯುವುದು, ಕಾನೂನಿನ ಪ್ರಕ್ರಿಯೆಗೆ ಒಳಪಡಿಸುವುದು ಕಷ್ಟವೇ ಅಲ್ಲವೇ? ಈ ವೀರಪ್ಪನ್‌ಗಳನ್ನು ಸೃಷ್ಟಿ ಮಾಡುವ ಈಗಿನ ವ್ಯವಸ್ಥೆ ಇರುವವರೆಗೆ ಈ ಹಾವಳಿಗೆ ಶಾಶ್ವತ ಪರಿಹಾರ ಇಲ್ಲ ಎಂಬುದು ಸ್ಪಷ್ಟ. ಆದ ಕಾರಣದಿಂದಲೇ ದುಡಿಯುವ ಜನರು ಶೋಷಕ ವ್ಯವಸ್ಥೆಯ ಬದಲಾವಣೆಗಾಗಿ ನಿರಂತರವಾಗಿ ಹೋರಾಟ ನಡೆಸುತ್ತಿರಬೇಕಾಗಿದೆ.

ರೈಲು ಸಾಗಾಣಿಕೆ ದರ ಏರಿಕೆ ಅನಗತ್ಯ-ಸಿಪಿಐ(ಎಂ)

ಅಕ್ಟೋಬರ್ 15 ರಿಂದ ಜಾರಿಗೆ ಬಂದಿರುವ ರೈಲು ಸಾಗಾಣಿಕೆ ದರ ಏರಿಕೆ ಅನಗತ್ಯವಾಗಿದ್ದು ಇದು ಜೀವನ ವೆಚ್ಚವನ್ನು ಹೆಚ್ಚಿಸಿ ಜನಗಳ ಮೇಲೆ ಇನ್ನಷ್ಟು ಹೊರೆಗಳನ್ನು ಹಾಕುತ್ತದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಖಂಡಿಸಿದೆ. ಆಹಾರ ಧಾನ್ಯಗಳು, ಬೇಳೆಕಾಳುಗಳು, ಸಕ್ಕರೆ, ಸೀಮೆಎಣ್ಣೆ ಇತ್ಯಾದಿಗಳ ಮೇಲೆ ಸಾಗಾಣಿಕೆ ಸಬ್ಸಿಡಿಯನ್ನು ಹಾಕಬೇಕೆಂದುಕೊಂಡಿರುವುದು ಜನಗಳನ್ನು ನೇರವಾಗಿ ತಟ್ಟಿದರೆ ಕಲ್ಲಿದ್ದಲು ಸಾಗಾಣಿಕೆ ಮೇಲಿನ ದರದಲ್ಲಿ 4% ಹೆಚ್ಚಳ ಸರ್ವತೋಮುಖಿ ಬೆಲೆಯೇರಿಕೆಗೆ ತುಪ್ಪ ಸುರಿದಂತೆ.

15 ಜೀವನಾವಶ್ಯಕ ಸರಕುಗಳಿಗೆ ಇಲ್ಲಿಯುವರೆಗೆ ಸಾಗಾಣಿಕೆ ಸಬ್ಸಿಡಿ ಇತ್ತು. ಅವುಗಳಲ್ಲಿ 13 ಸರಕುಗಳ ಮೇಲೆ ಇಂತಹ ಸಬ್ಸಿಡಿಯನ್ನು ಹಿಂತೆಗೆದುಕೊಳ್ಳಲಾಗಿದೆ. ಇದು ಪೆಟ್ರೋಲಿಯಂ ಬೆಲೆಯೇರಿಕೆಯ ಮೂಲಕ ಸರಕಾರ ಜನಸಾಮಾನ್ಯರ ಮೇಲೆ ಹಾಕಿರುವ ಪರೋಕ್ಷ ತೆರಿಗೆ.

ಜನಗಳ ಮೇಲೆ ಇಂತಹ ಹೊರೆ ಹಾಕುವುದಕ್ಕೆ ಯಾವುದೇ ಸಮರ್ಥನೆಯಿಲ್ಲ. ಸರಕಾರ ತನ್ನ ಈ ನಿರ್ಣಯವನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಬೆಲೆಯೇರಿಕೆಯ ವಿರುದ್ಧ ಜನಗಳನ್ನು ಅಣಿನೆರೆಸಬೇಕು ಎಂದು ಪಕ್ಷದ ಶಾಖೆಗಳಿಗೆ ಕರೆ ನೀಡಿದೆ.




[illegible] ದಲ್ಲಿರುವ ಗಾರ್ಮೆಂಟ್ ಕಾರ್ಖಾನೆ ಅಧಿಕಾರಿಗಳು ಮಾಲಕರು ಘೋಷಿಸಿರುವ ಬೀಗಮುದ್ರೆಯ ವಿರುದ್ಧ ಕಾರ್ಮಿಕರ ಪ್ರತಿಭಟನೆ. ಉಪ ಮುಖ್ಯಮಂತ್ರಿಯ ನಿವಾಸದೆದುರು ಧರಣಿ ಸತ್ಯಾಗ್ರಹ ನಡೆಸುತ್ತಿರುವ ಈ ಕಾರ್ಖಾನೆಯ ಮಹಿಳಾ ಕಾರ್ಮಿಕರು.



ಪುಸ್ತಕ ಪರಿಚಯ

ಸ್ವಾತಂತ್ರ್ಯದ ಸ್ವರ್ಣಜಯಂತಿ ಸಂದರ್ಭದಲ್ಲಿ ಮತ್ತೊಮ್ಮೆ ಅಧ್ಯಯನ ಮಾಡಬೇಕಾದ ಪುಸ್ತಕ

ಈ ಕನ್ನಡದ ಈ ಅಪರೂಪದ ಕೃತಿಯ ಪರಿಚಯವನ್ನು ಈಹಿಂದೆ 'ಐಕ್ಯರಂಗ' ತನ್ನ ಓದುಗರಿಗಾಗಿ ನೀಡಿತ್ತು. ಈಗ ದೇಶಾದ್ಯಂತ ಸ್ವಾತಂತ್ರ್ಯದ ಸ್ವರ್ಣಜಯಂತಿಯ ಸಂದರ್ಭದಲ್ಲಿ ಮತ್ತೊಮ್ಮೆ ಈ ಪರಿಚಯ ಲೇಖನ. ಈ ಬಾರಿ ಪರಿಚಯಿಸುವವರು ಕಾಂ!! ಸಿ.ಆರ್.ಭಟ್.



ಭಾರತದ ಸ್ವಾತಂತ್ರ್ಯದ 50ನೇ ವರ್ಷಾಚರಣೆ ಸಂದರ್ಭ ಸರಕಾರಿ ಕಾರ್ಯಕ್ರಮಗಳಲ್ಲಿ ಶಾಲೆ-ಕಾಲೇಜು-ವಿಶ್ವವಿದ್ಯಾಲಯಗಳಲ್ಲಿ ಮತ್ತಿತರ ಸಂಘ ಸಂಸ್ಥೆಗಳಲ್ಲಿ ಹೆಚ್ಚಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ಪಕ್ಷದ ಹಾಗೂ ಅದರ ಧುರೀಣರಾದ ಗಾಂಧಿ, ನೆಹರು ಮುಂತಾದವರ ಹೋರಾಟಗಳನ್ನಷ್ಟೇ ಪ್ರಸ್ತಾಪಿಸಲಾಗುತ್ತಿದೆ. ಗಾಂಧೀಜಿಯ ಸತ್ಯ, ಅಹಿಂಸೆ, ಅಸಹಕಾರ ಮಾರ್ಗಗಳಿಂದಲೇ ಸ್ವಾತಂತ್ರ್ಯ ಸಿಕ್ಕಿರುವುದಾಗಿ ಅರ್ಧ ಸತ್ಯವನ್ನಷ್ಟೇ ತಿಳಿಸಲಾಗುತ್ತಿದೆ. ಆದರೆ, ನಾಡಿನ ಹಿರಿಯ ಲೇಖಕರಾದ ಎಸ್.ಪಿ. ನಾರಾಯಣ ರಾವ್ ತಮ್ಮ ಇತ್ತೀಚಿಗಿನ 'ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು' ಎಂಬ ಮಹಾನ್ ಕೃತಿಯಲ್ಲಿ ಸ್ವಾತಂತ್ರ್ಯದ ಹೋರಾಟದ ಕುರಿತಾದ ಪ್ರಚಲಿತ ಇತಿಹಾಸದ ಲೋಪದೋಷಗಳನ್ನು ಹೋಗಲಾಡಿಸಲು ಪ್ರಯತ್ನಿಸಿದ್ದಾರೆ. ರಾಷ್ಟ್ರೀಯ ವಿಮೋಚನಾ ಚಳುವಳಿಯ ಸಮಗ್ರ ಪರಿಚಯ ನೀಡಲು ಸಾಹಸ ಮಾಡಿದ್ದಾರೆ. ಅವರು ತಮ್ಮ ಕೃತಿಯನ್ನು 'ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಎದುರಿಸುವಲ್ಲಿ ಗುಪ್ತಗಾಮಿನಿಯಾಗಿ ಹರಿದ ಸಾವಿರ ತೊರೆಗಳಲ್ಲಿ ಲೀನರಾದ ಅಸಂಖ್ಯಾತ ಅಜ್ಞಾತ ಹುತಾತ್ಮರಿಗೆ' ಅರ್ಪಣೆ ಮಾಡಿರುವುದು ಅರ್ಥಪೂರ್ಣವಾಗಿದೆ.

ಲೇಖಕರು ತಮ್ಮ 400 ಪುಟಗಳ ಪುಸ್ತಕದಲ್ಲಿ ಕಳೆದ ಐದು ಶತಮಾನಗಳ ದೀರ್ಘ ಕಾಲದ ಭಾರತದ ಇತಿಹಾಸದಲ್ಲಿ ಹೊಸೆದುಕೊಂಡಿರುವ ಸ್ವಾತಂತ್ರ್ಯ ಹೋರಾಟವನ್ನು ಪರಿಚಯಿಸಿದ್ದಾರೆ. ಮೊಗಲ್ ಚಕ್ರಾಧಿಪತ್ಯದ ಕಾಲದಲ್ಲಿ ವ್ಯಾಪಾರಕ್ಕೆ ಭಾರತಕ್ಕೆ ಬಂದ ಬ್ರಿಟಿಷ್ ಈಸ್ಟ ಇಂಡಿಯಾ ಕಂಪೆನಿಯು ಯುರೋಪಿನ ಇತರ ವ್ಯಾಪಾರಿ ಸಂಸ್ಥೆಗಳೊಂದಿಗೆ ತೀವ್ರ ಪೈಪೋಟಿ ನಡೆಸುತ್ತಾ, ದೇಶದ ರಾಜ-ಮಹಾರಾಜರೊಳಗಿನ ಅಂತಃಕಲಹಗಳಲ್ಲಿ ಹಸ್ತಕ್ಷೇಪ ಮಾಡುತ್ತಾ, 1757 ರ ಪ್ಲಾಸಿ ಕದನದಲ್ಲಿ ತನ್ನ ಮೇಲುಗೈ ಸಾಧಿಸಿ, ತನ್ನದೇ ರಾಜ್ಯ ಕಟ್ಟುವಲ್ಲಿ ಯಶಸ್ವಿಯಾದ ಕರಾಳತೆಯನ್ನು ಬಿಚ್ಚಿಟ್ಟಿದ್ದಾರೆ. ಸ್ವಾವಲಂಬಿ, ಸಂಪತ್‌ಭರಿತ, ಅಂತರ್ರಾಷ್ಟ್ರೀಯ ವ್ಯಾಪಾರಿ, ಸಾಂಸ್ಕೃತಿಕ, ರಾಜನೀತಿಗಳ ವ್ಯಾಪಕ ಸಂಬಂಧ ಇಟ್ಟುಕೊಂಡ ಹೆಮ್ಮೆಯ ಭಾರತ ಉಪಖಂಡದ ಆರ್ಥಿಕ ವ್ಯವಸ್ಥೆಯನ್ನು, ಮುರಿದು ಹಾಕಿ, ಬರಗಾಲಗಳಿಂದ ಬರಡುಗೊಳಿಸಿ ಬ್ರಿಟಿಷ್ ಸಾಮ್ರಾಜ್ಯದ ವಸಾಹತು ದೇಶವಾಗಿ, ಗುಲಾಮದೇಶವಾಗಿ ಪರಿವರ್ತಿಸಿದ ಹೃದಯ ಬಿರಿಯುವ ಇತಿಹಾಸವನ್ನು ನಮ್ಮ ಮುಂದಿಟ್ಟಿದ್ದಾರೆ. ಬ್ರಿಟಿಶ್ ಕಂಪೆನಿಯ ದುರಾಡಳಿತ ಹಾಗೂ ದೌರ್ಜನ್ಯದ ವಿರುದ್ಧ ಸಿಡಿದೆದ್ದ ರೈತರ, ಸಿಪಾಯಿಗಳ, ರಾಜರ ಹತ್ತಾರು ಬಂಡಾಯಗಳನ್ನು ಬಣ್ಣಿಸುತ್ತಾ, 1857 ರ ಮೊದಲ ಸ್ವಾತಂತ್ರ್ಯ ಹೋರಾಟದ ಸೋಲು ಗೆಲುವುಗಳನ್ನು ತಿಳಿಸಿದ್ದಾರೆ.

ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿಯ ನಂತರ ಮೂಡಿ ಬಂದ ಬೃಹತ್ ಉತ್ಪಾದನಾ ವ್ಯವಸ್ಥೆ, ಸಂಸದೀಯ ಮಾದರಿಯ ಪ್ರಜಾಪ್ರಭುತ್ವ, ರಾಜಕೀಯದಲ್ಲಿ ಧರ್ಮ ನಿರಪೇಕ್ಷತೆ, ಪತ್ರಿಕಾ ಸ್ವಾತಂತ್ರ್ಯ, ಆಧುನಿಕ ಇತಿಹಾಸ, ಸಾಹಿತ್ಯ ಹಾಗೂ ತತ್ವಜ್ಞಾನಗಳಿಂದ ಪ್ರಭಾವಿತರಾದ ಇಂಗ್ಲೀಷ್ ಶಿಕ್ಷಣ ಪಡೆದ ಭಾರತದ ಹೊಸ ತಲೆಮಾರಿನ ಜನರು ಕೈಗೊಂಡ ಸಮಾಜ ಸುಧಾರಣಾ ಚಳುವಳಿಗಳು ಮುಂದಿನ ಸ್ವಾತಂತ್ರ್ಯ ಹೋರಾಟದ ವಾದ ಕೈಗಾರಿಕಾಕರಣದಿಂದಾಗಿ ಹೊರಹೊಮ್ಮಿದ ಉದಯೋನ್ಮುಖ ಕೈಗಾರೀಕೋದ್ಯಮಿಗಳು ಮತ್ತು ಕಾರ್ಮಿಕರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಹೊಸ ಶಕ್ತಿಗಳಾಗಿ ಪ್ರವೇಶಿಸಿದುದನ್ನೂ, ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ಇವರ ನೇತೃತ್ವದ ಕಾಂಗ್ರೆಸ್ ನ ಮನವಿಗಳ ಮಜಲನ್ನು ವರ್ಣಿಸಿದ್ದಾರೆ. 20 ನೇ ಶತಮಾನದ ಪ್ರಾರಂಭದಲ್ಲಿ ಲಾಲ ಲಜಪತರಾಯ್, ಬಿಪಿನ್ ಚಂದ್ರಪಾಲ್, ಬಾಲ ಗಂಗಾಧರ ತಿಲಕ್ (ಲಾಲ್-ಪಾಲ್-ಬಾಲ್) ರಂತಹ ತೀವ್ರಗಾಮಿಗಳ ನೇತೃತ್ವದ ಕಾಂಗ್ರೇಸ್‌ನ ಕಾಲದಲ್ಲಿ ಉಕ್ಕೇರಿ ಬಂದ ರಾಷ್ಟ್ರೀಯ ಚಳುವಳಿಯ, ಅದರಲ್ಲಿ ವೀರಾವೇಶದಿಂದ ಧುಮುಕಿದ ಕೈಗಾರಿಕಾ ಕಾರ್ಮಿಕರ ಸ್ಫೂರ್ತಿದಾಯಕ ಚರಿತ್ರೆಯನ್ನು ದಾಖಲಿಸಿದ್ದಾರೆ. ನಂತರದ ಗಾಂಧೀಯುಗದ ಸ್ವದೇಶಿ, ಅಸಹಕಾರ, ಕಾನೂನು ಭಂಗ ಚಳುವಳಿಗಳ ಆಳ ವಿಸ್ತಾರಗಳನ್ನು ತಿಳಿಸಿದ್ದಾರೆ.

1917 ರಲ್ಲಿ ನಡೆದ ರಷ್ಯಾದ ಅಕ್ಟೋಬರ್ ಕ್ರಾಂತಿಯ ನಂತರ 1920 ರಲ್ಲಿ ಸ್ಥಾಪನೆಗೊಂಡ ಭಾರತದ ಕಮ್ಯುನಿಸ್ಟ್ ಪಕ್ಷದ ಆಶ್ರಯದಲ್ಲಿ ನಡೆದ ಸಮಾಜವಾದಿ ಚಳುವಳಿಗಳನ್ನು ಮತ್ತು ಅದೇ ವರ್ಷ ಸ್ಥಾಪನೆಗೊಂಡ ಅಖಿಲ ಭಾರತ ಕಾರ್ಮಿಕರ ಸಂಘಟನೆಗಳ ಒಕ್ಕೂಟ (ಎ.ಐ.ಟಿ.ಯು.ಸಿ) ಮೂಲಕ ನಡೆದ ಕಾರ್ಮಿಕ ಚಳುವಳಿಗಳನ್ನು, ಭಗತ್ ಸಿಂಗ್‌ರಂತಹ ಯುವ ಕ್ರಾಂತಿಕಾರಿಗಳ ಹೋರಾಟಗಳನ್ನು, ವಿವಿಧ ಪ್ರದೇಶಗಳಲ್ಲಿನ ಆದಿವಾಸಿ ದಂಗೆಗಳನ್ನು, ಸಂಸ್ಥಾನಗಳಲ್ಲಿ ಅರಸೊತ್ತಿಗೆಯ ವಿರುದ್ಧ ನಡೆಯುತ್ತಿದ್ದ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಮನಮುಟ್ಟುವಂತೆ ವಿವರಿಸಿದ್ದಾರೆ.

1930 ರ ದಶಕದಲ್ಲಿನ ಜಾಗತಿಕ ಆರ್ಥಿಕ ಮುಗ್ಗಟ್ಟು, ಜರ್ಮನಿಯಲ್ಲಿ ಹಿಟ್ಲರನ, ಇಟಲಿಯಲ್ಲಿ ಮುಸೋಲೋನಿಯ, ಜಪಾನಿನಲ್ಲಿ ಹಿರೊಹಿಟೋವಿನ ಸರ್ವಾಧಿಕಾರಿ ಪ್ರಭುತ್ವಗಳ ಯುದ್ಧಕೋರತನ ಹಾಗೂ ಜನಾಂಗ ದ್ವೇಷ, ಈ ದುಷ್ಟ ಕೂಟಗಳನ್ನು ಎದುರಿಸಲು ಜಗತ್ತಿನಾದ್ಯಂತ ಫ್ಯಾಸಿಸ್ಟ್ ವಿರೋಧಿ ವಿಶಾಲ ತಳಹದಿಯ ಐಕ್ಯರಂಗ, ಭಾರತದಲ್ಲಿಯೂ ಕಾಂಗ್ರೆಸ್-ಕಮ್ಯುನಿಸ್ಟರ ನಡುವಿನ ಐಕ್ಯರಂಗದ ಪ್ರಯತ್ನಗಳು, ಆ ಕಾಲದಲ್ಲಿ ಸ್ಥಾಪಿಸಲ್ಪಟ್ಟ ಅಖಿಲ ಭಾರತ ರೈತ ಸಂಘ, ವಿದ್ಯಾರ್ಥಿಗಳ ಸಂಘ, ಪುರೋಗಾಮಿ ಬರಹಗಾರರ ಸಂಘ, ಜನಕಲಾ ಮಂಡಳಿ (ಇಪ್ಟಾ) ಮುಂತಾದವುಗಳ ಆಶ್ರಯದಲ್ಲಿ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ನಡೆದ ನಿರಂತರ ಹೋರಾಟಗಳನ್ನು ಲೇಖಕರು ಚಿತ್ರಿಸಿದ್ದಾರೆ. ಈ ಮಧ್ಯೆ ಕಾಂಗ್ರೆಸ್ ರಾಜಕೀಯದಿಂದ ಬೇಸತ್ತ ಸುಭಾಷ್ ಚಂದ್ರ ಭೋಸ್ ವಿದೇಶಗಳಿಗೆ ಹೋಗಿ ಗಡೀಯಾಚೆ ಭಾರತ ಸರಕಾರವನ್ನು ಸ್ಥಾಪಿಸಿ, ಬ್ರಿಟಿಷರ ವಿರುದ್ಧ ನಡೆಸಿದ ಸಶಸ್ತ್ರ ಹೋರಾಟದ ವೀರಕತೆಯನ್ನು ಬರೆದಿದ್ದಾರೆ. ಸಾಮಾಜಿಕ ನ್ಯಾಯಕ್ಕಾಗಿ ಬಾಬಾ ಸಾಹೇಬ ಅಂಬೇಡ್ಕರ್ ಅವರು ಕೈಗೊಂಡ ದಲಿತರ ಚಳುವಳಿಗಳನ್ನು ಪರಿಚಯಿಸಿದ್ದಾರೆ. ನಡುನಡುವೆ ಭುಗಿಲೇಳುತ್ತಿದ್ದ ಕೋಮು ರಾಜಕೀಯ, ಜಾತಿ ರಾಜಕೀಯ, ರಾಷ್ಟ್ರೀಯ ಚಳುವಳಿಯ ಏಳುಬೀಳುಗಳಲ್ಲಿ ಉದ್ಯಮಿಗಳ ಸಂದರ್ಭ ಸಾಧಕತನ, ಭೂಮಾಲಿಕರ ನಿಷ್ಕ್ರಿಯತೆ, ಸಂಸ್ಥಾನಗಳ ರಾಜರುಗಳ ಬ್ರಿಟಿಶರ ಪರ ಒಲವು, ಇತ್ಯಾದಿ ಆತಂಕಕಾರಿ ಅಂಶಗಳನ್ನು ಎತ್ತಿ ತೋರಿಸಿದ್ದಾರೆ. 1942 ರ "ಮಾಡು ಅಥವಾ ಮಡಿ" ಎಂಬ 'ಕ್ವಿಟ್ ಇಂಡಿಯಾ' ಚಳುವಳಿಯ ಮಹತ್ವವನ್ನು ತಿಳಿಸಿದ್ದಾರೆ.

1940 ರ ದಶಕದಲ್ಲಿ ಯುದ್ಧಾನಂತರ ಸ್ಫೋಟಗೊಂಡ ಕಾರ್ಮಿಕರ ಹೋರಾಟ, ರೈತರ ಹೋರಾಟ, ರೈಲ್ವೆ-ಅಂಚೆ-ತಂತಿ ನೌಕರರ ಹೋರಾಟ, ಹಡಗು ಪಡೆ ಮತ್ತು ವಿಮಾನ ಪಡೆಗಳಲ್ಲಿನ ದಂಗೆಗಳನ್ನು ವಿವರಿಸುತ್ತಾ, ಬ್ರಿಟಿಶರಿಗೆ ಮುಂದೆ ಭಾರತವನ್ನು ಆಳಲು ಅಸಾಧ್ಯವಾದ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಬ್ರಿಟಿಶರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಪಕ್ಷದವರನ್ನು ಮಾತುಕತೆಗೆ ಕರೆದು, ಉಕ್ಕೇರಿ ಬರುತ್ತಿದ್ದ ಕ್ರಾಂತಿಕಾರಿ ಶಕ್ತಿಗಳನ್ನು ದಮನಗೊಳಿಸಿ, ಮುಂದೆ ಕೋಮು ಗಲಭೆಗಳ ಸ್ಫೋಟಕ ಸ್ಥಿತಿಯನ್ನು ನಿರ್ಮಿಸಿ, ದೇಶವನ್ನು ಭಾರತ-ಪಾಕಿಸ್ಥಾನ ಎಂದು ವಿಭಜಿಸಿ, ತಮ್ಮ ವ್ಯಾಪಾರಿ ಹಿತಾಸಕ್ತಿಗಳನ್ನು ಉಳಿಸಿಕೊಂಡು ಭಾರತ ಬಿಟ್ಟು ಹೋಗಿ ಸಂತೋಷ ಹಾಗೂ ದುರಂತ ಮಿಶ್ರ ಸ್ವಾತಂತ್ರ್ಯ ಹೋರಾಟದ ಕೊನೆಯ ಹಂತವನ್ನು ಮನಮುಟ್ಟುವಂತೆ ಲೇಖಕರು ಬರೆದಿದ್ದಾರೆ. ಜೊತೆಗೇ, ಸ್ವಾತಂತ್ರ್ಯ ಹೋರಾಟದ ಉದ್ದಕ್ಕೂ, ವಿವಿಧ ಜಾತಿ, ಮತ ಧರ್ಮ, ಭಾಷೆಗಳ ಜನರಲ್ಲಿ ಮೂಡಿಬಂದ ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆ, ಕೋಮು ಸೌಹಾರ್ದತೆ, ಆಧುನಿಕತೆ, ಧರ್ಮ ನಿರಪೇಕ್ಷತೆ, ಪ್ರಜಾಪ್ರಭುತ್ವ, ಸಮಾಜವಾದ, ಆರ್ಥಿಕ-ರಾಜಕೀಯ-ಸಾಮಾಜಿಕ ನ್ಯಾಯ ಹಾಗೂ ಸಮಾನತೆ ಮುಂತಾದ ಆದರ್ಶಗಳನ್ನು ಎತ್ತಿ ತೋರಿಸಿದ್ದಾರೆ. ಇವುಗಳನ್ನು ಉಳಿಸಿ ಬೆಳೆಸಿಕೊಳ್ಳಲು ಸಂಧಾನಗಳ ಹಾಗೂ ಹೋರಾಟಗಳ ಮಾರ್ಗಗಳು ಸರ್ವ ಸ್ವೀಕೃತವಾಗಿವೆ ಎನ್ನುತ್ತಾರೆ ಲೇಖಕರು.

ಕೊನೆಯಲ್ಲಿ ಕ್ರಿ.ಶ.1487 ರಿಂದ 1948 ರ ವರೆಗೆ ಈ ಪುಸ್ತಕದಲ್ಲಿ ಪ್ರಸ್ತಾವನೆಗೊಂಡಿರುವ ಪ್ರಮುಖ ಘಟನೆಗಳ ಕಾಲಸೂಚಿಯನ್ನು ಕೊಡಲಾಗಿದೆ. 50 ಕ್ಕೂ ಹೆಚ್ಚಿನ ಆಧಾರ ಗ್ರಂಥಗಳನ್ನು ಪರಿಚಯಿಸಲಾಗಿದೆ. ಈ ಪುಸ್ತಕ 1991 ರಲ್ಲಿ ಮೊದಲನೇ ಮುದ್ರಣ ಮತ್ತು 1996 ರಲ್ಲಿ ಎರಡನೇ ಮುದ್ರಣ ಕಂಡಿದೆ. ಇದರ ಕುರಿತು ಪ್ರಜಾವಾಣಿ, ಕನ್ನಡ ಪ್ರಭ, ಉದಯವಾಣಿ, ಸಂಯುಕ್ತ ಕರ್ನಾಟಕ, ಹೊಸದಿಂಗತ, ಮುಂಗಾರು, ಲಂಕೇಶ್ ಪತ್ರಿಕೆ, ಐಕ್ಯರಂಗ ಮುಂತಾದ ಪತ್ರಿಕೆಗಳಲ್ಲಿಯೂ, ಕನ್ನಡ ವಿಶ್ವವಿದ್ಯಾಲಯದ ವಾರ್ಷಿಕ ಸಂಚಿಕೆಯಲ್ಲಿಯೂ, ಕನ್ನಡ ಸಾಹಿತ್ಯ ಸಮೀಕ್ಷೆಯಲ್ಲಿಯೂ ಪ್ರಕಟವಾದ ಪ್ರಬುದ್ಧ ವಿಮರ್ಶೆಗಳ ಮುಖ್ಯಾಂಶಗಳನ್ನು ಈ ಪುಸ್ತಕದಲ್ಲಿ ಪ್ರಕಟಿಸಲಾಗಿದೆ. ಹಾಗೆಯೇ ನಾಡಿನ ವಿವಿಧ ಕ್ಷೇತ್ರಗಳಲ್ಲಿನ ಗಣ್ಯರಾದ ಎಚ್.ಎಸ್.ದೊರೆಸ್ವಾಮಿ, ಎಲ್. ಶ್ರೀಕಂಠಯ್ಯ, ಕೆ.ವಿ. ಸುಬ್ಬಣ್ಣ, ಡಾ.ಜಿ. ರಾಮಕೃಷ್ಣ, ವ್ಯಾಸರಾಯ ಬಲ್ಲಾಳ, ಹಾ.ಮಾ.ನಾಯಕ, ಶ್ರೀನಿವಾಸ ಹಾವನೂರ, ಎಸ್.ವಿ. ದೇಶಿಕಾಚಾರ್ ಮುಂತಾದವರ ವಿಮರ್ಶೆಗಳ ಮುಖ್ಯಾಂಶಗಳೂ ಇದರಲ್ಲಿ ಪ್ರಕಟವಾಗಿವೆ.

ಎಸ್.ಪಿ. ಶಂಕರನಾರಾಯಣ ರಾವ್ (ಜನನ: 1928) ಅವರು ವಿದ್ಯಾರ್ಥಿಯಾಗಿರುವಾಗ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಜೈಲ ವಾಸ ಅನುಭವಿಸಿದರು. ಮೈಸೂರಿನಲ್ಲಿ ಸ್ವಲ್ಪ ಕಾಲ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾಗಿದ್ದರು. ಇವರು ಮಾನವಶಾಸ್ತ್ರದಲ್ಲಿ ಎಂ.ಎ. ಪದವೀಧರರಾಗಿ ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ಗ್ರಾಮೀಣ, ಆದಿವಾಸಿ ಸಮಾಜಗಳ ಅಧ್ಯಯನ ನಡೆಸಿ, ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಇವರ ಪ್ರಸ್ತುತ ಪುಸ್ತಕವನ್ನು ಬೆಂಗಳೂರಿನ ನವಕರ್ನಾಟಕ ಪ್ರಕಾಶನದವರು ಅಂದವಾಗಿ ಅಚ್ಚು ಹಾಕಿಸಿದ್ದಾರೆ. ಬೆಲೆ ಸಾದಾ ಪ್ರತಿ ರೂ. 110, ಉತ್ತಮ ಪ್ರತಿ ರೂ.150. ಸ್ವಾತಂತ್ರ್ಯ ಹೋರಾಟದ ಕುರಿತು ಸಮಗ್ರ ಭಾರತೀಯ ದೃಷ್ಟಿಕೋನದಿಂದ ಯಾವುದೇ ಪೂರ್ವಾಗ್ರಹವಿಲ್ಲದೆ ಉದ್ವೇಗದ ಸೋಂಕಿಲ್ಲದ, ಸ್ಫೂರ್ತಿ ತುಂಬುವ ಈ ಅಪರೂಪದ ಪುಸ್ತಕವನ್ನು, ಇಂತಹದೇ ವಿಶ್ವಾಸಾರ್ಹ ಪುಸ್ತಕಗಳ ಜೊತೆಗೆ ರಾಜ್ಯಾದ್ಯಂತ ವಿವಿದೆಡೆಗಳಲ್ಲಿ ಸಮೂಹ ಅಧ್ಯಯನ ನಡೆಸುವುದು ಉಪಯುಕ್ತ ಹಾಗೂ ಅಗತ್ಯ. □

.... ಉಪನ್ಯಾಸಕರ ನೇಮಕಾತಿಗಾಗಿಯೂ ಸೆರೆವಾಸ

ಪುಟ 1 ರಿಂದ

ಅಧಿಕಾರವನ್ನು ಸರಕಾರಿ ಕಾಲೇಜುಗಳ ಪ್ರಿನ್ಸಿಪಾಲರಿಗೆ ಕೊಡಲಾಗಿತ್ತು. ಜನತಾದಳ ಸರಕಾರ ಸಕಾರಣ ಕೊಡದೆ ಅಧಿಕಾರವನ್ನು ರದ್ದುಪಡಿಸಿದೆ. ಅರೆಕಾಲಿಕ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ವಿಚಾರ ಸರಿಯಿಲ್ಲದಿದ್ದರೂ ಕೂಡ, ಖಾಯಂ ಉಪನ್ಯಾಸಕರ ಅಭಾವವಿದ್ದಾಗ, ವಿದ್ಯಾರ್ಥಿಗಳ ಅಭ್ಯಾಸಕ್ಕೆ ತೊಂದರೆಯಾಗದಂತೆ ತಾತ್ಪೂರ್ತಿಕವಾಗಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವುದರಲ್ಲೇನೂ ಅಭ್ಯಂತರವಿಲ್ಲ. ಆದರೆ ಸರಕಾರದ ಹಣ ಉಳಿಸುವಿಕೆಗಾಗಿ ಖಾಯಂ ಉಪನ್ಯಾಸಕರನ್ನು ನೇಮಿಸದೇ, ಅರೆಕಾಲಿಕ ಉಪನ್ಯಾಸಕರನ್ನೇ ನೇಮಿಸಿಕೊಳ್ಳುವ ಪರಿಪಾಠ ಮಾತ್ರ ಅಪಾಯಕಾರಿಯಾಗಿದೆ.

ಶಿಕ್ಷಕರ-ಉಪನ್ಯಾಸಕರ ನೇಮಕಾತಿ ಕುರಿತು ಸರಕಾರ ಸುಳ್ಳು ಹೇಳಿಕೆಗಳನ್ನು ನೀಡುತ್ತಿದೆ. ಸರಕಾರದ ಈ ವಿಳಂಬ ನೀತಿ ಖಂಡನೀಯ. ತಮ್ಮ ಮಕ್ಕಳ ಅಭ್ಯಾಸಕ್ಕೆ ಈ ನೀತಿ ಅಪಾಯಕಾರಿಯಾಗಿದೆ. ಪಾಠಗಳ ಸರಿಯಾದ ಅಭ್ಯಾಸವಿಲ್ಲದೆ ಮಕ್ಕಳು ಖಾಸಗಿ ಟ್ಯೂಶನ್‌ಗಳಿಗೆ ಮೊರೆ ಹೋಗಬೇಕಾಗುತ್ತದೆಂದು ತಿಳಿದ ಪಾಲಕರು ಸರಕಾರದ ವಿರುದ್ಧ ಹೋರಾಡಬೇಕು. ಹಾಗೆಯೇ ಶಾಸಕರೂ ಕೂಡ ಸರಕಾದರ ಮೇಲೆ ಒತ್ತಾಯ ತರಬೇಕಾಗಿರುವುದು ಅವರ ಕರ್ತವ್ಯ.

ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗುವಂತೆ ನೋಡಿಕೊಳ್ಳುವ ಜವಾಬ್ದಾರಿ ಪಾಲಕರಿಗೂ ಇರಬೇಕಾಗಿರುವುದು ಅಗತ್ಯ. ಪಾಲಕರಾಗಲೀ, ಶಾಸಕರಾಗಲೀ, ಸರಕಾರವಾಗಲೀ, ಶಿಕ್ಷಣ ಕ್ಷೇತ್ರದಲ್ಲಿ ಉದ್ಭವಿಸಿರುವ ಈ ಸಮಸ್ಯೆಯತ್ತ ಗಮನ ಹರಿಸಬೇಕಾಗಿತ್ತು. ಆದರೆ ಇದನ್ನು ಎತ್ತಿಕೊಂಡವರು ಸ್ವತಃ ವಿದ್ಯಾರ್ಥಿಗಳೇ. ಇದು ನಮ್ಮ ಸಮಾಜದಲ್ಲಿಯ ಕೊರತೆಯನ್ನು ತೋರ್ಪಡಿಸುತ್ತದೆ.

ಖಾಯಂ ಉಪನ್ಯಾಸಕರ ನೇಮಕಾತಿಗಾಗಿ, ಅರೆಕಾಲಿಕ ಉಪನ್ಯಾಸಕರ ನೇಮಕದ ಮೇಲಿನ ನಿರ್ಬಂಧ ರದ್ದತಿಗಾಗಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) 8-10-97 ರಂದು ಕಾಲೇಜು ಶಿಕ್ಷಣ ಆಯುಕ್ತರ ಕಚೇರಿಗೆ ಮುತ್ತಿಗೆ ಹಾಕಿದಾಗ ವಿದ್ಯಾರ್ಥಿನಿಯರನ್ನೊಳಗೊಂಡು 101 ವಿದ್ಯಾರ್ಥಿಗಳನ್ನು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಬಂಧಿಸಿಡಲಾಯಿತು. ಉತ್ಸಾಹದಿಂದಲೇ, ಹೆಚ್ಚಿನ ದೃಢ ನಿರ್ಧಾರದಿಂದಲೇ ಜೈಲಿನಿಂದ ಜಾಮೀನಿನ ಮೇಲೆ ವಿದ್ಯಾರ್ಥಿಗಳು ಹೊರಗೆ ಬಂದಿದ್ದಾರೆ. ವಿದ್ಯಾರ್ಥಿಗಳ ಈ ಬಂಧನ ಪಾಲಕರ ಕಣ್ಣು ತೆರೆದಂತಾಗಿದೆ. ಈ ಸಮಸ್ಯೆಯತ್ತ ಅವರೂ ಗಮನ ಹರಿಸುವಂತಾಗಿದೆ. ತಮ್ಮ ಮಕ್ಕಳು ಜೈಲಿಗೆ ಹೋಗಿರುವುದನ್ನು ಕಂಡ ಕೆಲವು ಪಾಲಕರು ಸಿಟ್ಟಿಗೆದ್ದಿದ್ದರೂ ಕೂಡ, ಸಮಸ್ಯೆಯನ್ನು ಮನಗಂಡ ನಂತರ ಉಲ್ಲಾಸದಿಂದಲೇ ಮಕ್ಕಳಿಗೆ ಪ್ರೋತ್ಸಾಹ ನೀಡಿರುವರು.

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ಕೈಗೊಂಡಿರುವ ಈ ಪ್ರಶ್ನೆ ಮಕ್ಕಳ ಭವಿಷ್ಯದ ಕುರಿತು ಚಿಂತಿಸಬೇಕಾಗಿರುವ ಎಲ್ಲಾ ಪಾಲಕರ ಪ್ರಶ್ನೆ ಆಗಿದೆ. ಈ ಪ್ರಶ್ನೆಯ ಕುರಿತು ರಾಜ್ಯಾದ್ಯಂತ ಶಿಸ್ತುಬದ್ಧ, ಬಲಿಷ್ಠ ಐಕ್ಯ ಚಳುವಳಿ ಮೂಡಿಬರುವಂತೆ ಎಸ್.ಎಫ್.ಐ ಸಂಘಟನೆ ಬೆಳೆಸಬೇಕು. ಉಪನ್ಯಾಸಕರಾಗಲಿಚ್ಛಿಸುವ ನಿರುದ್ಯೋಗಿ ಪದವೀಧರರೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬೇಕು. ಈ ಪ್ರಶ್ನೆಯನ್ನೆತ್ತಿಕೊಂಡು ಸಾಮೂಹಿಕ ಚಳುವಳಿ ರೂಪಿಸಲು ಒಳ್ಳೆ ಅವಕಾಶವಿದೆ. ಆ ಮೂಲಕ ವಿದ್ಯಾರ್ಥಿ, ಪಾಲಕರು, ಪದವೀಧರರ ಮಧ್ಯೆ ಐಕ್ಯತೆ ಮೂಡಿಸುವ ಅವಕಾಶವಿದೆ. ಎಸ್.ಎಫ್.ಐ. ಮುಖಂಡತ್ವ ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕು. ವಿಶಾಲ ಚಳುವಳಿಯ ಮೂಲಕ ತಮ್ಮ ಬೇಡಿಕೆ ಪಡೆಯಲು ಮುಂದಾಗಬೇಕು.

ಸಿ.ಪಿ.ಐ.(ಎಂ) ಪಕ್ಷದ ಉಡುಪಿ ತಾಲೂಕು ಸಮ್ಮೇಳನ

ಭಾರತ ಕಮ್ಯುನಿಸ್ಟ್ ಪಕ್ಷದ ಉಡುಪಿ ತಾಲೂಕು 16 ನೇ ಸಮ್ಮೇಳನವು ಅಕ್ಟೋಬರ್ 5 ರಂದು ನಡೆಯಿತು. ಸಮ್ಮೇಳನದ ಆರಂಭದಲ್ಲಿ ಪಕ್ಷದ ಹಿರಿಯ ಸದಸ್ಯ ರಾಮ ಕುಂದರ್, ಪಡುಬಿದ್ರಿಯವರು ಧ್ವಜಾರೋಹಣ ಮಾಡಿದರು. ಪಕ್ಷದ ದ.ಕ.ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನರು ಈ ಸಮ್ಮೇಳನವನ್ನು ಉದ್ಘಾಟಿಸಿದರು. ಕೋಮುವಾದಿ ಮತ್ತು ಭ್ರಷ್ಟಾಚಾರ ಹಗರಣಗಳ ಪ್ರಾತಿನಿಧಿಕ ರಾಜಕೀಯ ಪಕ್ಷಗಳನ್ನು ತಡೆಗಟ್ಟಲು ಕಮ್ಯುನಿಸ್ಟ್ ಪಕ್ಷದ ಸದಸ್ಯರು ಸಕ್ರಿಯವಾಗಿ ರಾಜಕೀಯ ಪ್ರಕ್ರಿಯೆ ಆರಂಭಿಸಬೇಕೆಂದು ಕರೆ ನೀಡಿದರು.

ಸಿ.ಪಿ.ಐ.(ಎಂ) ಪಕ್ಷದ ಕುಂದಾಪುರ ತಾಲೂಕು ಕಾರ್ಯದರ್ಶಿ ಶ್ರೀ.ಕೆ.ಶಂಕರ್ ರವರು ಮಾತಾಡಿ, ಪಕ್ಷ ಸದಸ್ಯರು ಪಕ್ಷದ ಕೆಲಸಗಳನ್ನು ನಿರ್ವಹಿಸುವ ಕ್ರಮವಿಧಾನಗಳನ್ನು ವಿವರಿಸಿ, ಪಕ್ಷದ ಎಲ್ಲಾ ಸದಸ್ಯರು ತಮ್ಮ ಪ್ರದೇಶಗಳಲ್ಲಿ ಜನ ಸಂಪರ್ಕ ಮತ್ತು ಜನಪರ ಚಳವಳಿಗಳನ್ನು ಮೂಲಕ ಬಲಿಷ್ಠವಾಗಿ ಬೆಳೆಸಲು ಕರೆ ನೀಡಿದರು.

ತಾಲೂಕು ಕಾರ್ಯದರ್ಶಿ ಪಿ. ವಿಶ್ವನಾಥ ರೈ ಯವರು ತಾಲೂಕಿನಲ್ಲಿ ಪಕ್ಷದ ಚಟುವಟಿಕೆಗಳ ವರದಿ ನೀಡಿದರು.

ಸಮ್ಮೇಳನದಲ್ಲಿ ಎಂಟು ಸದಸ್ಯರಿರುವ ಹೊಸ ತಾಲೂಕು ಸಮಿತಿಯನ್ನು ಆಯ್ಕೆ ಮಾಡಲಾಯಿತು. ಮತ್ತು ಪಿ. ವಿಶ್ವನಾಥ ರೈಯವರು ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಉಡುಪಿ ನಗರದ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಅವಶ್ಯವಾದ ನೆರಳು, ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ, ಉಡುಪಿ ನಗರದ ಮುಖ್ಯ ಕೇಂದ್ರಗಳಲ್ಲಿ ಸಾರ್ವಜನಿಕ ಶೌಚಾಲಯ ಒದಗಿಸುವಂತೆ, ಬನ್ನಂಜೆ, ಕಲ್ಸಂಕ, ಕಡಿಯಾಳಿ ರಸ್ತೆ ಅಗಲಗೊಳಿಸುವಂತೆ, ವಾರಾಹಿ ನೀರಾವರಿ ಯೋಜನೆಯನ್ನು ಕೂಡಲೇ ಮುಗಿಸುವಂತೆ ಮತ್ತು ಉಡುಪಿ ತಾಲೂಕಿನಾದ್ಯಂತ ಕಾರ್ಮಿಕರನ್ನು, ರೈತರನ್ನು, ಕೃಷಿ ಕೂಲಿಕಾರರನ್ನು ಸಂಘಟಿಸಿ, ಪಕ್ಷವನ್ನು ವಿಸ್ತರಿಸಿ ಬಲಪಡಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಪಿಲಾರು ಶಾಖಾ ಸಮ್ಮೇಳನ

ಸೆ. 16 ರಂದು ಪಿ.ಪರಮೇಶ್ವರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆದ ಪಕ್ಷದ ಶಾಖಾ ಸಮ್ಮೇಳನವು ಪಿಲಾರು ಪ್ರದೇಶಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಸರಿಪಡಿಸಲು, ರಸ್ತೆಯ ಬದಿಗೆ ದಾರಿ ದೀಪಗಳನ್ನು ತುರ್ತು ಹಾಕಬೇಕು. ಪಿಲಾರು ಲಕ್ಷ್ಮಿ ಗುಡ್ಡೆಯ ಸರಕಾರಿ ಸ್ಥಳದಲ್ಲಿ ಮನೆಕಟ್ಟಿದವರಿಗೆ ಹಕ್ಕು ಪತ್ರ ಕೊಡಬೇಕು. ಗುಡಿಸಲು ಕಟ್ಟಿದವರಿಗೆ ಸ್ಥಳ ಖಾಯಂಗೊಳಿಸ ಬೇಕು ಹಾಗೂ ಗುಡಿಸಲು ಕಟ್ಟಿದ ನಿರ್ವಸಿತರಿಗೆ ಸರಕಾರಿ ಅಧಿಕಾರಿಗಳು ಯಾವುದೇ ರೀತಿಯ ಕಿರುಕುಳ ಕೊಡಬಾರದು ಎಂದು ರಾಜ್ಯ ಸರಕಾರವನ್ನು ಜಿಲ್ಲಾಧಿಕಾರಿಯನ್ನು ಸಮ್ಮೇಳನವು ಒತ್ತಾಯಿಸಿದೆ.

ಸಾವಿರಾರು ಜನಸಂಖ್ಯೆ ಇರುವ ಹಾಗೂ ದಿನದಿಂದ ದಿನಕ್ಕೆ ಬೆಳೆಯುವ ಪ್ರದೇಶವಾದ ಲಕ್ಷ್ಮಿ ಗುಡ್ಡೆಗೆ ಸಂಪರ್ಕ ಕಲ್ಪಿಸಲು, ಪಿಲಾರು ಪ್ರಕಾಶನಗರ ಹೈವೆ ರಸ್ತೆಯಿಂದ ಲಕ್ಷ್ಮಿ ಗುಡ್ಡೆಗೆ ಮಾರ್ಗ ಒಂದು ರಚಿಸಬೇಕೆಂದು ಸಿ.ಪಿ.ಐ (ಎಂ) ಪಿಲಾರು ಪ್ರದೇಶ ಸಮ್ಮೇಳನವು ರಾಜ್ಯ ಸರಕಾರವನ್ನು ಹಾಗೂ ಜಿಲ್ಲಾಡಳಿತವನ್ನು ಮನವಿ ಮೂಲಕ ಒತ್ತಾಯಿಸಿದೆ.

ಹಾಗೂ ಪಿಲಾರು ಗೋಪಿ ಶೆಟ್ಟಿಯವರ ಮನೆ ಬಳಿಯ ಪಿಲಾರು ಬೈಲಿನ ಸಣ್ಣ ತೋಡಿನ ಹೋಗಿ ತೆಗೆದು, ದೇಲಂತ ಬೆಟ್ಟುವರೆಗೆ ದುರಸ್ತಿಗೊಳಿಸಿ, ರೈತರಿಗೆ ಸಾಗುವಳಿ ಮಾಡಲು ಅನುಕೂಲ ಮಾಡಿಕೊಡಲು ಕೂಡ ಸಮ್ಮೇಳನ ಒತ್ತಾಯಿಸಿದೆ.

3 ವರ್ಷದ ಚಟುವಟಿಕೆಗಳ ವರದಿಯನ್ನು ಕಾರ್ಯದರ್ಶಿ ಪಿ. ಗಂಗಯ್ಯ ಗಟ್ಟಿ ಮಂಡಿಸಿದರು. ವರದಿಯ ಚರ್ಚೆಯಲ್ಲಿ ಪುರಂದರ ದಾಸ್, ವಾಲ್ಟ ಟೆಲ್ಲಿಸ್. ನಂದಪ್ಪ ಗಟ್ಟಿ, ಡಾನಿಯಲ್ ಭಾಗವಹಿಸಿದರು.

ಪಕ್ಷದ ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ ಭಾಗವಹಿಸಿ ಮಾತನಾಡಿದರು.

ಸದಸ್ಯರಾದ ಮಂಜಪ್ಪ ಹಾಗೂ ಸಂಜೀವ ಪಿಲಾರು ಉಪಸ್ಥಿತರಿದ್ದರು.

ಚಂದ್ರನಗರ ಶಾಖಾ ಸಮ್ಮೇಳನ

ಗುಲ್ಬರ್ಗಾ: ಅಕ್ಟೋಬರ್ ಒಂದರಂದು ಚಂದ್ರ ನಗರ ಶಾಖೆಯ ಸಿಪಿಐ(ಎಂ) ಪಕ್ಷದ ಸಮ್ಮೇಳನವು ನಡೆಯಿತು. ಧ್ವಜಾರೋಹಣವನ್ನು ಗ್ರಾಮದ ಹಿರಿಯರಾದ ಹಣಮಂತಪ್ಪ ಹಳಗುಣತಿಯವರು ನೆರವೇರಿಸಿದರು. ಸಮ್ಮೇಳನದ ಪೂರ್ವದಲ್ಲಿ ಬಹಿರಂಗ ಸಭೆ ನಡೆಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ, ರೈತ ಸಂಘದ ವಿರುಪಾಕ್ಷ ತಡಕಲ್ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಹಣಮಂತ ಜಾಧವ ವಹಿಸಿದ್ದರು.

ಸಮ್ಮೇಳನವು ಕಮಲಾಪುರ ವಲಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಿತು. ಶಾಖೆಯ ಕಾರ್ಯದರ್ಶಿಯಾಗಿ ಭೀಮಶಾದೂಡಗುಲಕರ್ ಆಯ್ಕೆಯಾದರು.

ಧಾರವಾಡದಲ್ಲಿ ಮತ್ತೆ 'ಸಮುದಾಯ'ದ ಚಟುವಟಿಕೆಗಳು

ಸಮುದಾಯದ ಪ್ರಾರಂಭದಿಂದಲೂ ಅಸ್ತಿತ್ವದಲ್ಲಿದ್ದ ಹುಬ್ಬಳ್ಳಿ-ಧಾರವಾಡ ಘಟಕದ ಸರ್ವಸದಸ್ಯರ ವಿಶೇಷ ಸಭೆಯು ಇತ್ತೀಚಿಗೆ ನಡೆದು ಸಂಘಟನೆಯನ್ನು ಪುನಃಶ್ಚೇತನಗೊಳಿಸಲಾಯಿತು. ಸ್ವಾತಂತ್ರ್ಯ-50, ಸಮುದಾಯ-20 ಮತ್ತು ಸಫ್ದರ್ ಹಶ್ಮಿ ಸ್ಮಾರಕ ಸಮಗ್ರತಾ ಉತ್ಸವ-10 ಇವುಗಳ ಸಂದರ್ಭ, ಮುಂದಿನ ದಿನಗಳಲ್ಲಿ ಚಿತ್ರಕಲಾ ಪ್ರದರ್ಶನ, ಬೀದಿ ನಾಟಕ ಉತ್ಸವ, ಕವಿಗೋಷ್ಠಿ, ವಿಚಾರ ಸಂಕಿರಣ, ಅಧ್ಯಯನ ಶಿಬಿರ, ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಹಮ್ಮಿಕೊಳ್ಳಲು ಸಭೆ ನಿರ್ಧರಿಸಿತು. ಅದಕ್ಕಾಗಿ ಪೂರ್ವ ಸಿದ್ಧತೆ ನಡೆಸಲು ಮೂರು ಉಪ ಸಮಿತಿಗಳನ್ನು ರಚಿಸಲಾಯಿತು.

ಸಂಯುಕ್ತ ರಂಗದ ಕೇಂದ್ರ ಸರಕಾರವು ಇತ್ತೀಚಿಗೆ ಪ್ರಸಾರ ಭಾರತಿ ಕಾಯಿದೆ ಜ್ಯಾರಿಗೊಳಿಸಿ ಆಕಾಶವಾಣಿ ಮತ್ತು ದೂರದರ್ಶನ ಮಾಧ್ಯಮಗಳನ್ನು ಅಧಿಕಾರಶಾಹಿಯಿಂದ ಮುಕ್ತಗೊಳಿಸಿ ಸ್ವಾಯತ್ತತೆ ನೀಡಲು ನಿರ್ಧರಿಸಿದುದನ್ನು ಸಭೆ ಸ್ವಾಗತಿಸಿತು. ಆದರೆ, ಈ ಮಹತ್ವದ ಸಮೂಹ ಮಾಧ್ಯಮಗಳು ರೂವರ್ಟ್, ಮುರ್ಡೋಚ್‌ರಂತಹ ಲಾಭಕೋರ ಖಾಸಗಿ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ತೆರೆದಿಡದೆ, ಶೇ. 40 ರಷ್ಟು ಇರುವ ಕಡು ಬಡವರ, ಅನಕ್ಷರಸ್ಥರ ಅಭಿವೃದ್ಧಿಗೂ, ರಾಷ್ಟ್ರೀಯ.ಭಾವೈಕ್ಯತೆಗೂ ಪ್ರೇರಿತವಾಗಿರಬೇಕೆಂದು ಸಭೆ ಅಭಿಪ್ರಾಯ ಪಟ್ಟಿತ್ತು. ಹಾಗೆಯೇ ಸ್ವಾತಂತ್ರ್ಯ:50 ರ ಅಂಗವಾಗಿ ರಾಷ್ಟ್ರಭಕ್ತಿ ಕುರಿತಾದ ಚಲನ ಚಿತ್ರ ಪ್ರದರ್ಶನದ ವೇಳೆಯಲ್ಲಿ ಕನ್ನಡದಲ್ಲಿರುವ ಶಿರೋನಾಮೆಗಳನ್ನು ಪ್ರಸಾರ ಮಾಡಬೇಕೆಂದೂ ಒತ್ತಾಯಿಸಲಾಯಿತು. ಇವೆಲ್ಲವುಗಳ ಕುರಿತು ಒಂದು ಠರಾವನ್ನು ಅಂಗೀಕರಿಸಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಮಂತ್ರಿ ಜಯಪಾಲ ರೆಡ್ಡಿ ಅವರಿಗೆ ಕಳುಹಿಸಿಕೊಡಲಾಯಿತು.

ಸಫದರ್ ಹಶ್ಮಿ ಸ್ಥಾಪಿಸಿದ ದೆಹಲಿಯ ಜನ ನಾಟ್ಯ ಮಂಚದ ಬೆಳ್ಳಿಹಬ್ಬಕ್ಕಾಗಿ ನಿಧಿ ಸಂಗ್ರಹಿಸಲು ನಿರ್ಧರಿಸಲಾಯಿತು. ಕೊನೆಯಲ್ಲಿ ಈ ಕೆಳಗಿನವರು ಪದಾಧಿಕಾರಿಗಳಾಗಿ ಆಯ್ಕೆಗೊಂಡರು.

ಗೌರವಾಧ್ಯಕ್ಷರು: ಡಾ. ಸಂಜೀವ ಕುಲಕರ್ಣಿ.
ಅಧ್ಯಕ್ಷರು: ಸಿ.ಆರ್.ಭಟ್,
ಉಪಾಧ್ಯಕ್ಷರು: ಎಂ.ಎಲ್. ಜೋಶಿ,
ಜಗದೀಶ ಮಂಗಳೂರು ಮಠ,
ಜೀವನ ಮಾನಕರ್,
ಶ್ರೀದೇವಿ ಜೋಶಿ,
ಕಾರ್ಯದರ್ಶಿ: ಬಿ.ಐ. ಈಳಿಗೇರ,
ಸಂಘಟನಾ ಕಾರ್ಯದರ್ಶಿ: ಗೋಪಾಲ ಉಣಕಲ್,
ಜಂಟಿ ಕಾರ್ಯದರ್ಶಿಗಳು: ಜಿ.ಎಲ್. ಗೌಡದ,
ಬಾಬು ಗೌಡ ಡಿ. ಪಾಟೀಲ, ವಿಜಯೇಂದ್ರ ಅರ್ಚಕ್, ವಿಠಲ ಕೊಟ್ಟಧ, ಎಂ.ಜಿ. ಬಂಗ್ಲೇವಾಲೆ ಮತ್ತು
ಕೋಶಾಧಿಕಾರಿ ಎನ್.ಎಂ. ಪಾಟೀಲ.
ಹಾಗೂ ಹುಬ್ಬಳ್ಳಿ-ಧಾರವಾಢ ಮಹಾನಗರದ 16 ಜನ ಸದಸ್ಯರ ಕಾರ್ಯಕಾರೀ ಸಮಿತಿಯನ್ನು ಆರಿಸಲಾಯಿತು. ○

ಕೇರಳದಲ್ಲಿ ಒಂದು ಪ್ರಾಮಾಣಿಕ ಆಸ್ಪತ್ರೆ

ಸಾಮಾನ್ಯವಾಗಿ ನಾವು ದಿನಪತ್ರಿಕೆಗಳಲ್ಲಿ ಆಸ್ಪತ್ರೆಗಳ ಕುರಿತು ಓದುತ್ತಿರುವುದು: ಅಂಗಾಂಗಗಳ, ಔಷಧಿಗಳ, ಆಹಾರ ಸಾಮಗ್ರಿಗಳ ಕಳ್ಳ ಮಾರಾಟ, ಖಾಸಗೀ ಪ್ರಾಕ್ಟೀಸ್ ಹಾಗೂ ಡಾಕ್ಟರರ ಮತ್ತು ದಾದಿಗಳ ಗೈರು ಹಾಜರಿ, ಅಲಕ್ಷತೆ ಚಿಕ್ಸಿತೆಗಳಿಗೆ ಉಪಕರಣಗಳ ಇತರ ಸವಲತ್ತುಗಳ ಅಭಾವ, ರೋಗಿಗಳ ಗೋಳು ಇತ್ಯಾದಿ.

ಆದರೆ, ಕೇರಳದ ಮಲಪುರಂ ಜಿಲ್ಲೆಯ ಪ್ರಸಿದ್ಧ ಕೊಟ್ಟಕಲ್ ಸಹಕಾರಿ ಆಯುರ್ವೇದ ಕಾಲೇಜ್ ಆಸ್ಪತ್ರೆ ದಕ್ಷತೆ ಹಾಗೂ ಪ್ರಾಮಾಣಿಕತೆಗೆ ಹೆಸರುವಾಸಿಯಾಗಿರುವುದು ಆಶ್ಚರ್ಯ ಹಾಗೂ ಅಭಿಮಾನವಾಗಿದೆ. ಇತ್ತೀಚೆಗೆ ನಡೆದ ಒಂದು ಘಟನೆಯಿಂದ ಈ ವಿಷಯ ಇನ್ನಷ್ಟು ಸ್ಪಷ್ಟವಾಗುವುದು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಧಾರವಾಡ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಫಕೀರಪ್ಪ ಹೋತನಹಳ್ಳಿ (ಹಾನಗಲ್-ಅಕ್ಕಿಆಲೂರು) ಅವರು ಹಿಂದೆ ಸಂಭವಿಸಿದ ಅಪಘಾತಗಳಿಂದುಂಟಾದ ನೋವುಗಳಿಗೆ ಚಿಕಿತ್ಸೆ ಪಡೆಯಲು ಏಪ್ರೀಲ್ 1997 ರಲ್ಲಿ ಸುಮಾರು ಒಂದು ತಿಂಗಳ ಕಾಲ ಈ ಆಸ್ಪತ್ರೆಗೆ ಸೇರಿದ್ದರು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಕಾಂ. ವಿಜಯ ರಾಘವನ್ ಈ ಏರ್ಪಾಡು ಮಾಡಿಸಿ ಕೊಟ್ಟಿದ್ದರು. ಆಸ್ಪತ್ರೆಯ ಒಬ್ಬ ಸಿಬ್ಬಂದಿ ರೋಗಿಗಳಿಂದ ಔಷಧಿಗಳಿಗೆ ದೇಹದ ನೋವಿನ ಭಾಗಗಳಿಗೆ ಮಸಾಜ್ ಮಾಡುವುದಕ್ಕೆ ಹಣ ಸಂಗ್ರಹಿಸುತ್ತಿದ್ದು. ಹೋತನಹಳ್ಳಿಯವರೂ ಸಹಜವಾಗಿಯೇ ರೂ. 400 ಪಾವತಿ ಮಾಡಿದರು. ಚಿಕಿತ್ಸೆ ಮುಗಿಸಿ ಮೇ 97 ರಲ್ಲಿ ಸಾಕಷ್ಟು ಗುಣಮುಖವಾಗಿ ಅವರು ಮರಳಿ ಬಂದರು.

ಇತ್ತೀಚೆಗೆ ಅನಿರೀಕ್ಷಿತವಾಗಿ ಆಸ್ಪತ್ರೆಯ ಕಾರ್ಯಾಲಯದ ಕಾರ್ಯಕರ್ತರಲ್ಲಿ ಒಬ್ಬರಾದ ಸಿ. ಹರಿದಾಸನ್ ಹೋತನಹಳ್ಳಿ ಅವರಿಗೆ ಒಂದು ಪತ್ರ ಬರೆದಿದ್ದು, ತಮ್ಮ ಆಸ್ಪತ್ರೆ ದಕ್ಷತೆಗೆ ಹಾಗೂ ಪ್ರಾಮಾಣಿಕತೆಗೆ ಹೆಸರುವಾಸಿಯಾಗಿರುವುದರಿಂದ, ಆಸ್ಪತ್ರೆಯ ಒಬ್ಬ ಸಿಬ್ಬಂದಿ ರೋಗಿಗಳಿಂದ ಅನಧಿಕೃತವಾಗಿ ಹಣ ಪಡೆಯುತ್ತಿರುವ ವಿಷಯ ಅಲ್ಲಿನ ಆಡಳಿತಾಧಿಕಾರಿಗಳಿಗೆ ತಿಳಿದು ಬಂದು, ವಿಚಾರಣೆ ನಡೆಸಿ, ಸಂಬಂಧಪಟ್ಟ ಸಿಬ್ಬಂದಿಯನ್ನು ಅಮಾನತ್ತಿನಲ್ಲಿಟ್ಟು, ಅವರು ರೋಗಿಗಳಿಂದ ಪಡೆದ ಹಣವನ್ನು ಅವನಿಂದಲೇ ವಾಪಸು ಮಾಡಿಸಲಾಗಿದೆ ಎಂದೂ ಹೋತನಹಳ್ಳಿ ಅವರಿಗೂ ರೂ.400 ಮನಿಯಾರ್ಡರ್ ಮೂಲಕ ಕಳಿಸಲಾಗಿದೆ ಎಂದೂ, ಅದನ್ನು ಮರಳಿಸದೇ ಸ್ವೀಕರಿಸಬೇಕೆಂದು ವಿನಂತಿಸಿದ್ದರು. ಫಕೀರಪ್ಪನವರಿಗೆ ಆದರಿಂದುಂಟಾದ ತೊಂದರೆಗಳಿಗಾಗಿ ಆಸ್ಪತ್ರೆಯ ಪರವಾಗಿ ಹರಿದಾಸನ್ ತಮ್ಮ ಪತ್ರದಲ್ಲಿ ಕ್ಷಮೆ ಕೇಳಿದ್ದರು.

ಇಂತಹ ಆಶ್ಚರ್ಯ ಹಾಗೂ ಅಭಿಮಾನದ ಘಟನೆಗೆ ಕಾರಣ ತಿಳಿಯಲು ಕಷ್ಟ ಇಲ್ಲ. ಈ ಆಸ್ಪತ್ರೆಯನ್ನು ಸಹಕಾರಿ ಕ್ಷೇತ್ರದಲ್ಲಿ ಅತ್ಯಂತ ಸೇವಾ ಮನೋಭಾವನೆಯಿಂದ ಉಚಿತ ಚಿಕಿತ್ಸೆಯ ಆಧಾರದಲ್ಲಿ ನಡೆಸಲಾಗುತ್ತಿದೆ. ಆಸ್ಪತ್ರೆಯ ಸಿಬ್ಬಂದಿಗಳೆಲ್ಲರೂ ಸಿ.ಐ.ಟಿ.ಯು.ವಿಗೆ ಸೇರಿದವರಾಗಿದ್ದಾರೆ. ಕಾಂ. ಹರಿದಾಸನ್ ಸಿಬ್ಬಂದಿಗಳ ಸಂಘದ ಒಬ್ಬ ಪದಾಧಿಕಾರಿಯಾಗಿದ್ದಾರೆ.

ವರದಿ: ಸಿ.ಆರ್. ಭಟ್.

ಅಂಗನವಾಡಿ ನೌಕರರ ರಾಯಚೂರು ಜಿಲ್ಲಾ ಸಮ್ಮೇಳನ

ಸೆಪ್ಟೆಂಬರ್ 14-15 ರಂದು ರಾಯಚೂರು ಜಿಲ್ಲೆಯ ಅಂಗನವಾಡಿ ನೌಕರರ ಜಿಲ್ಲಾ ಸಮ್ಮೇಳನ ಕುಷ್ಟಗಿಯಲ್ಲಿ ಜರುಗಿತು. ದೇವದುರ್ಗ, ಸಿಂಧನೂರು, ಅರಿಗಸನೂರು, ಗಂಗಾವತಿ, ಕುಷ್ಟಗಿ, ಯಲಬುರ್ಗ, ಮತ್ತು ರಾಯಚೂರು ತಾಲೂಕುಗಳಿಂದ 700 ಜನ ಪ್ರತಿನಿಧಿಗಳಿದ್ದ ಸಮ್ಮೇಳನದಲ್ಲಿ ಹೆಚ್ಚಿನ ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಸಮ್ಮೇಳನ ಪ್ರಾರಂಭದ ದಿನ 600 ಅಂಗನವಾಡಿ ನೌಕರರು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ನಂತರ ಬಹಿರಂಗ ಸಭೆ ಜರುಗಿತು. ಬಹಿರಂಗ ಸಭೆಯನ್ನುದ್ದೇಶಿಸಿ ಅಂಗನವಾಡಿ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಎಸ್. ವರಲಕ್ಷ್ಮಿ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಜಿ.ಎಸ್.ನಾಗರಾಜ್ ಮಾತನಾಡಿದರು. ಸಭೆಯ ಅತಿಥಿಗಳಾಗಿ ಸಿಪಿಐ (ಎಂ) ನ ಜಿಲ್ಲಾ ಮುಖಂಡರಾದ ಕಾಂ. ಲಿಂಗಪ್ಪನವರು, ರೈತ ಮುಖಂಡರಾದ ಕಾಂ. ದೇಸಾಯಿ ಮುಂತಾದವರು ಮಾತನಾಡಿದರು.

ಮರುದಿನ ಎಸ್.ವರಲಕ್ಷ್ಮಿಯವರು ಸಮ್ಮೇಳನ ಉದ್ಘಾಟಿಸುವುದರೊಂದಿಗೆ ಸಮ್ಮೇಳನದ ಕಾರ್ಯಕಲಾಪಗಳು ಯಶಸ್ವಿಯಾಗಿ ನಡೆದು ಈ ಸಂದರ್ಭದಲ್ಲಿ ಜಿಲ್ಲಾ ಸಮಿತಿಯನ್ನು ಆರಿಸಲಾಯಿತು. ಅಧ್ಯಕ್ಷರಾಗಿ-ಮರಿಯಮ್ಮ, ಉಪಾಧ್ಯಕ್ಷರಾಗಿ ಸಂಗಮ್ಮ ವಿದ್ಯಾವತಿ, ಕಾರ್ಯದರ್ಶಿಗಳಾಗಿ ಮಂಟನ ಗೌಡ, ಸಹ ಕಾರ್ಯದರ್ಶಿಗಳಾಗಿ ಸುಜಾತ, ಕುಲಕರ್ಣಿ, ಕೃಷ್ಣವೇಣಿ, ಖಜಾಂಚಿಯಾಗಿ ಅನಂತಲಕ್ಷ್ಮಿ ಚುನಾಯಿತರಾದರು.

ಶ್ರೀನಿವಾಸಪುರ ತಾಲೂಕು ಸಮ್ಮೇಳನ: ಆಗಸ್ಟ್ 31 ರಂದು ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕು ಅಂಗನವಾಡಿ ನೌಕರರ ಸಮ್ಮೇಳನ ಯಶಸ್ವಿಯಾಗಿ ನಡೆದು ಸುಮಾರು 150 ಜನ ಭಾಗವಹಿಸಿದ್ದ ಸಮ್ಮೇಳನವನ್ನು ಅಂಗನವಾಡಿ ನೌಕರರ ರಾಜ್ಯ ಅಧ್ಯಕ್ಷರಾದ ಎನ್.ಪ್ರಭಾ ಉದ್ಘಾಟಿಸಿದರು. ತಾಲೂಕು ಸಮಿತಿಯ ಗೌರವಾಧ್ಯಕ್ಷರಾದ ಕಾಂ. ನಾಗಪ್ಪ ತಾಲೂಕು ಮುಖಂಡರಾದ ಕಾಂ. ಭಾಗ್ಯಲಕ್ಷ್ಮಮ್ಮ, ಗೌರಮ್ಮ ಮುಂತಾದವರು ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದರು.

ಆಗಸ್ಟ್ 24 ರಂದು ಚಿಂಚೋಳಿಯಲ್ಲಿ ಸರ್ವಸದಸ್ಯರ ಸಭೆ ನಡೆದು 100 ಜನ ಸದಸ್ಯರು ಪಾಲ್ಗೊಂಡಿದ್ದ ಸಭೆಯಲ್ಲಿ ವಿಶೇಷವಾಗಿ "ಐಕ್ಯರಂಗ" ಪತ್ರಿಕೆಯ ಮಾರಾಟದ ಬಗ್ಗೆ ಚರ್ಚಿಸಿ ತೀರ್ಮಾನ ಮಾಡಲಾಯಿತು.

ಆಗಸ್ಟ್ 31 ರಂದು ಹುಮ್ನಾಬಾದ್‌ನಲ್ಲಿ ನಡೆದ ಸರ್ವಸದಸ್ಯರ ಸಭೆಯಲ್ಲಿ 250 ಜನ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಇತರೆ ಸಂಘಟನೆಗಳಿಂದ ನಮ್ಮ ಸಂಘಟನೆಗೆ ಗಣನೀಯ ಸಂಖ್ಯೆಯಲ್ಲಿ ಬಂದು ಭಾಗ ವಹಿಸಿದ್ದ ಸಭೆಯಲ್ಲಿ 200 ಸದಸ್ಯತ್ವವನ್ನು ನೊಂದಾಯಿಸಲಾಯಿತು.

ತರಬೇತಿ ಶಿಬಿರ

ಸೆಪ್ಟೆಂಬರ್ 20-21 ರಂದು ತುರುವೇಕೆರೆಯಲ್ಲಿ 2 ದಿನಗಳ ತರಬೇತಿ ಶಿಬಿರ ನಡೆಯಿತು. ಶಿಬಿರದಲ್ಲಿ CITU ಸಂಘಟನೆಯ ಕುರಿತು ಮತ್ತು ಮಹಿಳೆಯರ ಸ್ಥಿತಿ-ಗತಿಗಳ ಕುರಿತು ತರಗತಿಗಳನ್ನು ನಡೆಸಲಾಯಿತು.

CITU ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ. V.J.K ನಾಯರ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕಾಂ. ಕೆ.ಎಸ್.ವಿಮಲಾ, CITU ವಿನ ಕಾಂ. ಮಜೀದ್, SFI ರಾಜ್ಯ ಅಧ್ಯಕ್ಷರಾದ ಕಾಂ. ಕೆ.ಎನ್. ಉಮೇಶ್ ಮುಂತಾದವರು ನಡೆಸಿಕೊಟ್ಟರು.

ಡಿಸೆಂಬರ್ 19 ರಿಂದ 21 ರ ತನಕ ಭೂಪಾಲ್‌ನಲ್ಲಿ ನಡೆಯುತ್ತಿರುವ ಅಖಿಲ ಭಾರತ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ತಾಲೂಕು ಮಟ್ಟದ ಹಾಗೂ ಜಿಲ್ಲಾ ಮಟ್ಟದ ಸಮ್ಮೇಳನಗಳು ನಡೆಯುತ್ತಿವೆ. ○

ನ. 9-10: ಉತ್ತರ ಕನ್ನಡ ಸಿಪಿಐ(ಎಂ) ಜಿಲ್ಲಾ ನಾಲ್ಕನೇ ಸಮ್ಮೇಳನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉತ್ತರ ಕನ್ನಡ ಜಿಲ್ಲಾ 4ನೇ ಸಮ್ಮೇಳನ ನವಂಬರ್ 9 ಮತ್ತು 10 ರಂದು ಎರಡು ದಿನ ದಾಂಡೇಲಿಯಲ್ಲಿ ನಗರದ ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ.

ಸಮ್ಮೇಳನವನ್ನು ಯಶಸ್ವಿಯಾಗಿ ಸಂಘಟಿಸಲು ಸಿಐಟಿಯು ಕಛೇರಿಯಲ್ಲಿ ಪಕ್ಷದ ಸದಸ್ಯರು ಮತ್ತು ಹಿತೈಷಿಗಳ ಸಭೆ ಸೇರಿಸಿ, ಸ್ವಾಗತ ಸಮಿತಿ ರಚಿಸಲಾಯಿತು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ|| ನಿತ್ಯಾನಂದ ಸ್ವಾಮಿಯವರು ಹಾಜರಿದ್ದು ಸಲಹೆ ಸೂಚನೆ ನೀಡಿದರು. ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ|| ಟಿ.ಎಸ್.ನಾಯ್ಕ ಹಾಜರಿದ್ದರು. ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಕಾಂ|| ಎಂ.ಬಿ.ನಾಯ್ಕರು ಅಧ್ಯಕ್ಷತೆ ವಹಿಸಿದ್ದರು.

ಸ್ವಾಗತ ಸಮಿತಿಗೆ ಅಧ್ಯಕ್ಷರಾಗಿ ಎಸ್.ವಿ.ಸಾವಂತ, ಪ್ರಧಾನ ಕಾರ್ಯದರ್ಶಿಯಾಗಿ ಯುವಜನ ಸಂಘಟನೆಯ ಮುಖಂಡರಾದ ಕಾಂ|| ಶಾಂತರಾಮ ನಾಯಕ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರುಗಳಾಗಿ ಕಾಂ|| ಭೀಮರಾವ್, ಕಾಂ|| ಗುರುಪಾದ ಮರಾಠೆ, ಫುಲ್ಲಯ್ಯ ಮತ್ತು ಕಾಂ|| ಸುಭಾಸ ಕೊಪ್ಪಿಕರ, ಖಜಾಂಚಿಯಾಗಿ ಕಾಂ|| ಮಾಧವ ಶೇರೆಗಾರ ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿಗೆ ಸದಸ್ಯರಾಗಿ 26 ಜನರನ್ನು ಆಯ್ಕೆ ಮಾಡಲಾಗಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೊಂದು ಪತ್ರ

ಇತ್ತೀಚೆಗೆ ಸಿ.ಪಿ.ಐ (ಎಂ) ನ ಧಾರವಾಡ ಜಿಲ್ಲಾ ಸಮಿತಿಯು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದು ರಾಜ್ಯದ ಎಲ್ಲಾ ಕೋರ್ಟುಗಳಲ್ಲಿ ಅದರಲ್ಲೂ ಮುನಿಸಿಫ್: ಜಿಲ್ಲಾ ಕೋರ್ಟುಗಳಲ್ಲಿ ನೋಟೀಸು ಕಳುಹಿಸುವುದು ಮುಂತಾದ ಸಂಪರ್ಕ ಕಾರ್ಯಗಳನ್ನು ಕನ್ನಡದಲ್ಲಿಯೇ ನಡೆಸಬೇಕೆಂದು ಒತ್ತಾಯಿಸಲಾಗಿದೆ.

ವಿಭಜಿತ ಧಾರವಾಢ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲಿ ಕೃಷಿ ಕೂಲಿಕಾರರು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಸಮಿತಿಯ ಆಶ್ರಯದಲ್ಲಿ 3-4 ವರ್ಷಗಳಿಂದ ಭೂಮಿಗಾಗಿ ಹೋರಾಟ ನಡೆಸುತ್ತಿದ್ದು ಸರ್ಕಾರ ಬಡ ಅನಕ್ಷರಸ್ಥ ಕೂಲಿಕಾರರ ಮೇಲೆ ನೂರಾರು ದಾವೆಗಳನ್ನು ಕೋರ್ಟಿನಲ್ಲಿ ದಾಖಲೆ ಮಾಡಿದೆ. ಅವುಗಳಿಗಾಗಿ ಕೋರ್ಟಿಗೆ ಹಾಜರಾಗಲು ಕೃಷಿ ಕೂಲಿಕಾರರಿಗೆ ನೋಟೀಸುಗಳನ್ನು ನೀಡಲಾಗುತ್ತಿದೆ. ಈ ನೋಟೀಸುಗಳನ್ನು ಇಂಗ್ಲೀಷಿನಲ್ಲಿ ಕಳುಹಿಸುತ್ತಿದ್ದು ತೀರಾ ಸಂಕಷ್ಟ ಪಡುವಂತಾಗಿದೆ. ಮಾತ್ರವಲ್ಲ ವಿಮಾ ಕಂಪನಿಯಿಂದ, ಪೋಲೀಸ್ ಇಲಾಖೆಯಿಂದ ಬರುವ ನೋಟೀಸುಗಳೂ ಸಹ ಇಂಗ್ಲೀಷ್ ನಲ್ಲಿಯೇ ಇರುತ್ತವೆ. ಆದ್ದರಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈ ಕುರಿತು ವಿಚಾರಣೆ ನಡೆಸಿ ಕನ್ನಡದಲ್ಲಿ ವ್ಯವಹರಿಸಲು ಒತ್ತಾಯಿಸುವಂತೆ ಪತ್ರದಲ್ಲಿ ಮನವಿ ಮಾಡಲಾಗಿದೆ.

ಕಾಂ|| ಕೆ.ಮಾರಪ್ಪ ರೈ ನಿಧನ

ಮಂಗಳೂರು: ಗೋವಾ ವಿಮೋಚನಾ ಹೋರಾಟಗಾರರು, ಬಂದರ್ ವರ್ಕರ್ಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಹಿರಿಯ ಕಾರ್ಮಿಕ ಮುಖಂಡರಾದ ಕಾಂ.ಕೆ. ಮಾರಪ್ಪ ರೈ ಅಕ್ಟೋಬರ್ 10 ರಂದು ನಿಧನರಾದರು.


ತಮ್ಮ ಚಿಕ್ಕ ಪ್ರಾಯದಲ್ಲೇ ರಾಜಕೀಯಕ್ಕೆ ಧುಮುಕಿದ ರೈಯವರು 1944 ರಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿ, 1964 ರಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿ ಕಾರ್ಮಿಕ ವರ್ಗದ ಚಳುವಳಿಯಲ್ಲಿ ಸಕ್ರಿಯವಾಗಿ ದುಡಿದರು. ಕಾಂ. ಮಾರಪ್ಪ ರೈ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಂಗಳೂರು ನಗರ ಸಮಿತಿ ಸಭೆ ಸೇರಿ ತನ್ನ ಶ್ರದ್ಧಾಂಜಲಿ ಸಲ್ಲಿಸಿತು.




ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (1757-1947) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಭಾರತದಲ್ಲಿ ಆಧುನಿಕ ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನ ಬೆಳೆದುಬಂದದ್ದು ಮುಂಬೈಯಲ್ಲಿ ಮೂಡಿಬರಲಾರಂಭಿಸಿದ ಕೈಗಾರಿಕಾ ಬಂಡವಾಳಶಾಹಿ ಮತ್ತು ಬಂಗಾಳದಲ್ಲಿ ರಾಜಾರಾಮಮೋಹನ ರಾಯರ ನೇತೃತ್ವದಲ್ಲಿ ಆರಂಭವಾದ ಸಾಮಾಜಿಕ - ಸಾಂಸ್ಕೃತಿಕ ಪುನರುಜ್ಜೀವನದ ಒಟ್ಟು ಪರಿಣಾಮದಿಂದಾಗಿ. ಒಂದು ಕೈಗಾರಿಕಾ ಕ್ರಾಂತಿ ತಂದು ಆಧುನೀಕರಣದ ಅಡಿಗಲ್ಲು ಹಾಕುವ ಕಣ್ಣೋಟ ಹೊಂದಿದ ವಿಭಾಗವೊಂದು ಮೂಡಿಬಂದದ್ದು 19ನೇ ಶತಮಾನದ ಕೊನೆಯ ದಶಕಗಳಲ್ಲಿ.



ದಾದಾಭಾಯಿ ನವರೋಜಿ(1825-1917) ಇದರ ಸ್ಥಾಪಕರಲ್ಲಿ ಪ್ರಮುಖರು. ಭಾರತೀಯ ಆರ್ಥಿಕದ ಸಮಸ್ಯೆಗಳ ವೈಜ್ಞಾನಿಕ ಅಧ್ಯಯನ ಮಾಡಿ ಭಾರತದ ಸಂಪತ್ತು ಇಂಗ್ಲೆಂಡಿಗೆ ಹರಿದುಹೋಗುತ್ತಿದೆ ಎಂದು ತಮ್ಮ `Poverty and Unbritish Rule"(ಬಡತನ ಮತ್ತು ಬ್ರಿಟಿಶರಿಗೆ ತಕ್ಕುದಲ್ಲದ ಆಳ್ವಿಕೆ) ಗ್ರಂಥದಲ್ಲಿ ಅವರು ತೋರಿಸಿಕೊಟ್ಟರು. ಮುಂಬೈಯ ಹೊಸ ಬೂರ್ಜ್ವಾ ವರ್ಗದಿಂದ ಬಂದ ನವರೋಜಿಯವರಲ್ಲದೆ, ಬಂಗಾಳದ ಹೊಸ ಭೂಮಾಲಕ ಕುಟುಂಬದಿಂದ ಬಂದ ಆಧುನಿಕ ಶಿಕ್ಷಣ ಪಡೆದ **ರಮೇಶ್ ಚಂದ್ರದತ್**(1841-1909) ವಿಶೇಷವಾಗಿ ಕೃಷಿಯ ಅವನತಿಯ, ಅದರಿಂದಾಗಿ ಬ್ರಿಟಿಶ್ ಆಳ್ವಿಕೆಯಲ್ಲಿ ಮತ್ತೆ ಮತ್ತೆ ಮರುಕಳಿಸಿದ ಬರಗಾಲಗಳ ಕಾರಣಗಳನ್ನು ತೋರಿಸಿಕೊಟ್ಟರು. ಮುಂಬೈಯಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದ **ಮಹದೇವ ಗೋವಿಂದ ರಾನಡೆ**(1842- 1901)ನಂತರ **ಗೋಪಾಲಕೃಷ್ಣ ಗೋಖಲೆ** ಇದೇ ದಿಕ್ಕಿನಲ್ಲಿ ಯೋಚಿಸಿದವರು. ಇವರೆಲ್ಲಾ ಸೌಮ್ಯ ಸ್ವರದಲ್ಲಿ ಬ್ರಿಟಿಶರಿಗೊಂದು ದೃಢ ಸವಾಲು ಹಾಕಿದ ರಾಷ್ಟ್ರೀಯ ಆಂದೋಲನದ ಆರಂಭದ ಮುಖಂಡರುಗಳು.



ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಆರಂಭದಿಂದಲೇ ಎರಡು ಪರಸ್ಪರ ವಿರುದ್ಧ ಪ್ರವೃತ್ತಿಗಳು ಕಂಡುಬಂದವು. ಭಾರತದಲ್ಲಿ ಬ್ರಿಟಿಶ್ ಆಡಳಿತವನ್ನು ಉಳಿಸಿಕೊಂಡು ಅದನ್ನು ಹೆಚ್ಚು ಉದಾರ ಹಾಗೂ ಪ್ರಜಾಸತ್ತಾತ್ಮಕ ಗೊಳಿಸಲು ನಿರ್ಣಯ, ಮನವಿ, ಪ್ರಚಾರ, ಅರ್ಜಿಗಳ ಮೂಲಕ ಪ್ರಯತ್ನಿಸಬೇಕು ಎಂದು 'ಮಂದಗಾಮಿ' ಮುಖಂಡರು ಹೇಳಿದರೆ, ಸ್ವಯಮಾಡಳಿತ ನಡೆಸಲು ಹೋರಾಟ, ತ್ಯಾಗಗಳಿಗೂ ಸಿದ್ಧರಾಗಬೇಕು ಎಂದು 'ತೀವ್ರಗಾಮಿ' ಮುಖಂಡರು ಪ್ರತಿಪಾದಿಸುತ್ತಿದ್ದರು.



ಲಾಲ್-ಬಾಲ್-ಪಾಲ್


ನವರೋಜಿ, ರಾನಡೆ, ಗೋಖಲೆ 'ಮಂದಗಾಮಿ'ಗಳಾಗಿದ್ದರೆ, ಪಂಜಾಬಿನ **ಲಾಲಾ ಲಜಪತರಾಯ್** (1865-1921), ಮಹಾರಾಷ್ಟ್ರದ **ಬಾಲ ಗಂಗಾಧರ್ ತಿಲಕ್**(1856-1920) ಹಾಗೂ ಬಂಗಾಳದ **ಬಿಪಿನ್ ಚಂದ್ರಪಾಲ್**(1858-1932) 'ಉಗ್ರಗಾಮಿ' ಮುಖಂಡರೆನಿಸಿ ಕೊಂಡವರು ಮುಂಬೈ ಪ್ರಾಂತ್ಯದಲ್ಲಿ ಪ್ಲೇಗನ್ನು ಎದುರಿಸುವ ಹೆಸರಿನಲ್ಲಿ ವಿಪರೀತ ದಮನ ನಡೆಸುತ್ತಿದ್ದ ಪ್ಲೇಗ್ ಕಮಿಷನರ್ ರ್‍ಯಾಂಡ್ ಹಾಗೂ ಆತನ ಸಹಾಯಕನನ್ನು ಕೊಂದು ಮೂವರು ಚಾಪೇಕರ್ ಸೋದರರು ಹಾಗೂ ವಿನಾಯಕ ರಾನಡೆ ಏಪ್ರಿಲ್-ಮೇ 1897 ರಲ್ಲಿ ಗಲ್ಲಿಗೇರಿದರು. ಈ ಪಿತೂರಿಯಲ್ಲಿ ಸೇರಿದ್ದರೆಂಬ ಆಪಾದನೆಯ ಮೇಲೆ ತಿಲಕರಿಗೆ 18 ತಿಂಗಳ ಸಜೆಯಾಯಿತು.



ಚಾಪೇಕರ್ ಸೋದರರು

1902 ರ ಮಾರ್ಚ್ ತಿಂಗಳಲ್ಲಿ ಕಲ್ಕತ್ತೆಯಲ್ಲಿ 'ಅನುಶೀಲನ್' ಸಮಿತಿ ಕ್ರಾಂತಿಕಾರಿ ಸಂಘಟನೆ ಆರಂಭವಾಯಿತು. ಪ್ರಮಥ್‌ನಾಥ್ ಮಿಶ್ರ ಇದರ ಅಧ್ಯಕ್ಷರಾಗಿದ್ದರು. ಸತೀಶ್ ಚಂದ್ರ ಬಸು, ಪುಲಿನ್ ಬೆಹಾರಿದಾಸ್ ಮತ್ತು ತ್ರೈಲೋಕ್ಯನಾಥ್ ಚಕ್ರವರ್ತಿ ಇದರ ಇತರ ಪ್ರಮುಖ ಮುಖಂಡರು. ಇವರೆಲ್ಲರಿಗೆ ಕರಿನೀರಿನ ಶಿಕ್ಷೆ ವಿಧಿಸಿ ಅಂಡಮಾನಿಗೆ ಕಳಿಸಲಾಯಿತು. ಅರವಿಂದ್ ಘೋಷ್ ಈ ಸಂಘಟನೆಯಲ್ಲಿ ಒಬ್ಬ ಸಕ್ರಿಯ ಕ್ರಾಂತಿಕಾರಿಗಳಾಗಿದ್ದರು.

ಸ್ವದೇಶಿ ಆಂದೋಲನ(1903-1908) ಬ್ರಿಟಿಶ್ ಸಾಮ್ರಾಜ್ಯಶಾಹಿಗಳು ಹಾಗೂ ಹೊಸದಾಗಿ ಮೂಡಿಬರುತ್ತಿದ್ದ ಬಂಡವಾಳಶಾಹಿಗಳ ನಡುವಿನ ಹಿತಾಸಕ್ತಿಗಳ ತಿಕ್ಕಾಟ ಹೆಚ್ಚುತ್ತಿದ್ದ ಹಿನ್ನೆಲೆಯಲ್ಲಿ ಸ್ವದೇಶಿ ಆಂದೋಲನ ಎದ್ದು ಬಂತು. 1905 ಜುಲೈ 19 ರಂದು ಬಂಗಾಳದ ವಿಭಜನೆಯ ಪ್ರಕಟಣೆಯನ್ನು ಬ್ರಿಟಿಶ್ ಸರಕಾರ ಮಾಡಿತು. ಆಡಳಿತದ ಸುಗಮತೆಗಾಗಿ ಈ ನಿರ್ಣಯ ಎಂದು ಹೇಳಿದ್ದರೂ ಸ್ವಾತಂತ್ರ್ಯ ಆಂದೋಲನದಲ್ಲಿ ವಿವಿಧ ಜನ ವಿಭಾಗಗಳ ಹೆಚ್ಚುತ್ತಿದ್ದ ಐಕ್ಯತೆ ಮತ್ತು ಬಂಗಾಳ ಇದಕ್ಕೆ ಸ್ಫೂರ್ತಿಯ ಸೆಲೆಯಾಗಿದ್ದು ಬ್ರಿಟಿಶರ ಕಣ್ಣು ಕುಕ್ಕುತ್ತಿತ್ತು. ಈ ಪ್ರತಿರೋಧದ ಕೇಂದ್ರವನ್ನು ಒಡೆಯುವುದು ಬ್ರಿಟಿಶರ ತಂತ್ರವಾಗಿತ್ತು. ಇದಕ್ಕೆ ಬಂಗಾಳದಾದ್ಯಂತ ಭಾರಿ ಪ್ರತಿಭಟನೆ ವ್ಯಕ್ತವಾಯಿತು. ಆಗಸ್ಟ್ 7, 1905 ರಂದು ಬಂಗಾಳ ವಿಭಜನೆ ವಿರೋಧಿ ಆಂದೋಲನ ಕಲ್ಕತ್ತೆಯ ಪುರಭವನದಲ್ಲಿ ಆರಂಭವಾಯಿತು. ಹಿಂದುಗಳು, ಮುಸ್ಲಿಮರೆನ್ನದೆ ಎಲ್ಲರಿಂದಲೂ ಇದಕ್ಕೆ ಬೆಂಬಲ ವ್ಯಕ್ತವಾಯಿತು. ಅಕ್ಟೋಬರ್ 16, 1905 ರಂದು ಬ್ರಿಟಿಶ್ ಸರಕಾರ ಜನರ ಪ್ರತಿಭಟನೆಯನ್ನು ಲೆಕ್ಕಿಸದೆ ಬಂಗಾಳವನ್ನು ವಿಭಜಿಸಿದ ದಿನ ಶೋಕ ದಿನವನ್ನಾಗಿ ಆಚರಿಸಲಾಯಿತು. ಸಾರ್ವಜನಿಕ ಹರತಾಳ ನಡೆಯಿತು. ಕಲ್ಕತ್ತೆಯಲ್ಲಿ ಬ್ರಿಟಿಶ್ ಮತಪ್ರದರ್ಶನ ನಡೆಯಿತು. ಕವಿ ರವೀಂದ್ರನಾಥ್ ಟಾಗೋರ್ ತಾವು ರಚಿಸಿದ 'ರಾಖೀ' ಹಾಡನ್ನು ಹಾಡುತ್ತಾ ನೇತೃತ್ವ ವಹಿಸಿದರು. ಬಂಗಾಳದ ಪುನರೇಕೀಕರಣದ ಪ್ರತಿಜ್ಞೆಯನ್ನು ಕೈಗೊಳ್ಳಲಾಯಿತು.



ಬಂಗಾಳದ ವಿಭಜನೆಯ ವಿರುದ್ಧ ಆರಂಭವಾದ ಸ್ವದೇಶಿ ಆಂದೋಲನ ಶೀಘ್ರದಲ್ಲೇ ಇಡೀ ಬಂಗಾಳವನ್ನು ಆವರಿಸಿದ್ದು ಮಾತ್ರವಲ್ಲದೇ ಮಹಾರಾಷ್ಟ್ರ, ಪಂಜಾಬ್ ಮತ್ತಿತರ ಪ್ರದೇಶಗಳಿಗೂ ಹರಡಲಾರಂಭಿಸಿತು. ಮಂದಗಾಮಿಯೆನಿಸಿದ್ದ ಗೋಖಲೆ ಯವರೂ ಕಾಂಗ್ರೆಸ್‌ನ ವಾರಣಾಸಿ ಅಧಿವೇಶನದಲ್ಲಿ ಬಂಗಾಳದ ವಿಭಜನೆ ಭಾರತದಲ್ಲಿ ಬ್ರಿಟಿಶ್ ಆಳ್ವಿಕೆಯ ಅತ್ಯಂತ ಹೀನಕೃತ್ಯ ಎಂದರು. ಆದರೂ ಕಾಂಗ್ರೆಸ್‌ನಲ್ಲಿ ಲಾಲ್-ಬಾಲ್-ಪಾಲ್‌ರ ಉಗ್ರಗಾಮಿ ತ್ರಿಮೂರ್ತಿಗಳ ಪ್ರಭಾವ ಸ್ವದೇಶೀ ಆಂದೋಲನದ ಹಿನ್ನೆಲೆಯಲ್ಲಿ ಹೆಚ್ಚಲಾರಂಭಿಸಿತು.

ವಿದ್ಯಾರ್ಥಿಗಳು ಈ ಆಂದೋಲನದಲ್ಲಿ ಪ್ರಮುಖ ಪಾತ್ರ ವಹಿಸಿದರು. ಸ್ವದೇಶಿ ಆಂದೋಲನವನ್ನು ಸೇರುವ ವಿದ್ಯಾರ್ಥಿಗಳನ್ನು ಶಾಲೆ, ಕಾಲೇಜುಗಳಿಂದ

ಪುಟ 6 ನೋಡಿ

ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು ಅಥವಾ ನಂತರ ಕಮ್ಯುನಿಸ್ಟರಾದವರು ಎಂತಹ ವಿಶಿಷ್ಟಪಾತ್ರವನ್ನು ವಹಿಸಿದರು ಎಂಬುದನ್ನು ಕೆಲವು ಪ್ರಮುಖ ಕಮ್ಯುನಿಸ್ಟ್ ಸ್ವಾತಂತ್ರ್ಯ ಹೋರಾಟಗಾರರ ಅನುಭವದ ನೆರಳಿನಲ್ಲಿ ಬಿಂಬಿಸುವ ಈ ಅಂಕಣದಲ್ಲಿ ಈ ಬಾರಿ ಅಸಹಕಾರ ಆಂದೋಲನಕ್ಕೆ ಧುಮುಕಿ ಭಗತ್‌ಸಿಂಗ್‌ರ ಸಹಯೋಗಿಯಾಗಿ ಪರಿವರ್ತನೆಗೊಂಡು, ಕರಿನೀರಿನ ಶಿಕ್ಷೆ ಅನುಭವಿಸಿ ಕಮ್ಯುನಿಸ್ಟ್ ಆಂದೋಲನಕ್ಕೆ ತನ್ನನ್ನು ಸಮರ್ಪಿಸಿಕೊಂಡ ಶಿವವರ್ಮಾ ಅವರ ನೆನಪು.

ಸದ್ದಿಲ್ಲದ ಕ್ರಾಂತಿಕಾರಿ

ಶಿವವರ್ಮಾ

1920-21 ಮಹಾತ್ಮ ಗಾಂಧಿಯವರ ಅಸಹಕಾರ ಆಂದೋಲನ ದೇಶದ ಮೂಲೆ-ಮೂಲೆಗಳಲ್ಲಿ ಯುವಜನರನ್ನು ಆಕರ್ಷಿಸಿತ್ತು. ಉತ್ತರ ಪ್ರದೇಶದ 17 ವರ್ಷದ ಶಿವವರ್ಮಾ ಶಿಕ್ಷಣ ಬಿಟ್ಟು ಈ ಆಂದೋಲನ ದಲ್ಲಿ ಧುಮುಕಿದ್ದ. ಆದರೆ ಗಾಂಧೀಜಿ ಚೌರಿಚೌರಾದಲ್ಲಿ ಜನ ಪೋಲೀಸರ ದಮನಕ್ಕೆ ಪ್ರತ್ಯುತ್ತರವಾಗಿ ಹಿಂಸೆಗಿಳಿದರೆಂದು ಆಂದೋಲ ನವನ್ನು ಹಿಂತೆಗೆದುಕೊಂಡರು. ಅಸಂಖ್ಯಾತ ಇತರ ಯುವಜನರಂತೆ ನಿರಾಶನಾದ, ಶಿವವರ್ಮಾ ಬ್ರಿಟಿಶರನ್ನು ಹೊರ ಗೆಸೆಯಲು ಸಶಸ್ತ್ರ ಹೋರಾಟ ನಡೆಸುತ್ತಿದ್ದ ಗುಂಪುಗಳತ್ತ ಆಕರ್ಷಿತನಾದ. ಆ ವೇಳೆಗೆ ಸಚೆಂದ್ರನಾಥ್ ಸನ್ಯಾಲ್ ಹಿಂದೂಸ್ತಾನ್ ರಿಪಬ್ಲಿಕನ್ ಆರ್ಮಿ (ಹೆಚ್.ಆರ್.ಎ) ಕಟ್ಟಿದ್ದರು. ಕಾನಪುರದಲ್ಲಿ ಶಿವವರ್ಮಾ ಆ ಗುಪ್ತ ಸಂಘಟನೆಯ ಸದಸ್ಯನಾದ. ಆದರೆ 1925 ರಲ್ಲಿ ಕಾಕೋರಿ ಪಿತೂರಿ ಮೊಕದ್ದಮೆಯಲ್ಲಿ ಈ ಗುಂಪಿನ ಹಿರಿಯ ಮುಖಂಡರೆಲ್ಲಾ ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆಗೊಳಗಾದರು.

1928 ರ ವೇಳೆ, ಬ್ರಿಟಿಶ್-ವಿರೋಧಿ ಭಾವನೆಗಳು ತೀವ್ರವಾಗಿದ್ದ ಕಾಲ. ಶಿವವರ್ಮಾ ಮತ್ತಿತರ ಅವರ ಗೆಳೆಯರು ಮೆಲ್ಲ-ಮೆಲ್ಲನೆ ಸಮಾಜವಾದದತ್ತ ವಾಲುತ್ತಿದ್ದರು. ಆದರೂ ಕ್ರಾಂತಿಕಾರಿಗಳ ಒಂದು ಶಿಸ್ತುಬದ್ಧ ಗುಂಪಿನ ಸಶಸ್ತ್ರ ಕಾರ್ಯಾಚರಣೆಯಿಂದಲೇ ಸ್ವಾತಂತ್ರ್ಯ, ವಿಮೋಚನೆ ಸಾಧ್ಯ ಎಂಬ ನಂಬಿಕೆ ಇನ್ನೂ ಹೋಗಿರಲಿಲ್ಲ. ಆದರೆ ಪಂಜಾಬಿನಲ್ಲಿ ಈ ಹೆಚ್.ಆರ್.ಎ. ನ ಸದಸ್ಯರಾಗಿದ್ದ ಭಗತ್ ಸಿಂಗ್ ಕ್ರಾಂತಿಕಾರಿಗಳ ಒಂದು ಅಖಿಲ ಭಾರತ ಸಂಘಟನೆ ಅಗತ್ಯವಿದೆಯೆಂದು ಹೇಳುತ್ತಿದ್ದರು. ಸೆಪ್ಟೆಂಬರ್ 1928 ರಲ್ಲಿ ಈ ಕುರಿತು ದಿಲ್ಲಿಯಲ್ಲೊಂದು ಸಭೆ ನಡೆಯಿತು. ಉತ್ತರ ಪ್ರದೇಶ, ಬಿಹಾರ, ಪಂಜಾಬ್, ರಾಜಸ್ತಾನ ದಿಂದ 10 ಪ್ರತಿನಿಧಿಗಳು ಭಾಗವಹಿಸಿದ್ದರು. ಬಂಗಾಳದ ಹೆಚ್ಚಿನ ಕ್ರಾಂತಿಕಾರಿಗಳು ಜೈಲಿನಲ್ಲಿದ್ದರು.

ಹೊಸ ಘಟ್ಟ

ಭಗತ್‌ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆ ಮೂರು ಮುಖ್ಯ ನಿರ್ಣಯಗಳನ್ನು ಕೈಗೊಂಡಿತು. ಮೊದಲನೆಯದಾಗಿ, ಸಂಘಟನೆಯ ಹೆಸರನ್ನು 'ಹಿಂದೂಸ್ತಾನ್ ಸೋಶಲಿಸ್ಟ್ ರಿಪಬ್ಲಿಕನ್ ಆರ್ಮಿ' (ಹೆಚ್.ಎಸ್.ಆರ್.ಎ) ಎಂದು ಬದಲಿಸು ವುದು. ಎರಡನೆಯದಾಗಿ, ಅದುವರೆಗಿದ್ದಂತೆ ಒಬ್ಬ ಬಲಿಷ್ಠ ಮುಖಂಡನ ವೈಯುಕ್ತಿಕ ನಿರ್ಣಯಗಳಂತೆ ನಡೆಯುವ ಬದಲು ಒಂದು ಸಾಮೂಹಿಕ ನಿರ್ಣಯಕ್ಕೆ ಬರುವ ವ್ಯವಸ್ಥೆ ಯನ್ನು ಏರ್ಪಡಿಸುವುದು. ಇದಕ್ಕೆ ಈ ಸಂಘಟನೆಯ ಒಂದು ಕೇಂದ್ರ ಸಮಿತಿಯನ್ನು ರಚಿಸುವುದು. ಹಾಗೂ ಮೂರನೆಯದಾಗಿ, ಇನ್ನು ಮುಂದೆ ನೇರವಾಗಿ ಜನಗಳಿಗ ಸಂಬಂಧಪಟ್ಟ ಪ್ರಶ್ನೆಗಳ ಮೇಲೆಯೇ ಕಾರ್ಯಾಚರಣೆಗಳನ್ನು ರೂಪಿಸುವುದು. ಅಂದರೆ ಭಾರತೀಯ ವಿಮೋಚನಾ ಸಮರದಲ್ಲಿ ವೈಯಕ್ತಿಕ ಭಯೋತ್ಪಾದನೆಯ ಘಟ್ಟ ಮುಗಿದು ಸಮರಧೀರ ಸಾಮೂಹಿಕ ಕಾರ್ಯಾಚರಣೆಯ ಘಟ್ಟಕ್ಕೆ ಈ ಯುವ ಕ್ರಾಂತಿಕಾರಿಗಳು ಕಾಲಿಡುತ್ತಿದ್ದ ಘಟ್ಟ ಅದು. **ಐತಿಹಾಸಿಕವಾಗಿ ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳ ಬಲಿದಾನ ಈ ದೃಷ್ಟಿಯಿಂದ ಬಹಳ ವಿಶಿಷ್ಟ.**

ಹೆಚ್.ಎಸ್.ಆರ್.ಎ ನ ಕೇಂದ್ರ ಸಮಿತಿ ಯಲ್ಲಿ ಉತ್ತರ ಪ್ರದೇಶದ ಪ್ರತಿನಿಧಿಯಾಗಿ ದ್ದವರು ಶಿವವರ್ಮಾ. ಆಗ ದೇಶಾದ್ಯಂತ ಸೈಮನ್ ಆಯೋಗದ ವಿರುದ್ಧ ಭಾರೀ ಪ್ರತಿಭಟನೆ ನಡೆಯುತ್ತಿತ್ತು. ಇಂತಹ ಒಂದು ಮತಪ್ರದರ್ಶನದಲ್ಲಿ ಲಾಹೋರಿನಲ್ಲಿ ಡಿಎಸ್‌ಪಿ ಸೌಂಡರ್ಸ್ ಲಾಲಾ ಲಜಪತ್ ರಾಯ್‌ರ ಮೇಲೆ ಮರಣಾಂತಿಕ ಲಾಠಿ ಪ್ರಹಾರ ನಡೆಸಿದ. ನವೆಂಬರ್ 29, 1928 ರಲ್ಲಿ ಲಜಪತ್ ರಾಯ್ ನಿಧನರಾದರು. ಅವರು ಈ ಯುವ ಕ್ರಾಂತಿಕಾರಿಗಳ ಮಿತ್ರರೇನೂ ಆಗಿರಲಿಲ್ಲ. ಆದರೆ ಅವರು ರಾಷ್ಟ್ರೀಯ ಆಂದೋಲನದ ಹಿರಿಯ ಮುಖಂಡರ ಲ್ಲೊಬ್ಬರು. ಅವರ ಮೇಲೆ ಹಲ್ಲೆಯೆಂದರೆ ದೇಶದ ಮೇಲೆ ಹಲ್ಲೆ, ಇದಕ್ಕೆ ಸವಾಲು ಹಾಕಬೇಕು ಎಂದು ಹೆಚ್.ಎಸ್. ಆರ್.ಎ. ಪರವಾಗಿ ಭಗತ್ ಸಿಂಗ್ ಮತ್ತು ರಾಜಗುರು ಸರಿಯಾಗಿ ಒಂದು ತಿಂಗಳ ಮೇಲೆ ಸೌಂಡರ್ಸ್‌ನನ್ನು ಗುಂಡಿಟ್ಟು ಕೊಂದರು.

ಕೇಂದ್ರ ಅಸೆಂಬ್ಲಿಯ ಮೇಲೆ ಬಾಂಬ್

ಈ ಹೆಚ್.ಎಸ್.ಆರ್.ಎ. ಯೋಜಿಸಿದ ಇನ್ನೊಂದು ಕಾರ್ಯಾಚರಣೆಯೆಂದರೆ ದಿಲ್ಲಿಯ ಕೇಂದ್ರ ಅಸೆಂಬ್ಲಿಯಲ್ಲಿ ಬಾಂಬೆಸೆತ. ಹೆಚ್ಚುತ್ತಿದ್ದ ಕಾರ್ಮಿಕ ಆಂದೋಲನವನ್ನು ದಮನ ಮಾಡಲು ವ್ಯಾಪಾರ ವಿವಾದ ಮಸೂದೆ ಹಾಗೂ ಸಾರ್ವಜನಿಕ ಸುರಕ್ಷಾ ಮಸೂದೆ ಗಳನ್ನು ಮಂಡಿಸುವ ಕಾರ್ಯಕ್ರಮವಿತ್ತು. ಈ ಮಸೂದೆಗಳು ಪಾಸಾಗದಿದ್ದರೆ ತಾನು ವಿಶೇಷಾಜ್ಞೆ ಹೊರಡಿಸುವುದಾಗಿ ವೈಸರಾಯ್ ಬೆದರಿಸಿದ್ದ. 'ಈ ಮಸೂದೆಗಳನ್ನು ಅಂಗೀಕರಿಸುವುದಾದರೆ ಅಸೆಂಬ್ಲಿಯ ಓಟನಿಂದ ಅಂಗೀಕರಿಸುವಂತಾಗದಿರಲಿ ಎಂದು ನಾವು ಕೇಂದ್ರ ಅಸೆಂಬ್ಲಿಯಲ್ಲಿ ಬಾಂಬ್ ಹಾಕುವ ಯೋಜನೆ ರೂಪಿಸಿದೆವು" ಎಂದು ಆ ನಂತರ ಶಿವವರ್ಮಾ ತಮ್ಮ ಸ್ಮರಣೆಯಲ್ಲಿ ಹೇಳಿಕೊಂಡಿದ್ದಾರೆ. ಬಾಂಬ್‌ಎಸೆದು, ಭಗತ್‌ಸಿಂಗ್ ಶರಣಾಗಿ ಕೋರ್ಟ್‌ನಲ್ಲಿ ತಮ್ಮ ಸಿದ್ಧಾಂತವನ್ನು, ಕ್ರಾಂತಿಯೆಂದರೆ ತಮ್ಮ ಅರ್ಥವೇನೆಂದು ದೇಶಕ್ಕೇ ತಿಳಿಸುವುದು ಎಂದು ಅವರ ಯೋಜನೆ ಯಾಗಿತ್ತು. ಆ ಪ್ರಕಾರವೇ ನಡೆಯಿತು. ಶಿವವರ್ಮಾ ಮೇ 1929 ಸಹಾರಾಣಪುರದಲ್ಲಿ ಪೋಲಿಸರ ಕೈಗೆ ಸಿಕ್ಕಿ ಬಿದ್ದರು. ಎಲ್ಲರ ಮೇಲೆ ಎರಡನೇ ಲಾಹೊರ್ ಪಿತೂರಿ ಮೊಕದ್ದಮೆ ಆರಂಭವಾಯಿತು.

ಈ ಮೊಕದ್ದಮೆಯನ್ನು ಹೇಗೆ ಎದುರಿಸುವುದು ಎಂಬ ಬಗ್ಗೆಯೂ ಅವರೆಲ್ಲಾ ಸೇರಿ ಯೋಜನೆ ತಯಾರಿಸಿದರು. ತಮ್ಮನ್ನು ಮೂರು ಗುಂಪುಗಳಾಗಿ ಮಾಡಿಕೊಂಡರು. ಮೊದಲನೆಯ ಗುಂಪು ಒಬ್ಬ ವಕೀಲರ ಮೂಲಕ ವಾದಿಸುವುದು, ಎರಡನೇ ಗುಂಪು ಕೋರ್ಟಿನ ನ್ಯಾಯಬದ್ಧತೆಯನ್ನೇ ಪ್ರಶ್ನಿಸಿ ಅದರ ಕಲಾಪಗಳಿಗೆ ಪ್ರತಿಹಂತದಲ್ಲೂ ಸವಾಲು ಹಾಕುವುದು ಹಾಗೂ ಮೂರನೇ ಗುಂಪು ತಮ್ಮ ಪರವಾಗಿ ತಾವೇ ಕೋರ್ಟಿನಲ್ಲಿ ವಾದಿಸಿ ತಮ್ಮ ಕಣ್ಣೋಟವನ್ನು ದೇಶದ ಮುಂದಿಡುವುದು. ಭಗತ್ ಸಿಂಗ್, ಶಿವವರ್ಮಾ ಈ ಮೂರನೇ ಗುಂಪಿನಲ್ಲಿದ್ದರು. ಈ ವಿಚಾರಣೆಯ ಸಮಯದಲ್ಲಿ ಶಿವವರ್ಮಾ ತಮ್ಮ ವಾದ ಹಾಗೂ ಪಾಟಿ ಸವಾಲುಗಳ ಮೂಲಕ ಸಾಕ್ಷಿಗಳನ್ನು, ಸರಕಾರಿ ವಕೀಲರನ್ನು ನಡುಗಿಸಿಯೇ ಬಿಡುತ್ತಿದ್ದರಂತೆ.

ಭಗತ್‌ಸಿಂಗರ ಮಾತು ಹುಸಿಯಾಗಲಿಲ್ಲ

ಕೊನೆಗೂ ನಿರೀಕ್ಷೆಯಂತೆ ಅಕ್ಟೋಬರ್ 1929 ರಲ್ಲಿ ಭಗತ್‌ಸಿಂಗ್, ರಾಜಗುರು ಹಾಗೂ ಸುಖದೇವ್‌ಗೆ ಮರಣದಂಡನೆ, ಶಿವವರ್ಮಾ ಮತ್ತಿತರರಿಗೆ ಜೀವಾವಧಿ ಕರಿನೀರಿನ ಶಿಕ್ಷೆಯಾಯಿತು. ಭಗತ್‌ಸಿಂಗರನ್ನು ನೇಣುಗಂಬದತ್ತ ಕರೆದೊಯ್ಯುತ್ತಿದ್ದಾಗ ಜೈಲಿನ ಸಲಾಕೆಗಳ ಹಿಂದಿನಿಂದಲೇ ಶಿವವರ್ಮಾ ಕೊನೆಯ ವಿದಾಯ ಹೇಳುವಾಗ ಕಣ್ಣಲ್ಲಿ ನೀರು ಸುರಿದಿತ್ತು. ಭಗತ್ ಸಿಂಗ್ ಹೇಳಿದ್ದರಂತೆ -"ಇದು ಭಾವಾವೇಶಕ್ಕೆ ಒಳಗಾಗುವ ಸಮಯ ವಲ್ಲ, ನಾನಿನ್ನು ಎಲ್ಲ ಜವಾಬ್ದಾರಿಗಳಿಂದ ಮುಕ್ತನಾಗುತ್ತೇನೆ. ಆದರೆ ನೀನು ಒಂದು ದೀರ್ಘ ಹೋರಾಟ ನಡೆಸಬೇಕಾಗಿದೆ. ದೀರ್ಘ ಪಯಣದ ಹೊರೆಯೇನಿದ್ದರೂ ನೀನು ದಣಿಯದೆ, ಹತಾಶನಾಗದೆ ಸೋಲೊಪ್ಪದೆ ಪಯಣವನ್ನು ಮುಂದುವರೆಸುವೆ ಎಂಬ ವಿಶ್ವಾಸ ನನಗಿದೆ"

ತನ್ನ ಸಂಗಾತಿಯ ವಿಶ್ವಾಸ ಹುಸಿಯಾಗದಂತೆ ನೋಡಿಕೊಂಡರು ಶಿವವರ್ಮಾ- ಕೊನೆಯುಸಿರಿರುವವರೆಗೂ.

ಜೈಲಿನಲ್ಲಿ ಮೂಲಭೂತ ಸೌಲಭ್ಯಗಳಿಗಾಗಿ ದೀರ್ಘಕಾಲದ ಉಪವಾಸಗಳನ್ನು ನಡೆಸಿ ಧೀರೋದಾತ್ತವಾಗಿ ಹೋರಾಡಿದ್ದಲ್ಲದೇ ಜೈಲಿನಲ್ಲಿದ್ದ ಕ್ರಾಂತಿಕಾರಿಗಳ ನಡುವೆ ಮಾರ್ಕ್ಸ್‌ವಾದಿ ವಿಚಾರಧಾರೆಯನ್ನು ಪ್ರಚಾರ ಮಾಡುವಲ್ಲಿ ಇವರ ಶ್ರಮ ಅಪಾರ. ಅವರ ಜತೆಗಿದ್ದ ಹಲವು ಕ್ರಾಂತಿಕಾರಿಗಳನ್ನು 1945 ರ ವೇಳೆಗೆ ಬಿಡುಗಡೆ ಮಾಡಲಾಯಿತು. ಆದರೆ ಶಿವವರ್ಮಾ ಬಿಡುಗಡೆಯಾದದ್ದು ಸ್ವಾತಂತ್ರ್ಯದ ನಂತರವೇ.

ಬಿಡುಗಡೆಯಾದ ಕೂಡಲೇ ಶಿವವರ್ಮಾ ಕಮ್ಯುನಿಸ್ಟ್ ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾದರು. ಸ್ವತಂತ್ರ ಭಾರತದಲ್ಲಿ ಮತ್ತೆ 1948, 1962, 1965 ರಲ್ಲಿ ಜೈಲು ವಾಸ ಅನುಭವಿಸಿದರು. ಅವರು ಅವಿಭಜಿತ ಸಿಪಿಐ ನ ಉತ್ತರ ಪ್ರದೇಶ ರಾಜ್ಯ ಕಾರ್ಯದರ್ಶಿ ಯಾಗಿದ್ದರು. ಪಕ್ಷದ ಹಿಂದಿ ಪತ್ರಿಕೆಯ ಸಂಪಾದಕರಾಗಿದ್ದರು. 1964 ರಲ್ಲಿ ಪಕ್ಷದ ವಿಭಜನೆಯ ನಂತರ ಸಿಪಿಐ(ಎಂ) ನ ಉತ್ತರ ಪ್ರದೇಶ ರಾಜ್ಯ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ಈ ವರ್ಷದ ಜನವರಿ 10 ರಂದು ತಮ್ಮ 93ನೇ ವಯಸ್ಸಿನಲ್ಲಿ ನಿಧನರಾದರು.

ವಜ್ರ ಮೇಲೋ, ಕಲ್ಲು ಮೇಲೋ?

ಶಿವವರ್ಮಾ ಚಿಂತಕರೂ, ಉತ್ತಮ ಸಂಘಟಕರೂ ಆಗಿದ್ದರಲ್ಲದೆ ಒಬ್ಬ ಉತ್ತಮ ಲೇಖಕರೂ ಆಗಿದ್ದರು. ಭಗತ್‌ಸಿಂಗ್ ಮತ್ತಿತರ ಸಂಗಾತಿಗಳ ಬಗ್ಗೆ ಅವರ ನೆನಪುಗಳು ಬಹುಶಃ ಸೈದ್ಧಾಂತಿಕವಾಗಿ ಹಾಗೂ ವೈಯುಕ್ತಿಕವಾಗಿ ಅನುಭವಗಳ ಗಾಥೆಯಾಗಿ ಒಂದು ಅತ್ಯುತ್ತಮ ಕೃತಿ.

ಅವರ ಕ್ಷೀಣ ಶರೀರವನ್ನು ನೋಡಿದರೆ ಇವರು ಬಾಂಬು, ರಿವಾಲ್ವರುಗಳ ಸಂಘಟನೆಯ ಒಬ್ಬ ಸಕ್ರಿಯ ಸದಸ್ಯ ಎಂದು ಯಾರೂ ನಂಬುತ್ತಿರಲಿಲ್ಲವಂತೆ. ಸ್ವತಃ ಶಿವವರ್ಮಾರವರಿಗೂ ಆಗಾಗ ತನ್ನ ಸಾಮರ್ಥ್ಯದ ಬಗ್ಗೆ ಸಂದೇಹ ಬರುತ್ತಿತ್ತಂತೆ. ಕಾನಪುರದ ಒಂದು ಕಾರ್ಯಾಚರಣೆಗೆ ಭಗತ್‌ಸಿಂಗ್ ತನ್ನ ಬದಲು ಗಟ್ಟಿಮುಟ್ಟಾದ ಜೈದೇವ್‌ನನ್ನು ಆರಿಸಿದಾಗ ಅದನ್ನು ವ್ಯಕ್ತ ಗೊಳಿಸಿದ್ದರೂ ಕೂಡ. ಅದಕ್ಕೆ ಭಗತ್‌ಸಿಂಗ್‌ರ ಉತ್ತರ ಬಹಳ ಮಾರ್ಮಿಕವಾಗಿತ್ತು-

"ನಾವೆಲ್ಲಾ ಸೈನಿಕರು. ಸಹಜವಾಗಿಯೇ 'ಕಾರ್ಯಾಚರಣೆ'ಯೆಂದರೆ ಸೈನಿಕರಿಗೆ ಎಲ್ಲಿಲ್ಲದ ಸಂಭ್ರಮ. ಆದರೆ ನಮ್ಮ ಆಂದೋಲನ ಯಶಸ್ವಿಯಾಗಬೇಕಾದರೆ ನಮ್ಮಲ್ಲಿ ಕೆಲವರು ಈ ಅವಿವೇಕವನ್ನು ಬಿಡಬೇಕು. ನಿಜ, ಹುತಾತ್ಮ ಪ್ರಭೆ ಸಾಮಾನ್ಯವಾಗಿ ಕಾರ್ಯಾಚರಣೆಯ ವ್ಯಕ್ತಿಗಳನ್ನು ಅಥವಾ ನೇಣುಗಂಬವೇರು ವವರನ್ನು ಆವರಿಸಿರುತ್ತದೆ. ಆದರೆ ಅವರೆಲ್ಲಾ ಒಂದು ಸ್ಮಾರಕದ ಬಾಗಿಲಲ್ಲಿ ಹೊಳೆಯುವ ವಜ್ರಗಳಂತೆ. ವಜ್ರ ಎಷ್ಟೇ ಅಮೂಲ್ಯವಾಗಿರ ಬಹುದು. ಆದರೆ ಅದು ಆ ಸ್ಮಾರಕದ ಬುನಾದಿ ಯಲ್ಲಿರುವ ಸಾಮಾನ್ಯ ಕಲ್ಲಿಗೆ ಹೋಲಿಸಿದರೆ ಏನೂ ಅಲ್ಲ. ಒಂದು ಕಟ್ಟಡದ ಹೊಳಪನ್ನು ಹೆಚ್ಚಿಸಬಹುದು. ವೀಕ್ಷಕನ ಕಣ್ಣು ಕೋರೈಸ ಬಹುದು. ಆದರೆ ಅದು ಅಡಿಗಲ್ಲಾಗಲು ಸಾಧ್ಯವಿಲ್ಲ. ಅದು ಸಹನ ಶಕ್ತಿಯನ್ನು ಕೊಡಲಾರದು. ಅದು ಸ್ಮಾರಕಕ್ಕೆ ಆಧಾರ ಸ್ತಂಭವಾಗದು. ನಾವೆಲ್ಲಾ ಎಷ್ಟೇ ತ್ಯಾಗ ಮಾಡಿದರೂ ನಮ್ಮ ಆಂದೋಲನ ವಜ್ರಗಳನ್ನು ಗಳಿಸಿದೆಯೇ ಹೊರತು ಅಡಿಗಲ್ಲುಗಳನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ"

ಸದ್ದಿಲ್ಲದೆ, ಆಡಂಬರವಿಲ್ಲದೆ ಕೆಲಸ ಮಾಡುತ್ತಿದ್ದ ಶಿವವರ್ಮಾ ಇಂತಹ ಅಡಿಗಲ್ಲುಗಳಲ್ಲಿ ಒಬ್ಬರು ಎಂದು ಭಗತ್‌ಸಿಂಗ್ ಗುರುತಿಸಿದ್ದರು. ಅದು ನಿಜವಾಯಿತು.

ವಾರದ ಆರ್ಥಿಕ ಟಿಪ್ಪಣಿಗಳು

ಟಿ.ಎಸ್.ಮಣಿ

ಕೋಟೆಯ ಹೊರಗೆ ಕಾದಿರುವ ವಿದೇಶೀ ವಿಮೆಯವರು

ಈಗ ವಿದೇಶೀ ವಿಮಾ ಕಂಪನಿಗಳು ಭಾರತದ ಕೋಟೆಯ ಹೊರಗೆ ಕಾದಿದ್ದಾರೆ. ಅಂದರೆ ಭಾರತದೇಶ ದೊಳಕ್ಕೆ ಬಂದು ತಮ್ಮ ವ್ಯವಹಾರ ಪ್ರಾರಂಭಿಸಲು ಅವರು ಕಾದಿದ್ದಾರೆ. ಒಳಗೇಕೆ ಬಂದಿಲ್ಲ ಎಂದು ಕೇಳಬಹುದು ನೀವು. ಕಳೆದ ಸಂಸತ್ ಅಧಿವೇಶನದಲ್ಲಿ ವಿಮಾ ನಿಯಂತ್ರಣ ಪ್ರಾಧಿಕಾರದ ಕಾಯಿದೆ ಅನುಮೋದನೆ ಪಡೆಯದೇ ಅದನ್ನು ಹಿಂದಕ್ಕೆ ಪಡೆಯಬೇಕಾಯಿತಲ್ಲ. ಅದರಿಂದಾಗಿ ಸರ್ಕಾರ ಅಂದರೆ ಕೇಂದ್ರ ಸರ್ಕಾರದ ಹಣಕಾಸು ಮಂತ್ರಾಲಯ ಈ ಕಂಪನಿಗಳಿಗೆ ಲೈಸೆನ್ಸು ನೀಡುವುದನ್ನು ತಾತ್ಕಾಲಿಕವಾಗಿ ತಡೆಹಿಡಿಯಬೇ ಕಾಯಿತು.

ಎಡಪಕ್ಷಗಳ ತೀವ್ರ ವಿರೋಧದಿಂದಾಗಿ ಈ ಮಸೂದೆ ಸಂಸತ್ತಿನಲ್ಲಿ ಅನುಮೋದನೆ ಪಡೆಯಲಿಲ್ಲ. ಅಲ್ಲದೆ ವಿಮಾ ವಲಯದ ಕೆಲಸಗಾರರ ತೀವ್ರ ವಿರೋಧವೂ ಈ ದಿಸೆಯಲ್ಲಿ ಕೆಲಸ ಮಾಡಿತು. ಈಗ ಸದ್ಯಕ್ಕೆ ವಿದೇಶೀ ವಿಮಾ ಕಂಪನಿಗಳು ದೇಶದೊಳಕ್ಕೆ ಬರುವುದನ್ನು ಇದು ತಡೆದಿದೆ.

ಹಣಕಾಸು ಮಂತ್ರಾಲಯ ಈಗ ಹೊಸತಾಗಿ ವಿದೇಶೀ ಕಂಪನಿಗಳ ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲವಂತೆ. (ಯಾವ ವಿದೇಶೀ ಕಂಪನಿಗಳ ಅರ್ಜಿಗಳನ್ನು ಆಗಲೇ ಸ್ವೀಕರಿಸಿದೆಯೋ ಅವುಗಳಿಗೆ ಉತ್ತರ ಹೇಳುವುದೇ ಕಷ್ಟವಾಗಿದೆಯಲ್ಲ)

ವಿದೇಶೀ ಕಂಪನಿಗಳೂ ನೇರವಾಗಿ ವಿಮಾ ವ್ಯವಹಾರವನ್ನೇ ಪ್ರಾರಂಭಿಸಲು ಲೈಸನ್ಸ್ ಕೇಳಿರಲಿಲ್ಲ. ಯಾಕೆಂದರೆ ಈಗ ಅಂತಹ ಅವಕಾಶವಿಲ್ಲ. ಬದಲಿಗೆ ಅವು ಕೇಳಿದ್ದು ಒಂದು ಪ್ರಾತಿನಿಧಿಕ ಕಚೇರಿಯನ್ನು ತೆರೆಯಲು. ಪ್ರಾತಿನಿಧಿಕ ಕಚೇರಿಯನ್ನು ತೆರೆದ ಮೇಲೆ ಇಲ್ಲಿ ಎಂತೆಂತಹ ಕುತಂತ್ರಗಳನ್ನು ಮಾಡಬೇಕೆಂದು ಅವರಿಗೆ ಗೊತ್ತುಬಿಡಿ. ದೇಶದ ವಿಮಾ ಮಾರುಕಟ್ಟೆಯನ್ನು (ವ್ಯಾಪಾರೀ ದೃಷ್ಟಿಯಿಂದ) ಅಧ್ಯಯನ ಮಾಡುವುದರ ಸರ್ಕಾರದೊಡನೆ ಲಾಬಿ ಮಾಡುವುದರವರೆಗೆ ಈ ಪ್ರಾತಿನಿಧಿಕ ಕಚೇರಿಯ ಚಟುವಟಿಕೆ ಹಬ್ಬುತ್ತದೆ. ಇರಲಿ. ಸದ್ಯಕ್ಕಂತೂ ಇದಕ್ಕೆ ಲೈಸನ್ಸ್ ದೊರೆತಿಲ್ಲ. ವಿಮಾ ವಲಯದ ಕೆಲಸಗಾರರು ಮತ್ತು ಎಡಪಕ್ಷಗಳಿಗೆ ಈ ವಿದೇಶೀ ಕಂಪನಿಗಳನ್ನು ಶಾಶ್ವತವಾಗಿ ತಡೆಯುವ ಹೋರಾಟದ ದಾರಿಯಲ್ಲಿ ಕ್ರಮಿಸುವ ಅವಶ್ಯಕತೆ ಈಗಲೂ ಇದೆ.

ಅಂತರ್ರಚನಾ ವಲಯದಲ್ಲಿ ನಕಾರಾತ್ಮಕ ಬೆಳವಣಿಗೆ

ವಿದ್ಯುತ್ ಕಲ್ಲಿದ್ದಲು ಉತ್ಪಾದನೆ, ತೈಲ ಸಂಸ್ಕರಣೆ, ರೈಲು, ಸಿಮೆಂಟ್ ಉತ್ಪಾದನೆ, ರಸ್ತೆ ಇತ್ಯಾದಿಗಳೆಲ್ಲ ಅಂತರ್ರಚನಾ ಸೌಕರ್ಯಗಳು. ಯಾಕೆಂದರೆ ಇವು ಉತ್ಪಾದನೆ, ಸೇವೆ ಇತ್ಯಾದಿಗಳ ಬೆಳವಣಿಗೆಗೆ ಅಡಿಗಲ್ಲಾಗಿರುತ್ತವೆ. ಆದ್ದರಿಂದಲೇ ಇವು ಅಂತರ್ರಚನಾ ಸೌಕರ್ಯಗಳು. ಯಾವುದೇ ದೇಶದ ಅಭಿವೃದ್ಧಿಯಾಗಬೇಕಾದರೆ ಈ ವಲಯದ ಅಪಾರ ಬೆಳವಣಿಗೆ ಯಾಗಬೇಕು. ಈ ವಲಯ ಹಿಂದೆ ಬಿದ್ದರೆ ಉಳಿದಂತೆ ಬೆಳವಣಿಯಾಗುವ ಸಾಧ್ಯತೆ ಬಹಳ ಕಡಿಮೆಯಾಗುತ್ತದೆ.

ಈಗ ಈ ವಲಯದಲ್ಲಿ ಬೆಳವಣಿಗೆಯ ದರ ಕಡಿಮೆಯಾಗಿದೆ ಎಂದರೆ ಅಲ್ಪಸ್ವಲ್ಪವಾದರೂ ಬೆಳವಣಿಗೆ ಆಗುತ್ತಿದೆ ಎಂದರ್ಥವಾಯಿತಲ್ಲವೇ! ಇಲ್ಲಿ ಈ ವಲಯದಲ್ಲಿ ಈಗ ನಕಾರಾತ್ಮಕ ಬೆಳವಣಿಗೆಯಾಗುತ್ತಿದೆಯಂತೆ. ಅಂದರೆ ಈ ಹಿಂದೆ ಇದ್ದ ಮಟ್ಟಕ್ಕಿಂತಲೂ ಕೆಳಗೆ ಹೋಗುತ್ತಿದೆ ಎಂದು ಅರ್ಥ.

ವಿದ್ಯುತ್ ಉತ್ಪಾದನೆ, ಕಲ್ಲಿದ್ದಲು ಉತ್ಪಾದನೆ, ಕಚ್ಚಾತೈಲ ಸಂಸ್ಕರಣೆ, ರೈಲು ಹೇರುವಿಕೆ ಮತ್ತು ಸಿಮೆಂಟ್ ಉತ್ಪಾದನೆ ಇವುಗಳಲ್ಲೆಲ್ಲಾ ನಕಾರಾತ್ಮಕ ಬೆಳವಣಿಗೆ ಕಳೆದ ಆಗಸ್ಟ್ ತಿಂಗಳಲ್ಲಿ ಇತ್ತಂತೆ.

ಔದ್ಯಮಿಕ ಬೆಳವಣಿಗೆ ಮೇ ತಿಂಗಳಲ್ಲಿ ಶೇ. 5.1 ರಷ್ಟಿದ್ದದ್ದು ಜೂನ್ ತಿಂಗಳಿನಲ್ಲಿ ಶೇ 4.3 ಕ್ಕೆ ಇಳಿದಿದೆಯಂತೆ. ಈ ನಕಾರಾತ್ಮಕ ಬೆಳವಣಿಗೆ ಸೆಪ್ಟೆಂಬರ್ ವರೆವಿಗೂ ಮುಂದುವರೆದಿರಬಹುದೆಂದು ಊಹೆ.

ಉದಾರೀಕರಣದಿಂದ ಆರ್ಥಿಕದಲ್ಲಿ ಅಪಾರ ಬೆಳವಣಿಗೆ ಆಗಿ ಆ ಬೆಳವಣಿಗೆಯ ಲಾಭಗಳು ತೊಟ್ಟಿಕ್ಕುತ್ತ ಬಡಜನರವರೆಗೂ ಇಳಿದು ಬಡತನ ಹೋಗಲಾಡಿಸುತ್ತದೆ ಎಂದು ಉದಾರೀಕರಣವಾದಿಗಳು ಇದನ್ನು ವಿವರಿಸಲು ಹವಣಿಸುತ್ತಿದ್ದಾರೆ.

"ಬೆಳವಣಿಗೆ ನಕಾರಾತ್ಮಕವಾಗಿರುವುದೇ ಬೆಳವಣಿಗೆ" ಎಂದರೆ?

ಅವರಿಗೂ ನಂಬಿಕೆಯಿಲ್ಲ

ಉದಾರೀಕರಣದಿಂದ ಲಾಭವಾಗುವ ಬಂಡವಾಳಿಗರಿಗೇ ಈ ಉದಾರೀಕರಣದ ಕ್ರಮಗಳ ಮೇಲೆ ಅದರಿಂದಾಗುವ ಲಾಭದ ಬಗ್ಗೆ ಭರವಸೆಯಿಲ್ಲದಿದ್ದರೆ? ಒಂದು ಸಂಶೋಧನೆ ಇವರ ಇಂತಹ ಸಂಶಯವನ್ನೇ ಎತ್ತಿ ತೋರಿದೆ.

ನ್ಯಾಶನಲ್ ಕೌನ್ಸಿಲ್ ಫಾರ್ ಅಪ್ಲೈಡ್ ಇಕಾನಾಮಿಕ್ ರಿಸರ್ಚ್ 500 ದೊಡ್ಡ ಮತ್ತು ಚಿಕ್ಕ ಕಂಪನಿಗಳವರನ್ನು ಈ ಬಗ್ಗೆ ಪ್ರಶ್ನಿಸಿತು. ಕೇಂದ್ರ ಸರ್ಕಾರದ ಬಜೆಟ್ಟಿನಿಂದಾಗಿ ಉಂಟಾದ ಆಶಾಭಾವನೆ ಈಗ ಬತ್ತಿ ಹೋಗುತ್ತಿದೆ ಎಂಬುದು ಅವರ ಪ್ರತಿಕ್ರಿಯೆಗಳಿಂದ ತಿಳಿದು ಬಂದಿದೆಯಂತೆ. ಔದ್ಯಮಿಕ ಮತ್ತು ವ್ಯಾಪಾರೀ ಚಟುವಟಿಕೆಗಳಿಗೆ ವೇಗ ಬರುತ್ತದೆ ಎಂಬ ಆಶಾಭಾವನೆಗೆ ಹೊಡೆತ ಬಿದ್ದಿದೆಯಂತೆ. ಯಾಕೆ? ಯಾಕೆಂದರೆ ಒಟ್ಟುತ್ಪಾದನೆ ಬರೀ ಶೇ.7 ರಷ್ಟಿರುವುದರಿಂದ ಹಣಕಾಸು ಪೂರೈಕೆ ಶೇ. 16 ರಷ್ಟಿದ್ದು ಹಣಕಾಸಿನ ಬೇಡಿಕೆ ತೀವ್ರವಾಗಿ ಬೆಳೆಯಬೇಕಾಗಿತ್ತು. ಆದರೆ ಬ್ಯಾಂಕುಗಳಲ್ಲಿ ಹಣಕಾಸಿನ ರಾಶಿಯಿದೆ. ಬಡ್ಡಿದರ ಕಡಿಮೆಯಾಗಿದ್ದರೂ ಈ ಹಣಕ್ಕೆ ಬೇಡಿಕೆಯಿಲ್ಲ. ನಿಜದಲ್ಲಿ ಉದ್ಯಮಗಳಲ್ಲಿರುವ ಮಾಲಿಗೆ ಬೇಡಿಕೆ ಇಲ್ಲದಿರುವುದರಿಂದ ಬೆಳವಣಿಗೆ ಮರೀಚಿಕೆಯಾ ಗಿದೆ.

ಡಾಲರಿಗೆದುರಾಗಿ ರೂಪಾಯಿ ಪ್ರಬಲವಾಗಿರುವುದರಿಂದ ರಫ್ತು ಬೆಳೆಯುತ್ತಿಲ್ಲ. ಹೀಗೆ ಸಮಸ್ಯೆಗಳು ಒಂದೆರಡಲ್ಲ, ಹಲವು, ಆದ್ದರಿಂದಲೇ ಈ ಬಂಡವಾಳಿಗರಿಗೂ ಬೆಳವಣಿಗೆಯ ಬಗ್ಗೆ ಭರವಸೆಯಿಲ್ಲ. ಹೇಗಿದೆ ಈ ಪರಿಸ್ಥಿತಿ!

ವ್ಯಾಪಾರೀ ಕೊರತೆ

ಇಷ್ಟೆಲ್ಲ ಉದಾರೀಕರಣ ಮಾಡಿ ಸಾಧಿಸಿದ್ದೇನು ಎಂದು ಕೇಳಿ. ಉದಾರೀಕರಣವಾದಿಗಳು ನೂರೆಂಟುಗಳ ಒಂದು ಪಟ್ಟಿಯನ್ನೇ ಕೊಡುತ್ತಾರೆ. ಆದರೆ ಉದಾರೀಕರಣದಿಂದ ಮುಖ್ಯವಾಗಿ ಆಗಬೇಕಾದ ರಫ್ತು ಹೆಚ್ಚಳ ಮತ್ತು ವ್ಯಾಪಾರೀ ಮಿಗುತಾಯ ಆಗಿದೆಯೇ ಎಂದು ಕೇಳಿ. ಇಲ್ಲ, ಮುಖ್ಯ ಉದ್ದೇಶವೇ ಈಡೇರದೇ ಇರುವಾಗ ಇದಾಗಿದೆ ಅದಾಗಿದೆ ಎಂದರೆ ಅದಕ್ಕೆ ಅರ್ಥವಿದೆಯೇ?

ರಫ್ತು ಬೆಳವಣಿಗೆ ಈ ಹಣಕಾಸು ವರ್ಷದಲ್ಲಿ ಇದ್ದದ್ದು ಆಗಸ್ಟ್ ವೇಳೆಗೆ ಅಲ್ಪಸ್ವಲ್ಪ ಬೆಳವಣಿಗೆ ತೋರುತ್ತಿದೆಯಂತೆ. ಆದರೆ ವ್ಯಾಪಾರಿ ಕೊರತೆ ಹೆಚ್ಚುತ್ತಲೇ ಇದೆಯಂತೆ. ಅಂದರೆ ರಫ್ತಿಗಿಂತ ಆಮದೇ ಹೆಚ್ಚಾಗಿದೆ ಎಂದರ್ಥ.

ಆಮದು ಉದಾರೀಕರಣದ ಮೂಲಕವೇ ರಫ್ತನ್ನು ಹೆಚ್ಚುಗೊಳಿಸುತ್ತೇನೆಂದು ಹೊರಟ ಉದಾರೀಕರಣವಾದಿಗಳ ಆಶಾಭಾವನೆಗೆ ಏನೂ ಅರ್ಥವಿಲ್ಲವೆಂಬುದು ಸ್ಪಷ್ಟ. ಅಪಾರ ತೆರಿಗೆ ರಿಯಾಯತಿ ಪಡೆದ ಬಂಡವಾಳಶಾಹಿ ವರ್ಗ ಅಪಾರ ಪ್ರಮಾಣದಲ್ಲಿ ಭೋಗ ವಸ್ತುಗಳ ಆಮದು ಮಾಡಿಕೊಂಡಿರುವ ಸಾಧ್ಯತೆ ಇದೆ. ಉತ್ಪಾದಕ ಉದ್ದೇಶಗಳಿಗೆ ಆಮದು ಹೆಚ್ಚಾಗುವ ಬದಲು ಐಷಾರಾಮಿ ಐಭೋಗಕ್ಕಾಗಿ ಆಮದು ಹೆಚ್ಚಾದರೆ ಅದರಿಂದ ರಫ್ತು ಹೆಚ್ಚಾಗಲು ಸಾಧ್ಯವಿಲ್ಲವಲ್ಲವೇ?

ಇವೆಲ್ಲವುಗಳ ಒಟ್ಟಾರೆ ಹೊರೆಯನ್ನಂತೂ ಜನಸಾಮಾನ್ಯರ ಹೆಗಲಿಗೇ ದಾಟಿಸಲಾಗುತ್ತಿದೆ ಅಲ್ಲವೆ?

ರೈಲ್ವೆ ಹೊರೆಯ ಮೇಲೆ ಹೊರೆ

ಕೊನೆಗೂ ರೈಲ್ವೆ ಸಾಗಾಣಿಕೆಯ ದರವನ್ನು ಹೆಚ್ಚು ಮಾಡಲಾಗಿದೆ. ರೈಲ್ವೆ ಪ್ರಯಾಣ ದರದಲ್ಲಿ ಹೆಚ್ಚಳ ಮಾಡಲಾಗಿಲ್ಲ. ಶ್ರೀಮಂತರಿಗೆ ರಿಯಾಯಿತಿ ನೀಡಿ ಅದರ ಹೊರೆಯನ್ನು ಜನಸಾಮಾನ್ಯರ ಮೇಲೆ ಹೇರುವ ಕೇಂದ್ರ ಸಂಯುಕ್ತ ರಂಗ ಸರ್ಕಾರದ ನೀತಿಯ ಫಲ ಇದು. ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ರೈಲ್ವೆಯ ಏರಿದ ಖರ್ಚಿನ (ಐದನೇ ವೇತನ ಆಯೋಗದ ಶಿಫಾರಸ್ಸುಗಳ ಅನುಷ್ಠಾನದಿಂದ) ಭಾರವನ್ನೂ ಸ್ವಲ್ಪ ಮಾತ್ರವೂ ಹೊರಲು ತಯಾರಿಲ್ಲದೇ ಇರುವುದರಿಂದ ಈ ಹೆಚ್ಚಳ. ಹೇಗೇ ಇರಲಿ ಇದು ಜನಸಾಮಾನ್ಯರ ಮೇಲೆ ಈ ಸರ್ಕಾರ ಹೇರಿದ ಹೊರೆ. ಇದರಿಂದಾಗಿ ಕಲ್ಲಿದ್ದಲು ಮತ್ತು ಇತರ ಹಲವು ಸರಕುಗಳ ಸಾಗಾಣಿಕೆ ವೆಚ್ಚ ಹೆಚ್ಚಾಗಿ ಅದರಿಂದಾಗಿ ಒಟ್ಟಾರೆಯಾಗಿ ಬೆಲೆಗಳು ಹೆಚ್ಚಾಗಲಿವೆ

ಇದು ಈ ಸದ್ಯದ ಕ್ರಮ. ಇನ್ನು ಪ್ರಯಾಣ ದರದ ಹೆಚ್ಚಳದ ಜೊತೆಗೆ ಒಂದು ಮಧ್ಯಂತರ ಮಿನಿ ರೈಲ್ವೆ ಬಜೆಟ್ಟನ್ನೇ ಮಂಡಿಸಲಾಗುತ್ತದೆ ಎಂಬ ಸುದ್ದಿಯೂ ಇದೆ. ದೇಶದ ಜನ ಸಾಮಾನ್ಯರ ಮೇಲೆ ಇನ್ನೂ ಹೆಚ್ಚಿನ ಹೊರೆ ಬೀಳಲಿದೆ.

ಸಂಯುಕ್ತರಂಗ ಸರ್ಕಾರದ ವಿಶ್ವಾಸ ಘಾತುಕತನವಲ್ಲವೆ ಇದು?

ಉದಾರೀಕರಣವಾದಿಗಳಿಂದ ದೇಶದ ಸಾರ್ವಭೌಮತೆಯ ಮೇಲೆ ಮತ್ತೊಂದು ಹಲ್ಲೆ

ಲಂಚ-ರುಷುವತ್ತಿಗೆ ಹೊಸ ಬಾಗಿಲೊಂದನ್ನು ತೆರೆಯಬೇಡಿ ಎಂದು ಸಿಪಿಐ(ಎಂ) ಆಗ್ರಹ

ಭಾರತ ಸರ್ಕಾರ ದೇಶದೊಳಗೆ ಆಮದಾಗುವ ಸರಕುಗಳ ಸುಂಕ ನಿರ್ಧರಣೆಯ ನೀತಿಗೆ ಸಂಬಂಧಪಟ್ಟಂತೆ ಒಂದು ಪ್ರಮುಖ ಬದಲಾವಣೆ ತರುವ ಯೋಚನೆಯಲ್ಲಿದೆ ಎಂದು ತಿಳಿದು ಬಂದಿದೆ. ಇದುವರೆಗೆ ದೇಶದೊಳಗೆ ಬರುತ್ತಿದ್ದ ಆಮದಿನ ಮೌಲ್ಯವನ್ನು ಭಾರತೀಯ ಕಸ್ಟಮ್ಸ್(ಸೀಮಾ ಸುಂಕ) ವಿಭಾಗವೇ ನಿರ್ಧರಿಸಿ ಅದರ ಪ್ರಕಾರ ಸುಂಕ ಹಾಕುತ್ತಿದೆ. ಇದನ್ನು ಬದಲಿಸಿ ಈ ಕೆಲಸವನ್ನು ಸಂಬಂಧ ಪಟ್ಟ ಸರಕನ್ನು ಭಾರತಕ್ಕೆ ರಫ್ತು ಮಾಡುವ ಮೊದಲೇ ವಿದೇಶೀ ಕಂಪನಿಗಳು ನಿರ್ಧರಿಸಲು ಅವಕಾಶ ಕೊಡಬೇಕೆಂದು ಸರಕಾರ ಯೋಚಿಸುತ್ತಿದೆಯಂತೆ. ಯಥಾಪ್ರಕಾರ ಇದರಿಂದ ದಕ್ಷತೆ ಹೆಚ್ಚುತ್ತದೆ ಎಂಬ ವಾದ ಇದ್ದೇ ಇದೆ. ಇದರರ್ಥ ಯುರೋಪು, ಅಮೆರಿಕಾದಿಂದ ಭಾರತಕ್ಕೆ ಆಮದಾಗುವ ಸರಕುಗಳ ಮೌಲ್ಯವನ್ನು ಅವನ್ನು ಹಡಗಿಗೆ ಹಾಕುವ ಮೊದಲೇ ಅಲ್ಲಿಯ ಕಂಪನಿಗಳೇ ನಿರ್ಧರಿಸಿ ಭಾರತೀಯ ಕಸ್ಟಮ್ಸ್ ಅಧಿಕಾರಿಗಳಿಗೆ ತಿಳಿಸುತ್ತವೆ. ಭಾರತೀಯ ಅಧಿಕಾರಿಗಳು ಅವರ ಸಲಹೆಯ ಪ್ರಕಾರವಷ್ಟೇ ಸುಂಕಗಳನ್ನು ವಸೂಲಿ ಮಾಡಬೇಕು. ಈ ಮೂಲಕ ಆಮದು ಸುಂಕವನ್ನು ಗೊತ್ತುಪಡಿಸಿ ಸಂಗ್ರಹಿಸುವ ಸಾರ್ವಭೌಮ ಕರ್ತವ್ಯವೊಂದನ್ನು ಈಗ ವಿದೇಶಿ ಕಂಪನಿಗಳಿಗೆ ವಹಿಸಿಕೊಟ್ಟಂತಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಏಕೆಂದರೆ ಈ ಕ್ರಮ ಉನ್ನತ ಮಟ್ಟಗಳಲ್ಲಿ ಬೃಹತ್ ಸ್ವರೂಪದ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುತ್ತದೆ. ಇದು ಕೇವಲ ಊಹೆಯಲ್ಲ, ಆಫ್ರಿಕಾ, ಏಶ್ಯಾದ ಕೆಲವು ಅಭಿವೃದ್ಧಿಶೀಲ ದೇಶಗಳ ಅನುಭವ ನಮ್ಮ ಮುಂದಿದೆ.

ಇಂಡೋನೇಶ್ಯಾ ಕಳೆದ ದಶಕದ ಮಧ್ಯಭಾಗದಲ್ಲಿ ಈ ಪದ್ಧತಿಯನ್ನು ಅಳವಡಿಸಿತು. ಜಿನೆವಾ ಎಸ್.ಜಿ.ಎಸ್. ಕಂಪನಿಗೆ ಈ ರೀತಿಯ ರಫ್ತು ಮೌಲ್ಯ ಹಾಗೂ ಸುಂಕ ನಿರ್ಧರಣೆಯ ಕೆಲಸವನ್ನು ವಹಿಸಿತ್ತು. ಅಲ್ಲಿಯ ಅಧ್ಯಕ್ಷ ಸುಹಾರ್ತೊರವರ ಕುಟುಂಬದ ಸಂಪತ್ತಿನ ಬಹುಪಾಲು ಮೂಲ ಇದೇ ಎಂದು ಹೇಳಲಾಗುತ್ತಿದೆ.

ಪಕ್ಕದ ಪಾಕಿಸ್ತಾನದ ಇತ್ತೀಚಿನ ಉದಾಹರಣೆ ಇದನ್ನು ಇನ್ನಷ್ಟು ಸ್ಪಷ್ಟಗೊಳಿಸಿದೆ. ಹಿಂದಿನ ಬೆನಝಿರ್ ಸರಕಾರ ಇದೇ ಕಂಪನಿಗೆ ಹಾಗೂ ಅದರ ಉಪ ಸಂಸ್ಥೆ ಕೋಟೆನಾ ಇನ್ಸ್‌ಪೆಕ್ಷನ್‌ಗೆ ಇಂತಹುದೇ ಕೆಲಸ ವಹಿಸಿತ್ತು. ಈಗ ಪಾಕಿಸ್ತಾನ ಸರಕಾರ ಆ ಕಾಂಟ್ರಾಕ್ಟನ್ನು ರದ್ದು ಮಾಡಿದೆ. ಈ ಕಂಪನಿಗಳು ಬೆನಝಿರ್ ಭುಟ್ಟೋ ಮತ್ತು ಆಕೆಯ ಪತಿಗೆ ಬೃಹತ್ ಪ್ರಮಾಣದಲ್ಲಿ ಲಂಚ ನೀಡಿವೆ ಎಂಬುದು ಬೆಳಕಿಗೆ ಬಂದ ಮೇಲೆ ಪಾಕಿಸ್ತಾನ ಸರಕಾರ ಈ ಕ್ರಮ ಕೈಗೊಂಡಿದೆ. ಅಲ್ಲಿಯ 'ತನಿಖಾ ಆಯೋಗ' ದ ವರದಿಯ ಪ್ರಕಾರ ಈ ಎರಡು ಕಂಪನಿಗಳು ತಮ್ಮ ಆದಾಯದ 9% ವರೆಗೆ ಲಂಚವಾಗಿ ಕೊಟ್ಟಿವೆ.

ಆತಂಕದ ವಿಷಯವೆಂದರೆ ಭಾರತ ಸರಕಾರದ ಉಚ್ಚ ನಿಯೋಗವೊಂದು ಈ ತಿಂಗಳಲ್ಲಿ ಜುಲೈನಲ್ಲಿ ಇದೇ ಕಂಪನಿ ಯೊಂದಿಗೆ ಈ ಬಗ್ಗೆ ಮಾತುಕತೆ ಆರಂಭಿಸಿದೆ. ಈಗ ಇನ್ನೊಂದು ಆಯೋಗ ಲಂಡನ್ನಿನಲ್ಲಿಯೂ ಈ ಬಗ್ಗೆ ಮಾತುಕತೆ ನಡೆಸುತ್ತಿದೆ ಎಂದು ತಿಳಿದುಬಂದಿದೆ.

ವಾಸ್ತವವಾಗಿ ಮೂರು ವರ್ಷಗಳ ಹಿಂದೆ ನರಸಿಂಹರಾವ್ ಸರಕಾರದ ಅಡಿಯಲ್ಲೇ ಈ ಪ್ರಸ್ತಾಪ ಬಂದಿತ್ತು. ಉದಾರೀಕರಣದ ಭಾಗವಾಗಿ ಬಂದ ಈ ಸಲಹೆ ಬಹುರಾಷ್ಟ್ರೀಯ ಕಂಪನಿಗೆ ಈ ಕೆಲಸ ವಹಿಸಿಕೊಟ್ಟರೆ ಸುಂಕ ವಸೂಲಿಯಲ್ಲಿ ದಕ್ಷತೆ ಹೆಚ್ಚುತ್ತದೆಯೆಂಬ ವಾದ ಹೂಡಿತ್ತು. ಆದರೆ ಆ ಪ್ರಯತ್ನಕ್ಕೆ ಆಗ ಬೆಂಬಲ ಸಿಗಲಿಲ್ಲ. ಈಗ ಮತ್ತೆ ಅದನ್ನು ದ್ವಿಗುಣ ಉತ್ಸಾಹದಿಂದ ಕೈಗೆತ್ತಿಕೊಳ್ಳಲಾಗಿದೆ. ಹಣಕಾಸು ಇಲಾಖೆಯ ಹಿರಿಯ ಅಧಿಕಾರಿಗಳು ಈ ಯೋಜನೆಯನ್ನು ಬೇಗನೇ ಅಳವಡಿಸುವ ತರಾತುರಿಯಲ್ಲಿದ್ದಾರೆ.

ವಾಸ್ತವವಾಗಿ ಇಂಡೋನೇಶ್ಯಾದಲ್ಲಿ ರೆವಿನ್ಯೂ ಆದಾಯ 9% ಆಮದು ಸುಂಕದಿಂದ ಬರುತ್ತಿದ್ದರೆ ಭಾರತದಲ್ಲಿ 23% ಆಮದು ಸುಂಕದಿಂದ ಬರುತ್ತದೆ. ಭಾರತದಲ್ಲಿ ಈಗಿರುವ ಸುಂಕ ನಿರ್ಣಯ ಹಾಗೂ ವಸೂಲಿ ಪದ್ಧತಿ ಸಾಕಷ್ಟು ಚೆನ್ನಾಗಿಯೇ ನಡೆಯುತ್ತಿದೆ. ಆದ್ದರಿಂದ ಇದನ್ನು ಬದಲಿಸಲು ತರ್ಕಬದ್ಧ ಕಾರಣಗಳೇನೂ ಇಲ್ಲ. ದಕ್ಷತೆಯ ಹೆಸರಲ್ಲಿ ಈ ಕೆಲಸವನ್ನು ವಿದೇಶಿ ಕಂಪನಿಗಳಿಗೆ ವಹಿಸಿದರೆ ರಫ್ತು ಸುಂಕಗಳನ್ನು ಹಡಗಿಗೆ ಹಾಕುವ ಮೊದಲು ಮಾಡುವ ಮೌಲ್ಯ ನಿರ್ಧಾರಣೆಯಲ್ಲಿ ಸಾಕಷ್ಟು ವಂಚನೆ- ಮೋಸಗಳಿಗೆ, ಆ ಮೂಲಕ ಉನ್ನತ ವಲಯದಲ್ಲಿ ಲಂಚ ರುಷುವತ್ತುಗಳಿಗೆ ಅವನ್ನು ವಿದೇಶಿ ಖಾತೆಗಳಲ್ಲಿ ಜಮಾ ಮಾಡಲು ಅವಕಾಶ ಕಲ್ಪಿಸಿಕೊಡುವ ದೊಡ್ಡ ಅಪಾಯವಿದೆ.

ಆದ್ದರಿಂದ ಭಾರತ ಸರ್ಕಾರ ಈ ಪ್ರಸ್ತಾಪವನ್ನು ಕೈಬಿಡಬೇಕು ಎಂದು ಒತ್ತಾಯಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ವಿದೇಶಿ ಕಂಪನಿ ಗಳಿಗೆ ಇದನ್ನು ವಹಿಸಿಕೊಡುವ ಮಾತು ಕತೆಗಳ ಬಗ್ಗೆ ತನ್ನ ನಿಲುವನ್ನು ಸ್ಪಷ್ಟೀಕರಿಸ ಬೇಕು ಎಂದು ಒತ್ತಾಯಿಸಿದೆ.

(ಐಎನ್ಎಸ್)

ಟಾಟಾ ಕಂಪನಿ ತನ್ನ ಅಧಿಕಾರಿಯನ್ನು ರಕ್ಷಿಸುವ ಪ್ರಯತ್ನವನ್ನೇಕೆ ಮುಂದುವರಿಸುತ್ತಿದೆ?

ಕೆಲವು ದೂರವಾಣಿ ಸಂಭಾಷಣೆಗಳ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವ ಸುದ್ದಿಗಳು ಬಹಳ ಆತಂಕಕಾರಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅಕ್ಟೋಬರ್ 7 ರಂದು ನೀಡಿರುವ ಒಂದು ಹೇಳಿಕೆಯಲ್ಲಿ ಚಿಂತೆ ವ್ಯಕ್ತಪಡಿಸಿದೆ.

ಆತಂಕಕ್ಕೆ ಎರಡು ಕಾರಣಗಳಿವೆ. ಒಂದು, ಈ ದೂರವಾಣಿ ಕದ್ದಾಲಿಕೆ ಕಾನೂನು ಬಾಹಿರವಾಗಿ ನಡೆದಿದೆಯೆಂಬುದು ಸ್ಪಷ್ಟ. ಇದರ ತನಿಖೆಯಾಗಿ ತಪ್ಪಿತಸ್ಥ ವ್ಯಕ್ತಿ, ಸಂಸ್ಥೆಗಳ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು. ಈ ಕಾನೂನು ಬಾಹಿರ ವ್ಯವಹಾರವನ್ನು ಬಾಡಿಗೆಗೆ ನಡೆಸುವ ಹಲವಾರು ಖಾಸಗೀ ಸಂಸ್ಥೆಗಳಿವೆ ಎಂಬುದು ಸರಕಾರಕ್ಕೆ ಗೊತ್ತಿರಬೇಕು.

ಎರಡನೆಯದಾಗಿ, ಈ ಟೆಲಿಫೋನ್ ಸಂಭಾಷಣೆಗಳು ದೇಶದಲ್ಲಿ ದೊಡ್ಡ ಬಂಡವಾಳಿಗರ ಕೆಲಸದ ವಿಧಾನದ ಒಂದು ಇಣುಕು ನೋಟವನ್ನು ನೀಡಿವೆ. ಅಸ್ಸಾಂ ಸರಕಾರ ನಡೆಸುತ್ತಿರುವ ಗಂಭೀರ ತನಿಖೆ ಮತ್ತು ಕಾನೂನು ಕ್ರಮಗಳನ್ನು ತಪ್ಪಿಸಲು ಕೇಂದ್ರ ಸರಕಾರದ ಮೇಲೆ ಹಾಗೂ ಗುಪ್ತಚರ ಸಂಘಟನೆಗಳ ಮೇಲೆ ಪ್ರಭಾವ ಬೀರಲು ಎಂತಹ ಪ್ರಯತ್ನಗಳನ್ನು ನಡೆಸಲಾಗುತ್ತಿದೆ ಎಂಬ ಆತಂಕಕಾರಿ ಸಂಗತಿ ಇದರಿಂದ ಬಯಲಿಗೆ ಬಂದಿದೆ.

ತನ್ನ ಒಬ್ಬ ಉನ್ನತ ಅಧಿಕಾರಿ ಉಲ್ಫಾ ಉಗ್ರಗಾಮಿ ಸಂಘಟನೆಯೊಂದಿಗೆ ಶಾಮೀಲಾಗಿರುವ ಸಂಗತಿಯನ್ನು ಅಸ್ಸಾಂ ರಾಜ್ಯ ಸರ್ಕಾರ ಸಾಕಷ್ಟು ಉತ್ತಮ ರೀತಿಯಲ್ಲಿ ಸಾಬೀತುಪಡಿಸಿದ ಮೇಲೂ ಟಾಟಾ ಟೀ ಕಂಪನಿ ಆತನನ್ನು ರಕ್ಷಿಸುವ ಪ್ರಯತ್ನವನ್ನು ಏಕೆ ಮುಂದುವರಿಸುತ್ತಿದೆ ಎಂಬ ಬಗ್ಗೆ ವಿವರಣೆ ಕೊಡಬೇಕಾಗುತ್ತದೆ. ನಿಜ, ಕಳೆದ ಕೆಲವು ವರ್ಷಗಳಲ್ಲಿ ಉಗ್ರಗಾಮಿ ಪಿಡುಗಿನಿಂದಾಗಿ ಅಸ್ಸಾಂನಲ್ಲಿ ವ್ಯವಹಾರ ನಡೆಸುವಲ್ಲಿ ಬಹಳ ಕಷ್ಟಗಳಿದ್ದವು. ಅದನ್ನೂ ಒಪ್ಪಿಕೊಳ್ಳೋಣ. ಆದರೆ ಬಲವಂತಕ್ಕೆ ಒಳಗಾಗಿರುವುದಕ್ಕೂ, ಸಕ್ರಿಯ ಸಹಕಾರಕ್ಕೂ ವ್ಯತ್ಯಾಸವಿದೆ. ಈ ವ್ಯತ್ಯಾಸವನ್ನು ಉಳಿಸಿಕೊಳ್ಳಬೇಕಾದ್ದು ಪ್ರತಿಯೊಂದು ಕಂಪನಿಯ ಕರ್ತವ್ಯ. ಈ ಟಾಟಾ ಟೀ ಕಂಪನಿಯ ಉನ್ನತ ಅಧಿಕಾರಿ ಕೇವಲ ಬೆದರಿಕೆಗಳಿಗೆ ತಲೆಬಾಗಿ ವ್ಯವಹರಿಸಿದಂತಿಲ್ಲ, ಅದಕ್ಕಿಂತ ಬಹಳ ಮುಂದೆ ಹೋದಂತಿದೆ.

ಕೇಂದ್ರ ಸರಕಾರ ಅಸ್ಸಾಂ ಸರಕಾರದೊಡನೆ ಪರಿಣಾಮಕಾರಿಯಾಗಿ ಸಹಕರಿಸಿ ಉಗ್ರಗಾಮಿ ಗುಂಪುಗಳ ಬೆದರಿಕೆಗಳನ್ನು ಎದುರಿಸಲು ನೆರವಾಗಬೇಕು. ಆ ಗುಂಪುಗಳಿಗೆ ಬೆಂಬಲ, ಪೋಷಣೆ ಒದಗಿಸುವ ಇಂತಹ ಚಟುವಟಿಕೆಗಳನ್ನೆಲ್ಲಾ ಕೊನೆಗೊಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಗ್ರಹಪಡಿಸಿದೆ.



ಹರ್ಯಾಣ : ಚಳವಳಿ ನಿರತ ರೈತರ ಹತ್ಯೆ

ಹರಿಯಾಣದಲ್ಲಿ ಅಧಿಕಾರದಲ್ಲಿರುವ ಹರ್ಯಾಣ ವಿಕಾಸ ಪಕ್ಷ (ಎಚ್.ವಿ.ಪಿ) ಮತ್ತು ಭಾರತೀಯ ಜನತಾ ಪಕ್ಷ (ಬಿ.ಜೆ.ಪಿ) ಮಿತ್ರ ಕೂಟ ಸರಕಾರದ ಜನವಿರೋಧಿ ಧೋರಣೆ ಮತ್ತೊಮ್ಮೆ ಬಯಲಿಗೆ ಬಂದಿದೆ. ಈ ಸರಕಾರ ಚಳವಳಿ ನಿರತ ರೈತರ ಮೇಲೆ ಗುಂಡು ಹಾರಿಸಿ ಆರು ಜನರನ್ನು ಕೊಂದು ಹಾಕಿದೆ.

ರಾಜ್ಯದ ಮಹೇಂದ್ರಗಢ ಜಿಲ್ಲೆಯಲ್ಲಿ ಚಳವಳಿ ನಡೆಸುತ್ತಿದ್ದ ರೈತರ ಮೇಲೆ ಅಕ್ಟೋಬರ್ 10 ರಂದು ಪೋಲೀಸರು ಗೋಲಿಬಾರ್ ನಡೆಸಿದಾಗ ಆರು ಜನರು ಮೃತಪಟ್ಟರು.

ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರವಸ್ಥೆಯನ್ನು ಪ್ರತಿಭಟಿಸಿ ರೈತರು ಸೆಪ್ಟೆಂಬರ್ 1 ರಿಂದಲೇ ಹೋರಾಟ ನಡೆಸುತ್ತಿದ್ದಾರೆ.

ಕಿವುಡು ಸರಕಾರಕ್ಕೆ ತನ್ನ ಹೋರಾಟದ ಕೂಗು ತಲುಪದಿದ್ದಾಗ ಅದಕ್ಕೆ ಬಿಸಿ ಮುಟ್ಟಿಸುವ ಸಲುವಾಗಿ ಗ್ರಾಮೀಣ ಜನರು ಈ ಪ್ರದೇಶಗಳನ್ನು ಹಾದು ಹೋಗುವ ರೈಲ್ವೆ ಹಳಿಗಳ ಮೇಲೆ ಧರಣಿಯನ್ನು ಆರಂಭಿಸಿದ್ದರು. ರಸ್ತೆ ತಡೆ ಚಳವಳಿಗೆ ಮುಂದಾಗಿದ್ದರು.

ಸುಮಾರು ಒಂದೂವರೆ ತಿಂಗಳಿಂದ ರೈತರು ತಮ್ಮ ಟ್ರಾನ್ಸ್‌ಫಾರ್ಮರ್‌ಗಳ ರಿಪೇರಿಗೆ ಒತ್ತಾಯಿಸಿ ಚಳವಳಿ ನಡೆಸುತ್ತಿದ್ದರೂ ಅತ್ತ ಗಮನವನ್ನೇ ಹರಿಸದಿದ್ದ ಬನ್ಸೀಲಾಲ್ ನೇತೃತ್ವದ ಎಚ್.ವಿ.ಪಿ. ಮತ್ತು ಬಿಜೆಪಿ ಸರಕಾರ ಅಕ್ಟೋಬರ್ 10 ರ ಬೆಳಿಗ್ಗೆ ಪೋಲೀಸ್ ಪಡೆಯನ್ನು ಕಳಿಸಿ ಆರು ಜನರ ಮಾರಣ ಹೋಮ ನಡೆಸಿತು.

ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಸರಿಯಿಲ್ಲದೆ ರೈತರ ಕೃಷಿ ಕಾರ್ಯಕ್ಕೆ ತೀವ್ರ ಅಡಚಣೆಯಾಗಿದೆ. ಇದು ಒಂದೆಡೆಯಾದರೆ, ವಿದ್ಯುತ್ ಸರಬರಾಜು ಇಲ್ಲದಿದ್ದರೂ ವಿದ್ಯುತ್ ಮಂಡಳಿಯಿಂದ ರೈತರಿಗೆ ಬಿಲ್ ಬರುವುದು ಮಾತ್ರ ನಿಂತಿಲ್ಲ. ಇಂಥ ಪರಿಸ್ಥಿತಿಯಲ್ಲಿ ಹತಾಶರಾದ ರೈತರು ಹೋರಾಟಕ್ಕೆ ಇಳಿಯದೆ ಇನ್ನೇನು ತಾನೆ ಮಾಡಬಲ್ಲರು, ಅಲ್ಲವೇ?

ಆದರೆ ಟ್ರಾನ್ಸ್‌ಫಾರ್ಮರ್‌ಗಳನ್ನು ಸರಿಪಡಿಸಿ ಅನ್ನದಾತರ ಸಮಸ್ಯೆಯನ್ನು ಬಗೆಹರಿಸುವ ಬದಲು ಈ ಸರಕಾರ ಜನತೆಯ ಹೋರಾಟವನ್ನೇ ಬಂದೂಕು ಬಲದಿಂದ ಬಗ್ಗು ಬಡಿಯಲು ಹೊರಟಿರುವುದು ಸ್ಪಷ್ಟವಾಗಿದೆ.

ಶಾಂತರೀತಿಯಲ್ಲಿ ಹೋರಾಟ ನಡೆಸುತ್ತಿದ್ದ ರೈತರು ಉದ್ರಿಕ್ತರಾಗಿ ತೀಕ್ಷ್ಣ ಚಳುವಳಿಗೆ ಇಳಿಯಲು ಮುಖ್ಯಮಂತ್ರಿಯ ಮಗ ಹಾಗೂ ಭವಾನಿ ಲೋಕಸಭಾ ಸದಸ್ಯ ಸುರೇಂದ್ರ ಸಿಂಗ್ ಮತ್ತು ರಾಜ್ಯದ ಶಿಕ್ಷಣ ಮಂತ್ರಿ ರಾಮವಿಲಾಸ ಶರ್ಮಾ ಅವರ ಉದ್ರೇಕಕಾರಿ ಭಾಷಣಗಳೇ ಕಾರಣ ಎಂದು ಗೊತ್ತಾಗಿದೆ.

ಅತ್ಯಾಚಾರ ವಿರೋಧಿ ಹೋರಾಟಗಾರರ ಕೊಲೆ

ಆಂದೋಲನ ನಿರತ ರೈತಾಪಿ ಜನರ ಮೇಲೆ ಗೋಲಿಬಾರ್ ನಡೆಸುವ ಕೇವಲ ಎರಡು ದಿನಗಳ ಮುಂಚೆ ಇದೇ ಎಚ್.ವಿ.ಪಿ-ಬಿ.ಜೆ.ಪಿ ಸರಕಾರದ ಪೋಲೀಸರು ಇನ್ನೂ ಎರಡು ಜನರನ್ನು ಕೊಂದಿದ್ದರು.

ಹರ್ಯಾಣದ ಬಹಾದ್ದೂರಗಢ ಪ್ರದೇಶದಲ್ಲಿ ಒಬ್ಬ ಯುವತಿಯ ಮೇಲೆ ಅತ್ಯಾಚಾರ ನಡೆಸಿ ಆಕೆಯನ್ನು ಕೊಲೆ ಮಾಡಲಾಗಿತ್ತು. ಈ ಹೇಯ ಕೃತ್ಯವನ್ನು ಪ್ರತಿಭಟಿಸುತ್ತಿದ್ದ ಜನರ ಗುಂಪಿನ ಮೇಲೆ ಪೋಲೀಸರು ಗುಂಡು ಹಾರಿಸಿದಾಗ ಇಬ್ಬರು ಅಸು ನೀಗಿದರು.

ಜನತೆಯ ಪ್ರತಿಭಟನೆಗಳನ್ನು ಎದುರಿಸಲು ಬನ್ಸೀಲಾಲ್ ಸರಕಾರ ಹೆಚ್ಚೆಚ್ಚಾಗಿ ಪೋಲೀಸ್ ಬಲವನ್ನೇ ಅವಲಂಭಿಸುತ್ತಿರುವುದನ್ನು ಈ ಎರಡು ಪ್ರಕರಣಗಳು ಎತ್ತಿ ತೋರಿಸಿವೆ.

ಸಿಪಿಐ(ಎಂ) ಖಂಡನೆ

ಆರು ಮುಗ್ಧ ರೈತರನ್ನು ಕೊಂದ ಇನ್ನೂರು ಜನರನ್ನು ಗಾಯಗೊಳಿಸಿದ ನಿರ್ದಯ ಪೋಲೀಸ್ ಗೋಳೀಬಾರನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಕೊಲ್ಲಲ್ಪಟ್ಟವರ ಹಾಗೂ ಗಾಯಗೊಂಡವರ ಕುಟುಂಬಗಳಿಗೆ ಸಾಕಷ್ಟು ಪರಿಹಾರ ನೀಡಬೇಕು ಎಂದು ಒತ್ತಾಯಿಸಿರುವ ಪೊಲಿಟ್ ಬ್ಯೂರೋ ರೈತರಿಗೆ ತಕ್ಷಣ ವಿದ್ಯುತ್ ಪೂರೈಕೆಯನ್ನು ಪುನರಾಂಭಿಸಬೇಕು ಎಂದು ಒತ್ತಾಯಿಸಿದೆ.

ಉತ್ತರ ಪ್ರದೇಶದಲ್ಲಿ ದಲಿತರ ಮೇಲೆ ದಬ್ಬಾಳಿಕೆ

ಇತ್ತ ಬಿಜೆಪಿ ಪಾಲುದಾರನಾಗಿರುವ ಹರ್ಯಾಣದ ಸರಕಾರ ಜನತೆಯ ಹೋರಾಟವನ್ನು ಬಂದೂಕು ಬಲದಿಂದ ಬಗ್ಗು ಬಡಿಯಲು ಹೊರಟಿರುವ, ಅತ್ತ ಇದೀಗ ತಾನೆ ಅಧಿಕಾರ ಸೂತ್ರವನ್ನು ಬಿ.ಎಸ್.ಪಿ.ಯಿಂದ ತನ್ನ ಕೈಗೆ ತೆಗೆದುಕೊಂಡಿರುವ ಬಿ.ಜೆ.ಪಿ. ಉತ್ತರ ಪ್ರದೇಶದಲ್ಲಿ ಇದೇ ಹಾದಿಯಲ್ಲಿ ನಡೆದಿದೆ.

ಉತ್ತರ ಪ್ರದೇಶದ ಮುಜಾಪುರ ನಗರದಲ್ಲಿ ಮಹಿಳೆಯ ಅತ್ಯಾಚಾರ ಹಾಗೂ ಕೊಲೆಯನ್ನು ವಿರೋಧಿಸಿ ಅಕ್ಟೋಬರ್ 7 ರಂದು ಪ್ರದರ್ಶನ ನಡೆಸುತ್ತಿದ್ದ ದಲಿತರ ಮೇಲೆ ಕಲ್ಯಾಣಸಿಂಗ್ ಸರಕಾರ ಗೋಲೀಬಾರ್ ನಡೆಸಿತು.

ಆರು ತಿಂಗಳ ಹಿಂದೆ ಸರದಿ ಮೇಲೆ ಸರಕಾರ ನಡೆಸುವ ಒಪ್ಪಂದ ಬಿಎಸ್‌ಪಿ ಮತ್ತು ಬಿಜೆಪಿ ನಡುವೆ ರೂಪುಗೊಂಡಿತ್ತು. ಅದರ ಪ್ರಕಾರ ಬಿಎಸ್‌ಪಿ ಯ ಮಾಯಾವತಿ ಮೊದಲು ಮುಖ್ಯಮಂತ್ರಿ ಆಗಿದ್ದರು. ಆದರೆ ಒಪ್ಪಂದದ ಪ್ರಕಾರ ಅಧಿಕಾರವನ್ನು ಸುಲಭವಾಗಿ ಬಿಟ್ಟುಕೊಡಲು ಬಿಎಸ್‌ಪಿ ಸಿದ್ಧವಿರಲಿಲ್ಲ. ಅಂತೂ ಇಂತೂ ಚೌಕಾಶಿ ಮಾಡಿ ಅತ್ತು ಕರೆದು ಅಧಿಕಾರ ಪಡೆಯಲು ಬಿಜೆಪಿ ಸಫಲವಾಗಿದೆ.

ಬಿ.ಜೆ.ಪಿ ಸರಕಾರ ರಚಿಸಿದ ಕೆಲವೇ ದಿನಗಳಲ್ಲಿ ದಲಿತರ ಮೇಲೆ ದೌರ್ಜನ್ಯಕ್ಕೆ ಮುಂದಾಗಿದ್ದು ಸರಕಾರದ ಪಾಲುದಾರ ಪಕ್ಷವಾಗಿರುವ ಬಿಎಸ್‌ಪಿ ಇದರ ವಿರುದ್ಧ ಸಿಡಿದೆದ್ದಿದೆ. ಮೈತ್ರಿಕೂಟದಲ್ಲಿ ಇದರಿಂದ ಭಾರೀ ಬಿರುಕು ಉಂಟಾಗಿದೆ.

ಸರಕಾರದ ದಲಿತ ವಿರೋಧಿ ಕ್ರಮದ ವಿರುದ್ಧ ಬಿಎಸ್‌ಪಿ ಮಾತ್ರವಲ್ಲದೆ ಇತರೇ ಪ್ರಜಾಸತ್ತಾತ್ಮಕ ವಿಭಾಗಗಳ ಜನರೂ ಪ್ರತಿಭಟಿಸುವ ದನಿ ಎತ್ತಿದ್ದಾರೆ.

ಇದೀಗ, ಬಿಜೆಪಿ- ಬಿಎಸ್‌ಪಿ ನಡುವೆ 'ಯುದ್ಧ ವಿರಾಮ' ಏರ್ಪಟ್ಟಿದೆ. ಇದು ತಾತ್ಕಾಲಿಕ ತೇಪೆಯೇ ಹೊರತು ಖಾಯಂ ಅಂತೂ ಅಲ್ಲ. ಯಾವಾಗ ಬೇಕಾದರೂ ಉಭಯ ಪಕ್ಷಗಳು ಕಾದಾಟಕ್ಕಿಳಿಯುವ ಸಂಭವ ಇದ್ದೇ ಇದೆ. ಈ ಅಪವಿತ್ರ ಮೈತ್ರಿಕೂಟ ಎಷ್ಟು ಬೇಗ ತೊಲಗುತ್ತದೋ ದೇಶಕ್ಕೆ ಅಷ್ಟು ಒಳ್ಳೆಯದು.

ಉತ್ತರ ಪ್ರದೇಶ: ಪಕ್ಷದ ಮುಖಂಡ ಮಂಡಲ್ ಹತ್ಯೆ

ಲಖ್ನೌ: ಸಿಪಿಐ (ಎಂ) ಮುರ್ಷಿದಾಬಾದ್ ಜಿಲ್ಲಾ ಸಮಿತಿ ಸದಸ್ಯ ಕಾಂ. ಅವಾರ ಮಂಡಲ್ ಅವರನ್ನು ಈಚೆಗೆ ಸಮಾಜವಿರೋಧಿ ಶಕ್ತಿಗಳು ಕೊಂದು ಹಾಕಿದವು. ಕಾಂ. ಅವಾರ ಮಂಡಲ್ ಬೆಹ್ರಾಂಪುರ ಜಿಲ್ಲಾ ಕೇಂದ್ರದಿಂದ ಮರಳುತ್ತಿದ್ದಾಗ ದುಷ್ಕರ್ಮಿಗಳು ನಡೆಸಿದ ಹಲ್ಲೆಗೆ ತುತ್ತಾಗಿ ಸ್ಥಳದಲ್ಲೇ ಮೃತಪಟ್ಟರು.

ಪಕ್ಷದ ಒಬ್ಬ ಅನಾರೋಗ್ಯ ಪೀಡಿತ ಕಾರ್ಯಕರ್ತರೊಬ್ಬರ ಯೋಗಕ್ಷೇಮ ವಿಚಾರಿಸುವುದಕ್ಕಾಗಿ ಕಾಂ.ಅವಾರ ಮಂಡಲ್ ಬೆಹ್ರಾಂಪುರದ ಬೆಲ್ಡಂಗಾಕ್ಕೆ ಹೋಗಿದ್ದರು.

ಅವಿವಾಹಿತರಾಗಿದ್ದ ಕಾಂ. ಮಂಡಲ್, ವಿದ್ಯಾರ್ಥಿ ರಂಗದ ಮೂಲಕ ಪಕ್ಷವನ್ನು ಸೇರಿದ್ದರು. 1980 ರಲ್ಲಿ ಅವರು ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾಗಿದ್ದರು.

ಕಾಂ. ಯಮುನಾ ಟಂಡನ್ ನಿಧನ

ಲಖನೌ: ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ಕಾಂ. ಪಿ.ಕೆ.ಟಂಡನ್‌ರ ಪತ್ನಿ ಕಾಂ. ಯಮುನಾ ಟಂಡನ್ ಅಕ್ಟೋಬರ್ 6 ರಂದು ಲಖನೌದಲ್ಲಿ ನಿಧನರಾದರು. ಅವರು ಕ್ಯಾನ್ಸರ್‌ನಿಂದ ನರಳುತ್ತಿದ್ದರು.

ಸಿಪಿಐ(ಎಂ) ಉತ್ತರ ಪ್ರದೇಶ ರಾಜ್ಯ ಸಮಿತಿಯ ಮಾಜಿ ಕಾರ್ಯದರ್ಶಿ ಕಾಂ. ಶಂಕರ್ ದಯಾಳ್ ತಿವಾರಿ ಅವರ ತಂಗಿಯಾಗಿದ್ದ ಕಾಂ.ಯಮುನಾ, ಚಿಕ್ಕ ವಯಸ್ಸಿನಿಂದಲೇ ಪಕ್ಷ ಹಾಗೂ ಸಮೂಹಿಕ ಸಂಘಟನೆಗಳ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಎಸ್. ರಾಮಚಂದ್ರನ್ ಪಿಳ್ಳೈ, ಜಂಟಿ ಕಾರ್ಯದರ್ಶಿ ಎನ್.ಕೆ.ಶುಕ್ಲ ಮತ್ತು ಅಖಿಲ ಭಾರತ ಕೃಷಿ ಕೂಲೀಕಾರರ ಸಂಘದ ಸಹ ಕಾರ್ಯದರ್ಶಿ ಸುನೀತ ಚೋಪ್ರಾ ಕಾಂ.ಯಮುನಾ ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

ಶೆಖಾವತ್ ಸರಕಾರದ ವಿರುದ್ಧ ಆಂದೋಲನ

ಬಿ.ಜೆ.ಪಿ. ಪಾಲುದಾರ ಆಗಿರುವ ಎರಡು ರಾಜ್ಯಗಳಲ್ಲಿನ ಪರಿಸ್ಥಿತಿ ಹೀಗೆ. ಇನ್ನು ಬಿಜೆಪಿಯೇ ಸ್ವತಂತ್ರವಾಗಿ ಅಧಿಕಾರ ನಡೆಸುತ್ತಿರುವ ರಾಜಸ್ಥಾನದ ಪರಿಸ್ಥಿತಿಯೂ ಇದಕ್ಕೆ ಭಿನ್ನವೇನೂ ಅಲ್ಲ. ಈ ರಾಜ್ಯದಲ್ಲಿ ನಡೆದ ಎರಡು ಹೇಯ ಅತ್ಯಾಚಾರ ಪ್ರಕರಣಗಳಲ್ಲಿ ಅದರ ವಿರುದ್ಧ ನಡೆಯುತ್ತಿರುವ ಚಳವಳಿ ಬಗ್ಗೆ 'ಐಕ್ಯರಂಗ' ದ ಕಳೆದ ಕೆಲವು ಸಂಚಿಕೆಗಳಲ್ಲಿ ಓದುತ್ತಾ ಬಂದಿದ್ದೀರಿ.

ನಾಗರೀಕ ಸಮಾಜ ತಲೆ ತಗ್ಗಿಸಬೇಕಾದ ಮಹಿಳೆಯರ ಮಾನ ಹರಣ ಪ್ರಕರಣ ಮಾತ್ರವಲ್ಲ, ರಾಜ್ಯದ ಬಿಜೆಪಿ ಸರಕಾರ ಎಲ್ಲಾ ರಂಗಗಳಲ್ಲಿ ವಿಫಲವಾಗಿದೆ. ಇದನ್ನು ಮನಗಂಡು ಸಂಯುಕ್ತರಂಗದ ರಾಜ್ಯದ ಭಾಗೀದಾರ ಪಕ್ಷಗಳು ಭೈರವ ಸಿಂಗ್ ಶೆಖಾವತ್ ಸರಕಾರದ ವಿರುದ್ಧ ಜೂನ್ 16 ರಿಂದ 30 ರವರೆಗೆ ಮೊದಲ ಹಂತದ ಚಳವಳಿ ನಡೆಸಿದ್ದವು.

ಇದೀಗ ಈ ಮಾನಗೇಡಿ ಸರಕಾರದ ವಿರುದ್ಧ ಎರಡನೇ ಹಂತದ ಆಂದೋಲನ ನಡೆಸಲು ಜನತಾದಳ, ಸಿಪಿಐ(ಎಂ) ಮತ್ತು ಸಿಪಿಐ ಸಜ್ಜಾಗಿವೆ. ನವೆಂಬರ್ ಎಂಟರಂದು ರಾಜ್ಯದ ರಾಜಧಾನಿ ಜೈಪುರದ ಹುತಾತ್ಮರ ಸ್ಮಾರಕದ ಬಳಿ ಸಂಯುಕ್ತ ರ್‍ಯಾಲಿ ನಡೆಸುವ ಮೂಲಕ ಈ ಆಂದೋಳನವನ್ನು ಅವು ಆರಂಭಿಸಲಿವೆ.

ಬಾಲ ವೇಶ್ಯೆಯರು

ರಾಜ್ಯದಲ್ಲಿ ಸಂಪೂರ್ಣ ಅರಾಜಕತೆ ನೆಲೆಸಿದೆ. ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಕುಸಿದಿದೆ. ದುರ್ಬಲವರ್ಗಗಳು, ದಲಿತರು, ಆದಿವಾಸಿಗಳು ಮತ್ತು ಹಿಂದುಳಿದ ಜನರ ಮೇಲೆ ದೌರ್ಜನ್ಯ ದಬ್ಬಾಳಿಕೆ ನಡೆಯುತ್ತಿದೆ. ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗೆ ರಾಜ್ಯದಲ್ಲಿ ರಕ್ಷಣೆಯ ವಾತಾವರಣವಿಲ್ಲ. ಆಗಾಗ ಅತ್ಯಾಚಾರಗಳು ನಡೆಯುತ್ತಿವೆ. ಇಷ್ಟೇ ಅಲ್ಲದೆ, ಅತಿ ಹೆಚ್ಚು ಬಾಲ್ಯ ವೇಶ್ಯೆಯರಿರುವ ರಾಜ್ಯ ಎಂಬ ಕುಖ್ಯಾತಿ ರಾಜಸ್ಥಾನಕ್ಕೆ ಬಂದಿದೆ.

ಭೂರಹಿತ ಬಡಜನರಿಗೆ ಜಮೀನು ದೊರಕಲು ಅನುಕೂಲವಾಗುವಂತೆ ಭೂಸುಧಾರಣೆ ಕಾನೂನನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸುವ ಬದಲು ಬಿಜೆಪಿ ಸರಕಾರ ಸಾರ್ವಜನಿಕ ಜಮೀನನ್ನು ಹರಾಜು ಹಾಕಲು ಹೊರಟಿದೆ. ಪಾಳೇಗಾರಿ ಭೂಮಾಲೀಕರು ತಮ್ಮ ಜಮೀನಿನಿಂದ ಒಕ್ಕಲೆಬ್ಬಿಸುತ್ತಿದ್ದಾರೆ. ಅರಣ್ಯ ಉತ್ಪನ್ನಗಳ ಮೇಲಿನ ಹಕ್ಕಿನಿಂದ ಆರಿಸಿದ ಜನರನ್ನು ವಂಚಿಸಲಾಗುತ್ತಿದೆ.

ರಾಜ್ಯದಲ್ಲಿ ಅನೇಕ ಕೈಗಾರಿಕೆಗಳು ಮುಚ್ಚುತ್ತಿದ್ದು ನಿರುದ್ಯೋಗ ಸಮಸ್ಯೆ ಉಲ್ಬಣಿಸುತ್ತಿದೆ. ಕಾರ್ಮಿಕ ಸಂಘಗಳ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ತಪ್ಪಿತಸ್ಥ ಆಡಳಿತ ವರ್ಗಗಳಿಗೆ ಕಾರ್ಮಿಕ ಇಲಾಖೆ ರಕ್ಷಣೆ ಕೊಡುತ್ತಿದೆ.

ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯನ್ನು ಖಾಸಗೀಕರಣಗೊಳಿಸಲು ರಾಜ್ಯದ ಬಿಜೆಪಿ ಸರಕಾರ ಸಂಪೂರ್ಣ ಸನ್ನದ್ಧವಾಗಿದೆ. ಎರಡನೇ ಹಂತದ ಆಂದೋಲನದಲ್ಲಿ ಇದರ ವಿರುದ್ಧ ಹೆಚ್ಚು ಒತ್ತು ನೀಡಲಾಗುವುದು ಎಂದು ಪ್ರತಿಪಕ್ಷಗಳು ಘೋಷಿಸಿವೆ.


ಕಡು ಬಡವರಿಗೆ ಮಾರುಕಟ್ಟೆ ಬೆಲೆಗಿಂತ ಅರ್ಧ ಬೆಲೆಯಲ್ಲಿ ಪಡಿತರ, ಕುಡಿಯುವ ನೀರು ಸರಬರಾಜು, ರೈತರಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆ, ಅತಿವೃಷ್ಟಿಯಿಂದ ಬೆಳೆ ಹಾನಿಯಾದ ರೈತರಿಗೆ ಪರಿಹಾರ ನೀಡಿಕೆ ಮೊದಲಾದ ಬೇಡಿಕೆಗಳನ್ನು ಮಂಡಿಸಲಾಗುತ್ತದೆ ಎಂದು ಮೂರು ಪಕ್ಷಗಳು ಹೇಳಿವೆ.

ಭಾರತೀಯ ವಿಮೋಚನಾ ಸಮರ

ಪುಟ 4 ರಿಂದ



ಹೊರಹಾಕಲಾಗುವುದು ಎಂದು ಬೆದರಿಸುವ ಸುತ್ತೋಲೆಯೊಂದನ್ನು ಸರಕಾರ ಹೊರಡಿಸಿತು. ಇದನ್ನು ಪ್ರತಿಭಟಿಸಿ ಸುತ್ತೋಲೆ-ವಿರೋಧಿ ಸಮಿತಿ ಹುಟ್ಟಿಕೊಂಡಿತು. ಒಂದು ವಾರದೊಳಗೆ 'ರಾಷ್ಟ್ರೀಯ ವಿದ್ಯಾಲಯ' ಆಂದೋಲನ ಆರಂಭವಾಯಿತು. ರಾಷ್ಟ್ರೀಯವಾದಿ ಮುಸ್ಲಿಂ ಮುಖಂಡ ಲಿಯಾಕತ್ ಹುಸೇನ್ ನೇತೃತ್ವದಲ್ಲಿ ಸ್ವದೇಶಿ ಬಟ್ಟೆಗಳ ಮಾರಾಟ ನಡೆಯಿತು.



ಹಲವಾರು ನಗರ-ಪಟ್ಟಣಗಳಲ್ಲೂ ವಿದೇಶಿ ಬಟ್ಟೆಗಳನ್ನು ಸುಡುವ ಉತ್ಸವಗಳು ನಡೆದವು. ಅಷ್ಟೇ ಅಲ್ಲ ವಿದೇಶಿ ಸರಕುಗಳನ್ನೆಲ್ಲಾ ಬಹಿಷ್ಕರಿಸುವ ಪ್ರತಿಜ್ಞೆಗಳನ್ನು ಕೈಗೊಳ್ಳಲಾಯಿತು. ಉತ್ಪಾದನೆಯ ಸ್ವದೇಶೀಕರಣ ಅತ್ಯುತ್ಸಾಹದಿಂದ ನಡೆಯಿತು. ಹಲವಾರು ಜವಳಿ ಗಿರಣಿಗಳು, ಬೆಂಕಿಪೆಟ್ಟಿಗೆ ಹಾಗೂ ಸಾಬೂನು ಕಾರ್ಖಾನೆಗಳು ಆರಂಭವಾದವು. ಪಿ.ಸಿ.ರೇ ಬಂಗಾಲ್ ಕೆಮಿಕಲ್ ವರ್ಕ್ಸ್ ಆರಂಭಿಸಿದರು. ರವೀಂದ್ರನಾಥ್ ಟಾಗೋರ್ ಸ್ವದೇಶಿ ಭಂಡಾರ ಆರಂಭಿಸಿದರು. ವಿ.ಓ.ಚಿದಂಬರಂ ಪಿಳ್ಳೆ ತಮಿಳುನಾಡಿನ ಟುಟಿಕೋರಿನ್‌ನಲ್ಲಿ ಹಡಗು ಕಂಪನಿ ಸ್ಥಾಪಿಸಿದರು. 1857-59 ರಲ್ಲಿ ಬ್ರಿಟಿಶ್ ಮಹಾರಾಣಿ ದೇಶದ ಆಡಳಿತ ವಹಿಸಿಕೊಂಡಾಗ ಅದನ್ನು ಸ್ವಾಗತಿಸಿ 'ಎಂಪ್ರೆಸ್ ಮಿಲ್' ಆರಂಭಿಸಿದ ಜಮ್‌ಶೇಟ್ ಜಿ ಟಾಟಾ ಈಗ ಸ್ವದೇಶೀ ಮಿಲ್ ಸ್ಥಾಪಿಸಿದರು. ಸ್ವದೇಶೀ ಹಣ ಸಂಗ್ರಹಿಸಿ ಉಕ್ಕು ಕಾರ್ಖಾನೆ ಆರಂಭಿಸಿದರು. ಅದೇ ರೀತಿ ಭಾರತೀಯ ಬ್ಯಾಂಕುಗಳು, ವಿಮಾ ಕಂಪನಿಗಳು ಪ್ರಾರಂಭವಾದವು. ಪಂಜಾಬಿನಲ್ಲಿ ಲಜಪತ್ ರಾಯ್, ಮಹಾರಾಷ್ಟ್ರದಲ್ಲಿ ತಿಲಕ್ ಹಾಗೂ ದಿಲ್ಲಿಯಲ್ಲಿ ಸೈಯದ್ ಹೈದರ್ ರೆಝಾ ಸ್ವದೇಶೀ ಪ್ರಚಾರ ನಡೆಸಿದರು. ಈ ಮುಖಾಂತರವಾಗಿ ಆಂದೋಲನ ಪಟ್ಟಣಗಳ ವಿದ್ಯಾವಂತ ಮಧ್ಯಮ ವರ್ಗಕ್ಕೆ ಸೀಮಿತವಾಗಿದ್ದರೂ ಕಾರ್ಮಿಕ, ರೈತ ವಿಭಾಗಗಳನ್ನೂ ತಟ್ಟದೇ ಇರಲಿಲ್ಲ.



ಸ್ವದೇಶಿ ಆಂದೋಲನದ ಪ್ರಭಾವದಿಂದ ರೈಲ್ವೇ, ಸರಕಾರೀ ಪ್ರೆಸ್, ಸೆಣಬು ಗಿರಣಿಗಳು ಹಾಗೂ ಟ್ಯಾಕ್ಸಿ ಡ್ರೈವರುಗಳ ನಡುವೆ ಕೆಲವು ಕಾರ್ಮಿಕ ಸಂಘಗಳು ಮೂಡಿ ಬಂದವು. 1906 ರ ಜುಲೈನಲ್ಲಿ 'ಸಂಧ್ಯಾ' ಸಂಡೆ ದೈನಿಕದ ಕಚೇರಿಯಲ್ಲಿ ಒಂದು ರೈಲ್ವೇ ನೌಕರರ ಸಂಘ ಸ್ಥಾಪನೆಯಾಯಿತು. ಡಿಸೆಂಬರ್ 1906 ರಲ್ಲಿ ಕಲ್ಕತ್ತೆಯಲ್ಲಿ ದಾದಾಬಾಯಿ ನವರೋಜಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ರಾಷ್ಟ್ರೀಯ ಕಾಂಗ್ರೆಸ್ ಸ್ವರಾಜ್ಯ ಸ್ವದೇಶಿ ಆಂದೋಲನ ತನ್ನ ಪ್ರಧಾನ ಗುರಿ ಎಂದು ಸಾರಿತು. ಇಲ್ಲಿ ಮೊತ್ತಮೊದಲ ಬಾರಿಗೆ ಒಂದು ತ್ರಿವರ್ಣದ ರಾಷ್ಟ್ರೀಯ ಧ್ವಜವನ್ನು ಹಾರಿಸಲಾಯಿತು.

ಸ್ವದೇಶೀ ಆಂದೋಲನದ ಒಂದು ಪ್ರಮುಖ ದೌರ್ಬಲ್ಯ ಎಂದರೆ ಅದರ ನೇತೃತ್ವ ವಹಿಸಿದ್ದ ಉಗ್ರಗಾಮಿಗಳ ಮೇಲ್ಜಾತಿ ಹಾಗೂ ಹಿಂದೂಮತೀಯ ಸಿದ್ಧಾಂತಗಳು. ಇವರಲ್ಲಿ ಎಲ್ಲರೂ ಕೋಮುವಾದಿಗಳಲ್ಲದಿದ್ದರೂ ಮಂದಗಾಮಿಗಳ ಅರ್ಜಿ-ಮನವಿಯ ರಾಜಕೀಯ ಬಿಟ್ಟು ಜನಜಾಗೃತಿಯ ರಾಜಕೀಯ ಆರಂಭಿಸುವ ಭರದಲ್ಲಿ ಅವರು ಹಿಂದೂ ಧಾರ್ಮಿಕ ಆಚರಣೆಗಳಿಗೆ ಹೆಚ್ಚು ಒತ್ತುಕೊಟ್ಟರು. ಇದು ಒಂದು ಸ್ಥಿರ ಹಾಗೂ ದೃಢ ಹಿಂದೂ-ಮುಸ್ಲಿಂ ಐಕ್ಯತೆ ಬೆಸೆಯುವಲ್ಲಿ ಬಾಧಕವಾಯಿತು. ಇದರ ಲಾಭ ಪಡೆದ ಬ್ರಿಟಿಶ್ 'ಒಡೆದಾಳುವ' ನೀತಿಯಿಂದಾಗಿ 1906 ರಲ್ಲಿ ಢಾಕಾದಲ್ಲಿ ಅಖಿಲ ಭಾರತ್ ಮುಸ್ಲಿಂ ಲೀಗ್ ಆರಂಭವಾಯಿತು. ರಾಷ್ಟ್ರೀಯ ಕಾಂಗ್ರೆಸ್‌ನಂತೆ ಇದೂ ಬ್ರಿಟಿಶ್ ಅಧಿಕಾರಿಗಳ ಕೃಪಾಶ್ರಯದಲ್ಲಿ ಆರಂಭವಾಯಿತು.

(ಮುಂದುವರಿಯುವುದು)

ಸಿ.ಪಿ.ಐ (ಎಂ) ಕಾರ್ಯಕರ್ತರಿಂದ ಪಿಲಾರಿನಲ್ಲಿ ಹೊಸ ರಸ್ತೆ ನಿರ್ಮಾಣ

ಮಂಗಳೂರು: ಸುಮಾರು 20 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ನೂರಾರು ಜನರಿಗೆ ಸಂಪರ್ಕ ಕಲ್ಪಿಸಲು ಅಗತ್ಯವಾಗಿದ್ದ, ಸೋಮೇಶ್ವರ ಗ್ರಾಮದ ಪ್ರಕಾಶ ನಗರದಿಂದ ದಾರಂದ ಬಾಗಿಲು ಹೈವೆ ರಸ್ತೆಗೆ ಹಾದು ಬರುವ ಹೊಸ ರಸ್ತೆಯೊಂದನ್ನು ಪಿಲಾರು ಪ್ರದೇಶದ ಸಿ.ಪಿ.ಐ (ಎಂ) ಶಾಖೆಯ ಕಾರ್ಯದರ್ಶಿ ಮಾಂಕು ಶೆಟ್ಟಿಯವರು ಮತ್ತು ಕುಟುಂಬಸ್ಥರು ಸ್ಥಳದಾನ ಮಾಡಿದ ಕಾರಣದಿಂದ ಹಾಗೂ ಊರವರ ಸಹಕಾರದಿಂದ, ಸಿ.ಪಿ.ಐ (ಎಂ) ಪಿಲಾರು ಶಾಖೆ, ಮತ್ತು ಸಂಗಮ ಗೇಮ್ಸ್ ಟೀಮು ಲಕ್ಷ್ಮಿಗುಡ್ಡೆ ಕಾರ್ಯಕರ್ತರೂ 1 ದಿನದಲ್ಲಿ ಈ ಹೊಸ ರಸ್ತೆಯನ್ನು ಶ್ರಮದಾನದ ಮೂಲಕ ಮಾಡಿ ಊರಿನ ಜನರ ಮೆಚ್ಚುಗೆಗೆ ಪಾತ್ರವಾದರು.

ರಸ್ತೆ ಶ್ರಮದಾನ ಮಾಡುವ ಉದ್ಘಾಟನೆಯನ್ನು ಸಿ.ಪಿ.ಐ.(ಎಂ) ಉಳ್ಳಾಲ ಕ್ಷೇತ್ರ ಸಮಿತಿ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ ನೆರವೇರಿಸಿದರು.

ಅದೇ ದಿನ ಸಂಜೆ, ನಡೆದ ಹೊಸ ರಸ್ತೆಯ ಉದ್ಘಾಟನೆಯನ್ನು ಸೋಮೇಶ್ವರ ಮಂಡಲದ ಮಾಜಿ ಉಪ ಪ್ರಧಾನರಾದ ಪಿ. ಪರಮೇಶ್ವರ ಶೆಟ್ಟಿಯವರು ಬೈಕು ಚಲಾಯಿಸುವ ಮೂಲಕ ಕಾರ್ಯದರ್ಶಿ ಪಿ.ಗಂಗಯ್ಯ ಗಟ್ಟಿ, ಉದ್ಯಮಿ ಅಬ್ದುಲ್ ರೆಹಮಾನ್, ಸಿ.ಪಿ.ಐ ಎಂ ಉಳ್ಳಾಲ ಡಿ.ವೈ.ಎಫ್.ಐ ಮತ್ತು ಸಂಗಮ ಗೇಮ್ಸ್ ಟೀಮುವಿನ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಸಂಜೀವ ಪಿಲಾರು ಸ್ವಾಗತಿಸಿ, ಕೊನೆಯಲ್ಲಿ ರಸ್ತೆಗೆ ಸ್ಥಳದಾನ ಮಾಡಿದ ಕುಟುಂಬಸ್ಥರಿಗೆ, ಶ್ರಮಾದಾನದ ಎಲ್ಲಾ ಕಾರ್ಯಕರ್ತರಿಗೆ ಪಿ.ಗಂಗಯ್ಯ ಗಟ್ಟಿ ಧನ್ಯವಾದ ಅರ್ಪಿಸಿದರು.

ಕೊಡವ ಭಾಷೆಯ ಪುಸ್ತಕ ಪ್ರಕಟಣೆಗೆ ಒತ್ತಾಯ

ಪಕ್ಷದ ವಿರಾಜಪೇಟೆಯ ಶಾಖೆಯು, ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಹುತಾತ್ಮರಾದ ಮತ್ತು ನಮ್ಮ ಮಧ್ಯೆ ಬದುಕುತ್ತಿರುವ ಕೊಡಗಿನ ಸ್ವಾತಂತ್ರ್ಯ ಹೋರಾಟಗಾರರ, ಜಿಲ್ಲೆಯ ಚಳುವಳಿಯ ಇತಿಹಾಸವನ್ನು ಕುರಿತು ಒಂದು ಗ್ರಂಥವನ್ನು ಸ್ವಾತಂತ್ರ್ಯದ ಹೊಸ್ತಿನಬ್ಬದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕೊಡವ ಸಾಹಿತ್ಯ ಅಕಾಡೆಮಿ ಹೊರತರಬೇಕೆಂದು ಒತ್ತಾಯಿಸಿದೆ. ಪ್ರತ್ಯೇಕತಾವಾದ, ಜಾತಿವಾದ, ಕೋಮುವಾದಗಳಿಂದ ಆಕರ್ಷಿಸಲ್ಪಡುತ್ತಿರುವ ಯುವಕರಿಗೆ ದೇಶಪ್ರೇಮವನ್ನು ಬೆಳೆಸಲು ಆದರ್ಶಗಳನ್ನು ಬೆಳೆಸಿಕೊಳ್ಳಲು ಇಂತಹ ಗ್ರಂಥಗಳು ಸಹಕಾರಿಯಾಗುತ್ತವೆಂದು ಶಾಖೆಯು ಅಭಿಪ್ರಾಯಪಟ್ಟಿದೆ.

ಕೊಲ್ಲಿಯಿಂದ ದೂರ ನಿಲ್ಲಿ - ಅಮೆರಿಕಾಕ್ಕೆ ಇರಾನ್ ಸಲಹೆ

ಲೋಕಸಂಚಾರ

ಕೊಲ್ಲಿ ಪ್ರದೇಶದಲ್ಲಿ ಬೆದರಿಕೆಯಿರುವುದು ಇರಾನಿನಿಂದಲ್ಲ, ಅಲ್ಲಿರುವ ಅಮೆರಿಕಾದ ಯುದ್ಧ ಹಡಗುಗಳಿಂದ ಎಂದು ಇರಾನ್ ಅಮೆರಿಕಾಕ್ಕೆ ನೆನಪಿಸಿದೆ. ಪರ್ಶಿಯನ್ ಕೊಲ್ಲಿಯಲ್ಲಿ ಇರಾನ್ ನೌಕಾಸೇನಾ ಕವಾಯತು ನಡೆಸಿರುವುದರಿಂದ ಆ ಪ್ರದೇಶದಲ್ಲಿ ಗಂಭೀರ ಪರಿಸ್ಥಿತಿ ಉಂಟಾಗಿದೆ ಎಂದು ಹೇಳುತ್ತಾ ಅಮೆರಿಕಾ ತನ್ನ ವಿಮಾನವಾಹಕ ನೌಕೆಯನ್ನು ತರಾತುರಿಯಿಂದ ಅಲ್ಲಿ ಕಳಿಸಿರುವುದರ ಬಗೆ ಟಿಪ್ಪಣಿ ಮಾಡುತ್ತಾ ಇರಾನಿನ ರಕ್ಷಣಾ ಮಂತ್ರಿ ಹೀಗಂದಿದ್ದಾರೆ. ಈ ಪ್ರದೇಶದಿಂದ ಅಮೆರಿಕಾ ಮತ್ತಿತರ ವಿದೇಶಗಳ ಯುದ್ಧ ಹಡಗುಗಳು ಹೊರಟುಹೋದರೆ ಮಾತ್ರ ಪರಿಸ್ಥಿತಿ ತಿಳಿಯಾಗುತ್ತದೆ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ.

ಕೊಲ್ಲಿ ಪ್ರದೇಶದಲ್ಲಿ ತನ್ನ ನೌಕಾಪಡೆ ನಿಲ್ಲಿಸಿರುವುದನ್ನು ಸಮರ್ಥಿಸಿಕೊಳ್ಳಲು ಇದು ಅಮೆರಿಕಾದ ಪ್ರಚಾರ ತಂತ್ರವಷ್ಟೇ ಎಂದಿರುವ ಇರಾನ್ ಈ ಸಾಮರಿಕ ಮಹತ್ವದ ಕೊಲ್ಲಿ ಪ್ರದೇಶದಲ್ಲಿ ಹೊಸ ಭದ್ರತಾ ವ್ಯವಸ್ಥೆಯೊಂದಕ್ಕಾಗಿ ಸಹಕರಿಸಬೇಕು ಎಂದು ಆ ಪ್ರದೇಶದ ದೇಶಗಳಿಗೆ ಕರೆ ನೀಡಿದೆ. ತನ್ನ ನೌಕಾಸೇನಾ ಕವಾಯತು ಈ ಹಿಂದೆ ಪ್ರಕಟಿಸಿದ ವಾರ್ಷಿಕ ಕವಾಯತನ ಪರಿಮಿತಿಯೊಳಗೇ ಇದೆ ಎಂದು ಇರಾನಿನ ರಕ್ಷಣಾ ಮಂತ್ರಿ ಸ್ಪಷ್ಟಪಡಿಸಿದ್ದಾರೆ.

ಅಮೆರಿಕನ್ನರ ಪ್ರತಿನಿಧಿಗಳೇ ಅಥವಾ ಸಿಗರೇಟು ಕಂಪನಿಗಳ ಪ್ರತಿನಿಧಿಗಳೇ?

"ತಂಬಾಕು-ಮುಕ್ತ ಮಕ್ಕಳಿಗಾಗಿ ಪ್ರಚಾರ-ಪ್ರಕ್ಷೋಭೆ" ಸಂಘಟನೆ ಅಮೆರಿಕಾದಲ್ಲಿ ನಡೆಸಿದ ಒಂದು ಅಧ್ಯಯನದ ಫಲಿತಾಂಶಗಳು ಅಮೆರಿಕಾದ ಪ್ರಜಾಪ್ರಭುತ್ವ ಕೆಲಸ ಮಾಡುತ್ತಿರುವ ರೀತಿಯ ಇನ್ನೊಂದು ಉದಾಹರಣೆ ನಮ್ಮ ಮುಂದಿಟ್ಟಿದೆ.

ಅಪ್ರಾಪ್ತ ವಯಸ್ಕರಿಗೆ ತಂಬಾಕು ಮಾರಾಟವನ್ನು ತಡೆಯುವ ಕಾನೂನುಗಳನ್ನು ಜಾರಿ ಮಾಡಲು ಹಾಗೂ ಈ ಪಿಡುಗನ್ನು ಎದುರಿಸಲು ಆಹಾರ ಮತ್ತು ಔಷದಿ ಆಡಳಿತ(FDA) 34 ಮಿಲಿಯ ಡಾಲರುಗಳನ್ನು ಕೇಳಿತ್ತು. ಆದರೆ ಈ ಜುಲೈನಲ್ಲಿ ಸೆನೆಟ್ ಕಮಿಟಿ ಕೇವಲ 4.9 ಮಿಲಿಯ ಡಾಲರು ನೀಡಿತು. ಇದನ್ನು ಸರಿಪಡಿಸಿ ಪೂರ್ತಿ ಹಣ ಒದಗಿಸಬೇಕೆಂಬ ಸೆನೇಟರ್ ಹಾರ್ಕಿಸ್‌ನ ತಿದ್ದುಪಡಿ ಬಿದ್ದುಹೋಯಿತು. ಈ ತಿದ್ದುಪಡಿಗೆ ಸೆನೇಟರುಗಳ ಮತದ ವಿಶ್ಲೇಷಣೆಯನ್ನು ಮಾಡಿದ ಈ ಅಧ್ಯಯನಕ್ಕೆ ಕಂಡು ಬಂದ ಮಾಹಿತಿಗಳು ಹೀಗಿವೆ-

■ ಹಾರ್ಕಿಸ್ ತಿದ್ದುಪಡಿಯನ್ನು ವಿರೋಧಿಸಿದ ಸೆನೇಟರುಗಳು ಕಳೆದ ಚುನಾವಣೆಗಳಲ್ಲಿ ಇತರ ಸೆನೇಟರುಗಳಿಗಿಂತ 15 ಪಟ್ಟು ಹೆಚ್ಚು ತಂಬಾಕು ಕಂಪನಿಗಳ ಹಣ ಪಡೆದಿದ್ದಾರೆ.

■ ತಂಬಾಕು ದೊರೆಗಳಿಂದ ಹಣ ಪಡೆದ 47 ಸೆನೇಟರುಗಳಲ್ಲಿ 83% ಮಂದಿ ಈ ತಿದ್ದುಪಡಿಯ ಪರವಾಗಿ ಮತ ನೀಡಿದರೆ, ಇಂತಹ ಹಣ ಪಡೆಯದ 53 ಸೆನೇಟರುಗಳಲ್ಲಿ 25% ಮಂದಿ ತಿದ್ದುಪಡಿಯ ವಿರುದ್ಧ ಮತ ನೀಡಿದರು.

■ ಪ್ರತಿನಿಧಿ ಸಭೆ 24 ಮಿಲಿಯ ಡಾಲರುಗಳಿಗೆ ಅನುಮತಿ ನೀಡಿತು. ಪೂರ್ತಿ ಹಣ ಒದಗಿಸಬೇಕೆಂಬ ತಿದ್ದುಪಡಿಯನ್ನು ವಿರೋಧಿಸಿದ ಪ್ರತಿನಿಧಿಗಳು ತಂಬಾಕು ದೊರೆಗಳಿಂದ ಇತರ ಪ್ರತಿನಿಧಿಗಳಿಗಿಂತ 5 ಪಟ್ಟು ಹೆಚು ಹೆಚ್ಚು ಹಣ ಪಡೆದಿದ್ದಾರೆ!

ಇದು ನಿಮಗೆ ಗೊತ್ತೆ?

ಹಾಲಿವುಡ್ ಟಿಬೆಟ್ ಕುರಿತಂತೆ ಒಂದು ಸಿನೆಮಾ ತಯಾರಿಸಿದ್ದು ಈ ಮೂಲಕ ಚೀಣೀ ಸರಕಾರಕ್ಕೆ ಮುಜುಗರ ಉಂಟುಮಾಡುವ ಪ್ರಯತ್ನ ನಡೆಸಿದೆ. ಆದರೆ ಈ ಚಲನಚಿತ್ರದ ಕಥೆ ಬರೆದ ಹೈನ್‌ರಿಚ್ ಹೇರರ್ ಹಿಟ್ಲರನ ನಾಝಿ ಪಾರ್ಟಿಯ ಒಬ್ಬ ಸದಸ್ಯನಾಗಿದ್ದ ಎಂದು ಬೆಳಕಿಗೆ ಬಂದಿದೆ. ಈಗ ಮುಜುಗರ ಪಡಬೇಕಾದವರು ಯಾರು?

ಪಾಕಿಸ್ತಾನದಲ್ಲಿ ಖಾಸಗೀಕರಣ 8000 ಬ್ಯಾಂಕ್ ನೌಕರರ ಬರ್ಖಾಸ್ತು

ಪಾಕಿಸ್ತಾನದಲ್ಲಿ ಸರಕಾರೀ ಒಡೆತನದ ಯುನೈಟೆಡ್ ಬ್ಯಾಂಕ್ ಲಿಮಿಟೆಡ್ ಖಾಸಗೀಕರಣಕ್ಕೆ ಪೂರ್ವಭಾವಿಯಾಗಿ ಸುಮಾರು 8000 ನೌಕರರನ್ನು ಕೆಲಸದಿಂದ ತೆಗೆದುಹಾಕಲು ನಿರ್ಧರಿಸಿದೆ. 1991 ಹಾಗೂ ಆಮೇಲೆ ನೌಕರರಿಗೆ ಸೇರಿರುವವರನ್ನೆಲ್ಲಾ ಬರ್ಖಾಸ್ತು ಮಾಡುವ ಈ ನಿರ್ಧಾರವನ್ನು ಯುಬಿಎಲ್ ಸ್ಟಾಫ್ ಆಫೀಸರ್ಸ್ ಅಸೋಸಿಯೇಷನ್ ಅಧ್ಯಕ್ಷ ವಹಾಬ್ ಬಲೋಚ್ ಖಂಡಿಸಿದ್ದಾರೆ.

ಫ್ರಾನ್ಸಿನಿಂದಲೂ ಧಿಕ್ಕಾರ ಪಡೆದ ಅಮೆರಿಕಾ

ಅಮೆರಿಕಾದ ಬೆದರಿಕೆಗಳನ್ನು ಕೆಲವು ದಿನಗಳ ಹಿಂದೆ ಅದರ ಮಿತ್ರರಲ್ಲೊಂದಾದ ಫ್ರಾನ್ಸ್ ಕೂಡಾ ನಿರ್ಲಕ್ಷಿಸಿದೆ. ಕ್ಯೂಬಾದೊಡನೆ ವ್ಯವಹರಿಸುವ ದೇಶಗಳನ್ನು ಶಿಕ್ಷಿಸಲು ಹೆಲ್ಮ್ಸ್-ಬರ್ಟನ್ ಕಾನೂನು ರೂಪಿಸಿದಂತೆ ಅಮೆರಿಕಾ ಸರಕಾರ ಇರಾನ್, ಲಿಬ್ಯಾಗಳೊಡನೆ ವ್ಯವಹರಿಸುವ ದೇಶಗಳನ್ನು 'ಶಿಕ್ಷಿಸಲು' ಕೂಡಾ ಅದೇ ರೀತಿ ಕಾನೂನುಗಳನ್ನು ಪಾಸು ಮಾಡಿದೆ. ಫ್ರಾನ್ಸಿನ ತೈಲ ಕಂಪನಿ 'ಟೋಟಲ್' ಈ ಬೆದರಿಕೆಯನ್ನು ನಿರ್ಲಕ್ಷಿಸಿ ಇರಾನಿನ ಸರಕಾರದೊಂದಿಗೆ ತೈಲ ಹಾಗೂ ಅನಿಲ ನಿಕ್ಷೇಪದ ಪತ್ತೆಯ ಕಾಂಟ್ರಾಕ್ಟ್ ಮಾಡಿಕೊಂಡಿದೆ. ಇದಕ್ಕೆ ಫ್ರಾನ್ಸಿನ ಸರಕಾರದ ಬೆಂಬಲವೂ ದೊರೆತಿದೆ.

ಹೆಲ್ಮ್ಸ್-ಬರ್ಟನ್ ಕಾನೂನಿನಂತೆ ಕಳೆದ ವರ್ಷ ಅಮೆರಿಕಾದ ಸಂಸತ್ತು ಅಂಗೀಕರಿಸಿದ ಇರಾನ್ ಲಿಬ್ಯಾ ಪ್ರತಿಬಂಧಕ ಕಾನೂನನ್ನು ಅಂಗೀಕರಿಸಿತು. ಈ ಕಾನೂನಿನ ಪ್ರಕಾರ 40 ಮಿಲಿಯ ಡಾಲರಿಗಿಂತ ಹೆಚ್ಚಿನ ಹಣವನ್ನು ಇರಾನಿನಲ್ಲಿ ತೊಡಗಿಸುವ ಕಂಪನಿಯ ಮೇಲೆ ಅಮೆರಿಕನ್ ಸರಕಾರ ಪ್ರತಿಬಂಧನಗಳನ್ನು ಹೇರಬಹುದು.

ಆದರೆ ಈ ಬೆದರಿಕೆಯನ್ನು ಗಣನೆಗೆ ತಗೊಳ್ಳಲು ನಿರಾಕರಿಸಿರುವ ಫ್ರೆಂಚ್ ಕಂಪನಿಯ ನಿಲುವನ್ನು ಫ್ರೆಂಚ್ ಸರಕಾರವೂ ಬೆಂಬಲಿಸಿ ಇದು ಫ್ರಾನ್ಸಿನ ಧೋರಣೆಗೆ ಅನುಗುಣವಾಗಿಯೇ ಇದೆ ಎನ್ನುತ್ತಾ ಇರಾನಿನೊಂದಿಗೆ ವ್ಯಾಪಾರ ಬೆಳವಣಿಗೆಗೆ ಪ್ರತಿಬಂಧನ ಹಾಕುವುದು ತದ್ವಿರುದ್ಧ ಪರಿಣಾಮ ಬೀರಬಲ್ಲದು ಎಂದು ಎಚ್ಚರಿಸಿದೆ. ಅಮೆರಿಕಾ ಪ್ರತಿಬಂಧನ ಹಾಕುವ ನಿರ್ಣಯವನ್ನು ಜಾರಿಗೊಳಿಸಿದರೆ ಅದರ ಪರಿಣಾಮಗಳನ್ನು ಎದುರಿಸಬೇಕಾಗಿ ಬರುತ್ತದೆ ಎಂದೂ ಫ್ರೆಂಚ್ ಸರಕಾರ ಎಚ್ಚರಿಸಿದೆ.

ಹೆಲ್ಮ್ಸ್-ಬರ್ಟನ್ ಕಾನೂನನ್ನು ವಿರೋಧಿಸಿರುವ ಯುರೋಪಿಯನ್ ಯೂನಿಯನ್ ಈ ರೀತಿಯ ಪ್ರತಿಬಂಧನ ಕಾನೂನು ಬಾಹಿರ ಎಂದು ಹೇಳಿ ಫ್ರಾನ್ಸಿನ ನೆರವಿಗೆ ಬಂದಿದೆ. ಇರಾನ್‌ನಲ್ಲಿ ಯಾವುದೇ ಬಂಡವಾಳ ಹೂಡಿಕೆ ಆ ದೇಶವನ್ನು ಬಲಗೊಳಿಸಿ ಭಯೋತ್ಪಾದನೆಗೆ ಬೆಂಬಲ ನೀಡಲು ಅವಕಾಶ ಮಾಡಿಕೊಡುತ್ತದೆ ಎಂಬ ಅಮೆರಿಕನ್ ಆಳರಸರ ವಾದವನ್ನು ಯುರೋಪಿಯನ್ ಸಂಘ ತಿರಸ್ಕರಿಸಿದೆ. ವಾಸ್ತವವಾಗಿ ತನ್ನ ಎದುರು ಸಡ್ಡು ಹೊಡೆದು ನಿಲ್ಲುವ ಯಾವುದೇ ದೇಶದ ಬಗ್ಗೆ ಅಮೆರಿಕಾ ಹೊಂದಿರುವ ತೀವ್ರ ದ್ವೇಷವನ್ನು ಮರೆಮಾಚಲು ಇಂತಹ ವಾದ ಹೂಡಲಾಗುತ್ತಿದೆ.

ಫ್ರಾನ್ಸ್, ಕೆನಡಾಗಳ ಆಳರಸರ ದೃಢ ನಿಲುವಿನಿಂದಾಗಿ ಅಮೆರಿಕಾಕ್ಕೆ ತನ್ನ ಅಹಂಭಾವಪೂರ್ಣ, ಆಕ್ರಮಕ ತಿಳಿಗೇಡಿತನದ ಬೆದರಿಕೆ ತಂತ್ರಗಳನ್ನು ಬಳಸಲು ಆಗುತ್ತಿಲ್ಲ ಎಂಬುದಂತೂ ಸ್ಪಷ್ಟ.

ಸಂಚಿಕೆ 41 ರಲ್ಲಿ 'ಚೀಣಾದ ಕ್ರಾಂತಿಗೆ ಶುಭಾಶಯಗಳು' ಲೇಖನದಲ್ಲಿ ಚೀನದ ಪ್ರಜಾಸತ್ತಾತ್ಮಕ ಗಣತಂತ್ರ ತನ್ನ ಸ್ವಾತಂತ್ರ್ಯದ 43 ನೇ ವಾರ್ಷಿಕೋತ್ಸವವನ್ನು......' ಎಂದು ಮುದ್ರಣಗೊಂಡಿತ್ತು. ಅದು 48ನೇ ವಾರ್ಷಿಕೋತ್ಸವ ಎಂದಿರಬೇಕು. ಈ ತಪ್ಪಿಗೆ ವಿಷಾದಿಸುತ್ತೇವೆ.

ರಷ್ಯಾ : ಹಣದುಬ್ಬರ ಕಮ್ಮಿಯಾಗಿದೆ ಎಂದು ತೋರಿಸುವ ಪ್ರಯತ್ನ

ಜನವರಿ 1, 1998 ರಿಂದ ರಷ್ಯಾ ಹೊಸ ರೂಬಲ್ ನೋಟುಗಳನ್ನು ಜಾರಿ ಮಾಡಲಿದೆಯಂತೆ. ಈಗ 1000 ರೂಬಲ್ ಮೌಲ್ಯದ ನೋಟಿನ ಸ್ಥಾನದಲ್ಲಿ 1 ರೂಬಲ್ ಮೌಲ್ಯದ ನೋಟು ಬರಲಿದೆಯಂತೆ. ಅಂದರೆ ಈಗಿರುವ ನೋಟುಗಳಲ್ಲಿನ ಮೂರು ಸೊನ್ನೆಗಳನ್ನು ಕಡಿಮೆ ಮಾಡಲಾಗುವುದಂತೆ. ಯೆಲ್ಸಿನ್‌ನ ರಶ್ಯಾ 1993 ರ ವೇಳೆಗೆ 2500% ರಷ್ಟು ಅಗಾಧ ಪ್ರಮಾಣದ ಹಣದುಬ್ಬರ ಕಂಡಿತ್ತು. ಇದರಿಂದ 100 ರೂಬಲ್ ನೋಟು ಬೆಲೆಯಿಲ್ಲದ ನೋಟಾಗಿತ್ತು. ಇದನ್ನು ಹೋಗಲಾಡಿಸಲು ಹಾಗೂ ಹಣದುಬ್ಬರ ಕಡಿಮೆಯಾಗಿದೆ ಎಂಬ ಭ್ರಮೆ ಮೂಡಿಸುವುದು ಈ ಕ್ರಮದ ಒಂದು ಪ್ರಮುಖ ಉದ್ದೇಶ.

ವಿಯೆಟ್ನಾಮಿನಲ್ಲಿ ವ್ಯಾಪಾರ ಕೊರತೆಯಲ್ಲಿ ಇಳಿತ

ಈ ವರ್ಷದ ಮೊದಲ ಏಳು ತಿಂಗಳಲ್ಲಿ ವಿಯೆಟ್ನಾಮಿನ ವ್ಯಾಪಾರ ಕೊರತೆ 37.5% ರಷ್ಟು ಇಳಿದಿದೆ ಎಂದು ತಿಳಿದುಬಂದಿದೆ. 1997 ರಲ್ಲಿ ಇದುವರೆಗೆ ವಿಯೆಟ್ನಾಮಿನ ರಫ್ತ ಪ್ರಮಾಣ 25.2% ರಷ್ಟು ಹೆಚ್ಚಿದರೆ ಆಮದು ಪ್ರಮಾಣ 1.3% ರಷ್ಟು ಇಳಿಯಿತು. ಅದರಲ್ಲೂ ಬಳಕೆದಾರರ ಸರಕುಗಳ ಆಮದು ಪ್ರಮಾಣ ಗಮನಾರ್ಹವಾಗಿ ಇಳಿಯಿತು.

ಚಿರಸ್ಮರಣೀಯ ಚೆಗೆವಾರ

ಅಕ್ಟೋಬರ್ 9 ರಂದು ಕ್ಯೂಬಾ ಮತ್ತು ಇತರ ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಚೆಗೆವಾರವರು ಹುತಾತ್ಮರಾದ ಮೂವತ್ತನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು.

30 ವರ್ಷಗಳ ಹಿಂದೆ ಮಾರ್ಚ್ 23, 1967 ರಂದು ಬೊಲಿವಿಯಾ ರಾಷ್ಟ್ರೀಯ ವಿಮೋಚನಾ ಸೇನೆ ಗೆರಿಲ್ಲಾ ಹೋರಾಟ ಆರಂಭಿಸಿತ್ತು. ಫಿಡೆಲ್ ಕ್ಯಾಸ್ಟ್ರೋರೊಂದಿಗೆ ಕ್ಯೂಬಾ ವಿಮೋಚನೆಯಲ್ಲಿ ಭಾಗವಹಿಸಿದ್ದ ಚೆಗೆವಾರ ಇದರ ನೇತೃತ್ವ ವಹಿಸಿದ್ದರು. ಚೆ ಕ್ಯೂಬಾದ ಕೈಗಾರಿಕಾ ಮಂತ್ರಿಪದವಿ ಹಾಗೂ ಕೇಂದ್ರೀಯ ಯೋಜನಾ ಆಯೋಗದ ಸದಸ್ಯತ್ವವನ್ನು ಬಿಟ್ಟು ಈ ಹೋರಾಟಕ್ಕೆ ಬಂದಿದ್ದರು. ಬೊಲಿವಿಯಾದ ಕಾಡುಗಳಲ್ಲಿ ಆ ದೇಶದ ಸರ್ವಾಧಿಕಾರಿಯ ವಿರುದ್ಧ ವಿಮೋಚನಾ ಸಮರದಲ್ಲಿ ಅಕ್ಟೋಬರ್ 8 ರಂದು ಬಂಧಿತರಾದರು. ಮರುದಿನ ಸರ್ವಾಧಿಕಾರಿಯ ಸೈನಿಕರು ಸಿ.ಐ.ಎ. ಆದೇಶದ ಮೇರೆಗೆ ಚೆಯವರನ್ನು ಬಂಧಿಸಿಟ್ಟಿದ್ದ ಶಾಲಾ ಕೊಠಡಿಯಲ್ಲೇ ಗುಂಡಿಟ್ಟು ಕೊಂದರು. ಅವರಿಗಾಗ 40 ವರ್ಷವೂ ತುಂಬಿರಲಿಲ್ಲ. ಯುದ್ಧದಲ್ಲಿ ಗಾಯಗೊಂಡಿದ್ದ ಚೆ ಅದರಿಂದಾಗಿಯೇ ಸತ್ತರು ಎಂದು ಸುದ್ದಿ ಹಬ್ಬಿಸಲಾಯಿತು. ಅವರ ದೇಹದ ಅಗ್ನಿ ಸಂಸ್ಕಾರದ ನಂತರ ಬೂದಿಯನ್ನು ಸುತ್ತಲಿನ ಬೆಟ್ಟಗಳಲ್ಲಿ ಪಸರಿಸಲಾಯಿತು ಎಂದೂ ಹೇಳಲಾಯಿತು. ಆದರೆ ವಾಸ್ತವವಾಗಿ ಒಂದು ಸಾವಿನ ಮುಸುಕು ತಯಾರಿಸಿ, ಚೆಯವರ ಮುಂಗೈಗಳನ್ನು ಕಡಿದು ದೇಹವನ್ನು ಹೂತುಬಿಡಲಾಯಿತು. ಈ ಮೂಲಕ ಚೆಯವರ ಪ್ರಭಾವವನ್ನು ಸಂಪೂರ್ಣ ಹೂತುಬಿಟ್ಟೆವು ಎಂದು ಸಾಮ್ರಾಜ್ಯಶಾಹಿಗಳು ಮತ್ತು ಅವರ ಬಂಟರು ನಿಟ್ಟುಸಿರೆಳೆದರು. ಆದರೆ ಅವರ ಜಘನ್ಯ ಕೃತ್ಯ ಬೇಗನೇ ಬಯಲಿಗೆ ಬಂತು.

....

ಜುಲೈ 1968 ರಲ್ಲಿ ಫಿಡೆಲ್ ಕ್ಯಾಸ್ಟ್ರೋರವರಿಗೆ ಚೆಯವರ ಬೊಲಿವಿಯಾ ದಿನಚರಿಯ ಫೋಟೋ ಪ್ರತಿ ದೊರೆಯಿತು. ಅಷ್ಟೇ ಅಲ್ಲ

ಜುಲೈ 26, 1970 ರಂದು ಫಿಡೆಲ್ ಕ್ಯಾಸ್ಟ್ರೋ ಒಂದು ಸಾರ್ವಜನಿಕ ಸಭೆಯಲ್ಲಿ ಸಾರಿದರು - "ಚೆಗೆವಾರರ ಕೈಗಳನ್ನು ಜೋಪಾನವಾಗಿ ರಕ್ಷಿಸಿ ನಮ್ಮ ದೇಶಕ್ಕೆ ತಲುಪಿಸಲಾಗಿದೆ. ಕ್ಯೂಬನ್ ವಿಶೇಷಜ್ಞರ ನೆರವಿನಿಂದ ಅವನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಲಾಗಿದೆ"

ಮುಂದುವರೆದು ಕ್ಯಾಸ್ಟ್ರೋ -"ನಮ್ಮ ದೇಶದ ಪರಂಪರೆ ಎಲ್ಲರಿಗೂ ಗೊತ್ತು. ತನ್ನ ಪುತ್ರನನ್ನು ಮಣ್ಣು ಮಾಡುತ್ತದೆ ಈ ದೇಶ. ಪ್ರತಿಯೊಂದು ದೇಶಕ್ಕೆ ತನ್ನದೇ ಆದ ಸಂಪ್ರದಾಯಗಳಿವೆ. ಮಕಾವೋ ಮತ್ತು ಮಾರ್ತಿಯವರನ್ನು ಮಣ್ಣು ಮಾಡಲಾಯಿತು. ಆದರೆ ಚೆಯವರ ಕೈಗಳನ್ನು ಏನು ಮಾಡುವುದು? ಈ ಸಮಸ್ಯೆ ನಮಗೆದುರಾಯಿತು" ಎಂದರು ಕ್ಯಾಸ್ಟ್ರೋ.

"ಇದು ಆತನ ಮಾಂಸಖಂಡ, ನಮಗಾಗಿ ಉಳಿದಿರುವ ಆತನ ದೇಹದ ಭಾಗ ಇಷ್ಟೆ. ಆತನ ಶರೀರದ ಅವಶೇಷ ಎಂದಾದರೂ ಪತ್ತೆಯಾಗುವುದೇ ನಮಗೆ ಗೊತ್ತಿಲ್ಲ, ಆದ್ದರಿಂದ ಈ ಪ್ರಶ್ನೆಯನ್ನು ನಾವು ಜನಗಳ ಮುಂದಿಡುತ್ತೇವೆ. ನಿಮ್ಮ ಅಭಿಪ್ರಾಯ ಕೊಡಿ" ಎಂದಾಗ "ಅವನ್ನು ರಕ್ಷಿಸಿಡಿ" ಎಂಬ ಕೂಗು ಬಂತು. "ರಕ್ಷಿಸಿಡಬೇಕೆ? ಈ ಸಲಹೆಯನ್ನು ಜನತೆಯ ನಿರ್ಣಯಕ್ಕೆ ಬಿಡುತ್ತೇವೆ. ನಾವು ಚೆಯ ಕೈಗಳನ್ನು ಜೋಸ್‌ಮಾರ್ತಿಯ ಪಕ್ಕದಲ್ಲಿ ಕಲಶದೊಳಗೆ ಸುರಕ್ಷಿತವಾಗಿಡಲಾಗುವುದು. ವಿಮೋಚನಾ ಹೋರಾಟದಲ್ಲಿ ಶಸ್ತ್ರವನ್ನು ಹಿಡಿದ ಕೈಗಳಿವು. ಆತನ ಅತ್ಯುಚ್ಚ ವಿಚಾರಗಳನ್ನು ವ್ಯಕ್ತಪಡಿಸಿದ ಕೈಗಳಿವು. ಕಬ್ಬಿನ ತೋಟಗಳಲ್ಲಿ, ಬಂದರುಗಳಲ್ಲಿ, ಕಟ್ಟಡ ಜಾಗಗಳಲ್ಲಿ ದುಡಿದ ಕೈಗಳಿವು ..... ಚೆ ನಮ್ಮ ದೇಶದನವಲ್ಲ, ಆತ ಅಮೆರಿಕಾದವ, ಒಂದು ದಿನ ಅಮೆರಿಕಾದ ಜನತೆ ಬಯಸುವ ಜಾಗದಲ್ಲೇ ಈ ಕೈಗಳನ್ನು ಇಡಲಾಗುವುದು. ಸದ್ಯ ನಮ್ಮ ಜನ ಅದನ್ನು ಸುರಕ್ಷಿತವಾಗಿಡುವ ಜವಾಬ್ದಾರಿ ನಿರ್ವಹಿಸುತ್ತಾರೆ"ಎಂದರು ಫಿಡೆಲ್‌ಕ್ಯಾಸ್ಟ್ರೋ.

"ಅವರು ಚೆಯನ್ನು ಕೊಂದರು, ಆದರೆ ಅವರ ದಿನಚರಿ ಪುಸ್ತಕ ಕ್ಯೂಬಾ ತಲುಪುವುದನ್ನು ತಡೆಯಲಾಗಲಿಲ್ಲ, ಅವರು ಆತನ ಶರೀರವನ್ನು ಕಾಣೆಯಾಗಿಸಿದರು, ಆತನ ಕೈಗಳು ಕ್ಯೂಬಾ ತಲುಪದಂತೆ ತಡೆಯಲು ಅವರಿಗಾಗಲಿಲ್ಲ" ಎಂದರು ಭಾವುಕರಾಗಿ ಕ್ಯಾಸ್ಟ್ರೋ.

ಈ ದಿನಚರಿಯ ಪುಸ್ತಕ ಮತ್ತು ಕೈಗಳು ಸಿ.ಐ.ಎ. ಮತ್ತು ಬೊಲಿವಿಯಾದ ಸರ್ವಾಧಿಕಾರಿಗಳ ವಶದಲ್ಲಿದ್ದದ್ದು ಕ್ಯೂಬಾಕ್ಕೆ ಹೇಗೆ ಬಂತು? ಇದೊಂದು ಕುತೂಹಲಕಾರಿ ಘಟನೆ. ಬೊಲಿವಿಯಾ ಸರ್ವಾಧಿಕಾರಿಯ ಆಂತರಿಕ ಮಂತ್ರಿಯಾಗಿದ್ದ ಡಾ|| ಅರ್ಗುವೆ ದಾಸ್ ಸ್ವತಃ ಸಿ.ಐ.ಎ. ಏಜೆಂಟನೂ ಆಗಿದ್ದ. ಚೆ ಕೊಲೆಯ ನಂತರ ತನ್ನ ಹಾಗೂ ಬೊಲಿವಿಯಾ ಸರ್ವಾಧಿಕಾರಿಗಳ ಕೃತ್ಯಕ್ಕೆ ರೋಸಿ ಚೆಯ ಡೈರಿ ಮತ್ತು ಶತ್ರುಗಳು ರಚಿಸಿದ ಸಾವಿನ ಮುಸುಕು ಹಾಗೂ ಕತ್ತರಿಸಿಟ್ಟ ಕೈಗಳು ಹವಾನಾ ತಲುಪುವಂತೆ ಮಾಡಿದರಂತೆ.

"ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸರಕಾರ ಚೆಯ ಡೈರಿಯ ಬಗ್ಗೆ ವ್ಯಾಪಕ ಪ್ರಚಾರ ನಡೆಸುವ ಮೂಲಕ ಕುತೂಹಲ ಕೆರಳಿಸಿದ ನಂತರ ಮೂಲ ಡೈರಿಯಲ್ಲಿ ಗಮನಾರ್ಹ ಬದಲಾವಣೆ ಮಾಡಿ ಡೈರಿಯ ತನ್ನದೇ ಆವೃತ್ತಿಯನ್ನು ಪ್ರಕಟಿಸುವ ಯೋಚನೆಯಲ್ಲಿದೆ ಎಂದು ತಿಳಿದುಬಂತು. ಇದನ್ನು ಕ್ಯೂಬಾದ ವಿರುದ್ಧ ಬಹುದೇಶೀಯ ಆಕ್ರಮಣ ನಡೆಸಲು ಬಳಸುವ ಅವರ ಯೋಚನೆಯಿತ್ತೆಂದು ನನಗೆ ತಿಳಿದುಬಂತು" ಎಂದಿದ್ದಾರೆ ಡಾ|| ಅರ್ಗುವೆಜಾಸ್. ಬೊಲಿವಿಯಾ ಸರಕಾರ ಈ ಡೈರಿಯನ್ನು ವಿದೇಶಿ ಪ್ರಕಾಶಕರಿಗೆ ಮಾರಿ ಮಿಲಿಯಗಟ್ಟಲೆ ಡಾಲರ್ ಸಂಪಾದಿಸುವ ಯೋಚನೆಯಲ್ಲೂ ಇತ್ತಂತೆ. ಆದರೆ ಅದನ್ನು ಪ್ರಕಟಿಸುವ ಅವಕಾಶ ಕ್ರಾಂತಿಕಾರಿ ಕ್ಯೂಬಾಕ್ಕೆ ದೊರಕಿತು.

....

ಈಗ್ಗೆ ಕೆಲವು ತಿಂಗಳ ಹಿಂದೆ ಚೆಯನ್ನು ಹೂತಿಟ್ಟ ಸ್ಥಳವೂ ಪತ್ತೆಯಾಯಿತು. ಅರ್ಜೆಂಟೈನಾ ಕ್ಯೂಬಾ ಹಾಗೂ ಇಟಲಿಯ ಅಪರಾಧ ಪರೀಕ್ಷಣಾ ತಜ್ಞರು, ಮಾನವ ಶಾಸ್ತ್ರಜ್ಞರು ಹಾಗೂ ಭೂಭೌತ ಶಾಸ್ತ್ರಜ್ಞರ ಜಂಟಿ ಪ್ರಯತ್ನಗಳಿಂದ ಪತ್ತೆಯಾಯಿತು. ಸೇನಾಧಿಪತಿ ಚೆಗೆವಾರ ಹಾಗೂ ಆತನ ನಾಲ್ವರು ಸಂಗಾತಿಗಳ ಶರೀರದ ಅಳಿದುಳಿದ ಭಾಗಗಳು ಜುಲೈ 1997 ರಲ್ಲಿ ಕ್ಯೂಬಾ ತಲುಪಿದವು. ತನ್ನ ಅತ್ಯಂತ ನಿಕಟ ಸಂಗಾತಿಯ ದೇಹದ ಅವಶೇಷಗಳ ಕಲಶವನ್ನು ಸ್ವೀಕರಿಸಿದ ಕ್ಷಣ ಫಿಡೆಲ್ ಕ್ಯಾಸ್ಟ್ರೋಗಂತು ಅತ್ಯಂತ ಬೇಸರದ, ಆದರೆ ಅಷ್ಟೇ ಭಾವುಕ ಕ್ಷಣವಾಗಿತ್ತು.

30 ವರ್ಷಗಳ ಹಿಂತೆ ಲಾಹಿಗ್ವೆರಾದ ಒಂದು ಶಾಲಾ ಕೊಠಡಿಯಲ್ಲಿ ಗಾಯ ಗೊಂಡಿದ್ದ ಚೆಯನ್ನು ಗುಂಡಿಕ್ಕಿ ಕೊಂದ ಕ್ರಿಮಿನಲ್‌ಗಳು ಚೆಯ ವಿಚಾರಗಳನ್ನು, ಮಾದರಿಯನ್ನು ಸುಟ್ಟುಬಿಟ್ಟೆವು ಎಂದು ಕುಣಿದಾಡಿದ್ದರು. ಆದರೆ ಅವರ ಟೊಳ್ಳುತನ ವನ್ನು ಇತಿಹಾಸ ಸಾಬೀತು ಮಾಡಿದೆ. ಏಕೆಂದರೆ ಚೆಯ ಮಾದರಿ, ನೆನಪು ಕೋಟ್ಯಾಂತರ ಜನಗಳಲ್ಲಿ ಹೊಸ-ಹೊಸ ನಿರೀಕ್ಷೆಗಳನ್ನು ಮೂಡಿಸಿವೆ, ಸ್ಫೂರ್ತಿ ತುಂಬಿವೆ.

....

ಚೆಗೆವಾರ ಹುತಾತ್ಮರಾದ ಮೂವತ್ತನೇ ವಾರ್ಷಿಕದ ಸ್ಮರಣಾರ್ಥ 'ರಾಷ್ಟ್ರೀಯ ಕ್ಯೂಬಾ ಸೌಹಾರ್ದ ಸಮಿತಿ' ಕಾಮ್ರೇಡ್ ಚೆಯ ಪುತ್ರಿಯರಾದ ಅಲೀಡಾ(ಆಕೆಯೊಬ್ಬ ವೈದ್ಯೆ) ಹಾಗೂ ಸೆಲಿಯಾ (ಈಕೆ ಸಾಗರಜೀವ ಶಾಸ್ತ್ರಜ್ಞೆ) ರವರ ಭಾರತ ಭೇಟಿಯ ವ್ಯವಸ್ಥೆ ಮಾಡಿದೆ. ಅಕ್ಟೋಬರ್ 25 ರಿಂದ ಎರಡುವಾರ ಅವರು ಭಾರತಕ್ಕೆ ಭೇಟಿ ನೀಡುತ್ತಾರೆ. ದಿಲ್ಲಿಯಲ್ಲಿ ಎರಡು ದಿನ, ಕೇರಳದಲ್ಲಿ ಮೂರು ದಿನ, ಆಂಧ್ರದಲ್ಲಿ ಎರಡು ದಿನ, ಪಶ್ಚಿಮ ಬಂಗಾಳದಲ್ಲಿ ಮೂರು ದಿನ ಇರುತ್ತಾರೆ. ಅಕ್ಟೋಬರ್ 26 ರಂದು ದಿಲ್ಲಿಯಲ್ಲಿ ಅವರಿಗೆ ಸಾರ್ವಜನಿಕ ಸನ್ಮಾನ ನೀಡಲಾಗುವುದು.

ನವಂಬರ್ 7 ರಿಂದ 11 ರವರೆಗೆ ದಿಲ್ಲಿಯಲ್ಲಿ ಕಾಮ್ರೇಡ್ ಚೆಯ ಜೀವನದ ಮೇಲೆ ಚಲನಚಿತ್ರೋತ್ಸವ ಹಾಗೂ ಛಾಯಾಚಿತ್ರ ಪ್ರದರ್ಶನ ನಡೆಯಲಿದೆ.



"ವಿಮೋಚನಾ ಹೋರಾಟದಲ್ಲಿ ಶಸ್ತ್ರವನ್ನು ಹಿಡಿದ ಕೈಗಳಿವು. ಆತನ ಅತ್ಯುಚ್ಚ ವಿಚಾರಗಳನ್ನು ವ್ಯಕ್ತಪಡಿಸಿದ ಕೈಗಳಿವು. ಕಬ್ಬಿನ ತೋಟಗಳಲ್ಲಿ, ಬಂದರುಗಳಲ್ಲಿ, ಕಟ್ಟಡ ಜಾಗಗಳಲ್ಲಿ ದುಡಿದ ಕೈಗಳಿವು ....."



ಮತ್ತೆ ಮಾತಿಗೆ ತಪ್ಪಿದ ಕೇಂದ್ರ ಸರ್ಕಾರ
ಕಲ್ಲಿದ್ದಲು ಗಣಿ ಖಾಸಗೀಕರಣದ ವಿರುದ್ಧ ಅಖಿಲ ಭಾರತ ಮುಷ್ಕರಕ್ಕೆ ಸಿದ್ಧತೆ

ಕಲ್ಲಿದ್ದಲು ಗಣಿಗಳನ್ನು ಖಾಸಗೀಕರಿಸುವ ಕೇಂದ್ರ ಸರಕಾರದ ಹಠಮಾರಿತನದ ವಿರುದ್ಧ ಅಖಿಲ ಭಾರತ ಮುಷ್ಕರ ನಡೆಸಲು ಒಂದು ಸರ್ವಸಮ್ಮತ ದಿನಾಂಕವನ್ನು ಗೊತ್ತು ಪಡಿಸಬೇಕು ಎಂದು ಅಖಿಲ ಭಾರತ ಕಲ್ಲಿದ್ದಲು ಕಾರ್ಮಿಕರ ಒಕ್ಕೂಟ ಇತರ ಸಂಘಟನೆಗಳಿಗೆ ಮನವಿ ಮಾಡಿದೆ. ಈ ಬಗ್ಗೆ ಅಸನ್‌ಸೋಲ್‌ನಲ್ಲಿ ಅಕ್ಟೋಬರ್ 27 ರಂದು ಒಂದು ಸಭೆ ನಡೆಯಲಿದೆ.

ಜುಲೈ 28, 29, 30 ರಂದು ಮೂರು ದಿನಗಳ ಮುಷ್ಕರ ನಡೆಸಲು ಈ ಹಿಂದೆ ಕಲ್ಲಿದ್ದಲು ಕಾರ್ಮಿಕರು ನಿರ್ಧರಿಸಿದಾಗ ಪ್ರಧಾನ ಮಂತ್ರಿ ಗುಜ್ರಾಲ್‌ರವರು ಕಲ್ಲಿದ್ದಲು ಉದ್ದಿಮೆಯಲ್ಲಿನ ನೀತಿಗಳು ಹಾಗೂ ಖಾಸಗೀಕರಣದ ಮಸೂದೆಯ ಬಗ್ಗೆ ತಿಂಗಳೊಳಗೆ ಮಾತುಕತೆ ನಡೆಸುವುದಾಗಿ, ಅದುವರೆಗೆ ಯಾವ ಕ್ರಮಗಳನ್ನು ಕೈಗೊಳ್ಳುವುದಿಲ್ಲ ಎಂಬ ಭರವಸೆಯನ್ನು ನೀಡಿದ್ದರು. ಆದರೆ ಸರಕಾರ ಕಲ್ಲಿದ್ದಲ್ಲಿನ ಏರುತ್ತಿರುವ ಬೇಡಿಕೆಯನ್ನು ಪೂರೈಸಲು 'ಕೋಲ್ ಇಂಡಿಯಾ' ಕ್ಕೆ ಸಾಧ್ಯವಿಲ್ಲ ಎಂಬ ಹಠ ಹಿಡಿದುದರಿಂದ ಮಾತುಕತೆಗಳು ವಿಫಲವಾದವು. ಕೇಂದ್ರ ಸರಕಾರ ಅಗತ್ಯ ಬಂಡವಾಳ ಒದಗಿಸಿದರೆ 'ಕೋಲ್ ಇಂಡಿಯಾ' ಕ್ಕೆ ಬೇಡಿಕೆಗಳನ್ನು ಪೂರೈಸಲು ಸಾಮರ್ಥ್ಯವಿದೆ ಎಂಬುದು ಕಾರ್ಮಿಕ ಸಂಘಗಳ ವಾದ.

ಈಗ ಕಾರ್ಮಿಕ ಸಂಘಗಳ ವಿರೋಧವನ್ನು ಕಡೆಗಣಿಸಿ ಸರಕಾರ ಕಲ್ಲಿದ್ದಲು ಗಣಿಗಳಲ್ಲಿ 74% ವರೆಗೆ ವಿದೇಶಿ ಬಂಡವಾಳಕ್ಕೆ ಅವಕಾಶ ಕೊಡಲು ಮುಂದಾಗಿದೆ. ಈ ಖಾಸಗೀಕರಣ ಪ್ರಯತ್ನವನ್ನು ಮಾತ್ರವಲ್ಲ, ಕಲ್ಲಿದ್ದಲು ಮೇಲಿನ ಕಸ್ಟಮ್ಸ್ ಸುಂಕದಲ್ಲಿ ಕಡಿತ, ಕಲ್ಲಿದ್ದಲು ಉದ್ದಿಮೆಗೆ ಬಜೆಟ್ ಬೆಂಬಲದ ಅಭಾವ, ಉದ್ದಿಮೆಯನ್ನು ಪುನರ್‍ರಚಿಸುವ ಸರಕಾರದ ನಿರಾಕರಣೆ, ಹೊಸ ವೇತನದ ಒಪ್ಪಂದಕ್ಕೆ ಮಾತುಕತೆಯಲ್ಲಿ ವಿಳಂಬ ಹಾಗೂ ಪೆನ್ಶನ್ ಯೋಜನೆ ಇನ್ನೂ ನೆನಗುದಿಯಲ್ಲಿ ಇರುವುದನ್ನು ವಿರೋಧಿಸಿ ಕಾರ್ಮಿಕ ಸಂಘಗಳು ಹೋರಾಡುತ್ತಿವೆ.

ಅಕ್ಟೋಬರ್ 2 ರಂದು ಕಲ್ಕತ್ತೆಯಲ್ಲಿ ಎಂ.ಕೆ.ಪಂಧೆಯವರ ಅಧ್ಯಕ್ಷತೆಯಲ್ಲಿ ಭಾರತ ಕಲ್ಲಿದ್ದಲು ಕಾರ್ಮಿಕ ಒಕ್ಕೂಟ ಸರಕಾರದ ಹಠಮಾರಿತನದ ವಿರುದ್ಧ ಒಂದು ದೊಡ್ಡ ಮುಷ್ಕರ ಕಾರ್ಯಾಚರಣೆ ನಡೆಸಲು ಸಿದ್ಧವಾಗುತ್ತಿದೆ. ಅಕ್ಟೋಬರ್ 27ರ ಅಸನ್‌ಸೋಲ್ ಸಭೆ ಈ ಮುಷ್ಕರದ ದಿನಾಂಕವನ್ನು ನಿರ್ಧರಿಸಲಿದೆ. (ಐಎನ್‌ಎನ್)

ಕಾಂ॥ ಚಿತ್ತಬಸು ನಿಧನ
ಎಡ ಆಂದೋಲನಕ್ಕೊಂದು ದೊಡ್ಡ ಪೆಟ್ಟು

ಫಾರ್ವರ್ಡ್ ಬ್ಲಾಕ್‌ನ ಹಿರಿಯ ಮುಖಂಡ ಕಾಂ॥ ಚಿತ್ತಬಸು ರವರ ನಿಧನದಿಂದ ಕಾರ್ಮಿಕ ವರ್ಗ ಒಬ್ಬ ಧೀರ ಸೈನಿಕನನ್ನು ಕಳಕೊಂಡಂತಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ದುಃಖವನ್ನು ವ್ಯಕ್ತಪಡಿಸಿದೆ.

ಕಾಂ॥ ಚಿತ್ತಬಸು 20 ವರ್ಷದವರಾಗಿದ್ದಾಗ 1945 ರಲ್ಲಿ ಫಾರ್ವರ್ಡ್ ಬ್ಲಾಕ್ ಸೇರಿದರು. ಕಾರ್ಮಿಕ ವರ್ಗ ಮತ್ತು ಬಡ ರೈತಾಪಿ ಶ್ರಮಜೀವಿಗಳಿಗಾಗಿ ದಣಿವರಿಯದ, ಸಕ್ರಿಯ ಕೆಲಸಗಳಿಂದಾಗಿ ಅವರು 1977 ರಲ್ಲಿ ಆ ಪಕ್ಷದ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೇರಿದರು. 1957 ರಲ್ಲಿ ಅವರು ಪಶ್ಚಿಮ ಬಂಗಾಳ ವಿಧಾನ ಸಭೆಗೆ ಆರಿಸಿಬಂದರು. 1966 ರಿಂದ 1991 ರ ನಡುವೆ ಅವರು ಹಲವು ಬಾರಿ ಲೋಕಸಭೆ ಹಾಗೂ ರಾಜ್ಯ ಸಭೆಗಳಿಗೆ ಆರಿಸಿಬಂದರು. ಅವರು ರಾಷ್ಟ್ರೀಯ ಪ್ರಶ್ನೆಗಳನ್ನು, ಅದರಲ್ಲೂ ಮುಖ್ಯವಾಗಿ ಕಾರ್ಮಿಕ ವರ್ಗದ ಹೋರಾಟಗಳ ಪ್ರಶ್ನೆಯನ್ನು ಸದಾ ಎತ್ತುತ್ತಿದ್ದ ಒಬ್ಬ ಪ್ರಸಿದ್ಧ ಸಂಸದೀಯ ಪಟುವಾಗಿದ್ದರು. ಕಾಮ್ರೇಡ್ ಚಿತ್ತಬಸು ಒಟ್ಟು ಎಂಟು ವರ್ಷಗಳ ಸೆರೆವಾಸವನ್ನು ಅನುಭವಿಸಬೇಕಾಗಿ ಬಂತು.

ತನ್ನ ಸಮರ್ಪಣಾ ಭಾವದ ಕೆಲಸದಿಂದಾಗಿ ಅವರು ಜನತೆಯ ಪ್ರೀತಿ ಹಾಗೂ ಗೌರವವನ್ನು ಸಂಪಾದಿಸಿದ್ದರು. ರಾಜಕೀಯವಾಗಿ ಅವರನ್ನು ವಿರೋಧಿಸುವವರೂ ಅವರನ್ನು ಗೌರವಿಸುತ್ತಿದ್ದರು. ಅವರ ಸರಳ ಜೀವನ ಶೈಲಿ ಅವರನ್ನು ಭೇಟಿಯಾದವರನ್ನೆಲ್ಲಾ ಆಕರ್ಷಿಸುವಂತದ್ದು.

ಎಡ ಆಂದೋಲನದ ಈ ಅಗಲಿದ ನಾಯಕನಿಗೆ ತನ್ನ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಇವರ ನಿಧನ ಫಾರ್ವರ್ಡ್ ಬ್ಲಾಕ್‌ಗೆ ಮಾತ್ರವಲ್ಲ, ಇಡೀ ಎಡ ಪ್ರಜಾಪ್ರಭುತ್ವ ಆಂದೋಲನಕ್ಕಾಗಿರುವ ನಷ್ಟ. ಅವರ ಸಾವಿನಿಂದ ಕಾರ್ಮಿಕರ, ರೈತರ ಹಿತಾಸಕ್ತಿಗಳನ್ನು ಪ್ರತಿಪಾದಿಸುತ್ತಿದ್ದ ಒಬ್ಬ ಧೀರ ಸೈನಿಕನನ್ನು ದೇಶದ ಕಾರ್ಮಿಕ ಆಂದೋಲನ ಕಳಕೊಂಡಿದೆ ಎಂದು ಸಿಪಿಐ(ಎಂ)ಹೇಳಿದೆ. ಫಾರ್ವರ್ಡ್ ಬ್ಲಾಕ್‌ಗೆ ಹಾಗೂ ಅವರ ಕುಟುಂಬದ ಎಲ್ಲಾ ಸದಸ್ಯರಿಗೆ ತನ್ನ ಹಾರ್ದಿಕ ಸಂತಾಪವನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ವ್ಯಕ್ತಪಡಿಸಿದೆ.

ಮಹಾರಾಣಿಯ ವಿಷಾದವು........................

ಬ್ರಿಟನ್ನಿನ ರಾಣಿ ಭಾರತಕ್ಕೆ ಬಂದರು. ಅಮೃತಸರಕ್ಕೆ ಹೋದರು. ಸ್ವರ್ಣ ದೇವಾಲಯದೊಂದಿಗೆ ಜಲಿಯನ್‌ವಾಲಾ ಬಾಗ್‌ಗೂ ಭೇಟಿ ನೀಡಿದರು. ಜಾಲಿಯನ್‌ವಾಲಾ ಬಾಗ್‌ನಲ್ಲಿ ಹುತಾತ್ಮಸ್ತಂಭದಲ್ಲಿ ಹೂಗುಚ್ಛಗಳನ್ನಿಟ್ಟರು. ಅದಕ್ಕೆ ಮೊದಲು ದಿಲ್ಲಿಯಲ್ಲಿ ಏರ್ಪಡಿಸಿದ್ದ ಔತಣ ಕೂಟದಲ್ಲಿ 'ಜಲಿಯನ್ ವಾಲಾ ಬಾಗ್ ವಿಷಾದದ ಘಟನೆ' ಎಂದರು.

ಭಾರತದ ಸ್ವಾತಂತ್ರ್ಯದ ಸ್ವರ್ಣ ಜಯಂತಿಯ ಸಂದರ್ಭದಲ್ಲಿ ಭೇಟಿ ನೀಡಿರುವ ಬ್ರಿಟನ್ನಿನ ರಾಣಿಗೆ ಅದೇ ಬ್ರಿಟನ್ನಿನ ಪ್ರತಿನಿಧಿ ಜನರಲ್ ಡಾಯರ್ 1919 ರಲ್ಲಿ ನೂರಾರು ಜನಗಳನ್ನು ಕೊಂದ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ಅವರಿಗೆ ಒಂದು ವಿಷಾದದ ಘಟನೆ ಮಾತ್ರವಿರಬಹುದು. ಆದರೆ ಭಾರತೀಯರಿಗೆ ಅದು ಅಸಹನೀಯ ಕ್ರೋಧವನ್ನು ಉಂಟುಮಾಡಿದ ಘಟನೆ. "ಇತಿಹಾಸವನ್ನು ಪುನಃ ಬರೆಯಲು ಸಾಧ್ಯವಿಲ್ಲವಲ್ಲ" ಎಂದರಂತೆ ಬ್ರಿಟನ್ನಿನ ಮಹಾರಾಣಿ. ಅದು ನಮಗೂ ಗೊತ್ತಿದೆ. ಆದರೆ "ನಮ್ಮ ಪೂರ್ವಜರು ಅಪರಾಧ ಮಾಡಿದರು" ಎಂದು ಒಪ್ಪಿಕೊಳ್ಳಲು ಸಾಧ್ಯವಿದೆಯಲ್ಲಾ? ಅದಕ್ಕೆ ಮಾನವೀಯ ಹೃದಯ ಬೇಕಷ್ಟೆ.


ಬ್ರಿಟನ್ನಿನ ಮಹಾರಾಣಿ ಇಷ್ಟಾದರೂ ಹೇಳಿದರಲ್ಲ, ಪರೋಕ್ಷವಾಗಿಯಾದರೂ ಬ್ರಿಟನ್ ವಸಾಹತುಶಾಹಿಗಳ ಅಪರಾಧವನ್ನು ಒಪ್ಪಿದರಲ್ಲಾ ಎಂದು ಹಲವರಿಗೆ ಸಮಾಧಾನ. ವಾಸ್ತವವಾಗಿ ಮಹಾರಾಣಿಯ ಭಾರತ ಭೇಟಿಯ ಕಾರ್ಯಕ್ರಮ ತಯಾರಿಸಿದಾಗ ಅದರಲ್ಲಿ ಅಮೃತಸರ ಸ್ವರ್ಣ ದೇವಾಲಯ ಭೇಟಿಯ ಪ್ರಸ್ತಾಪವಿತ್ತು. ಆದರೆ ಪಕ್ಕದಲ್ಲೇ ಇರುವ ಜಲಿಯನ್‌ವಾಲಾ ಬಾಗ್‌ಗೆ ಭೇಟಿ ನೀಡುವ ಕಾರ್ಯಕ್ರಮವಿರಲಿಲ್ಲ. ಆಗ ಬ್ರಿಟನ್ ವಸಾಹತುಶಾಹಿಗಳು ನಿರ್ದಯವಾಗಿ ಕೊಂದ ನೂರಾರು ಭಾರತೀಯರಿಗೆ ಶ್ರದ್ಧಾಂಜಲಿ ಅರ್ಪಿಸಲು ಬ್ರಿಟಿಶ್ ರಾಣಿ ಜಲಿಯನ್‌ವಾಲಾ ಬಾಗ್‌ಗೂ ಹೋಗಬೇಕು ಎಂಬ ಒತ್ತಾಯ ಬಂತು. ಈ ಹಿನ್ನೆಲೆಯಲ್ಲೇ ಸಂದರ್ಶನವೊಂದರಲ್ಲಿ ಪ್ರಧಾನ ಮಂತ್ರಿ ಗುಜ್ರಾಲ್ ರಾಣಿ ಎಲಿಜಬೆತ್ ಅಮೃತಸರಕ್ಕೆ ಹೋಗದಿರುವುದು ಒಳ್ಳೆಯದು ಎಂದು ಟಿಪ್ಪಣಿ ಮಾಡಿದರು.

ಇದಕ್ಕೆ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯ ಅಧ್ಯಕ್ಷ ಜಿ.ಎಸ್.ತೋಹ್ರಾ ಮತ್ತಿತರ ಕೆಲವು ಸಿಖ್ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದರು. ಜಲಿಯನ್‌ವಾಲಾ ಬಾಗ್ ಒಂದು ಹಳೆಯ ಪ್ರಶ್ನೆ, ಅದಕ್ಕೀಗ ಬ್ರಿಟನ್ನಿನ ರಾಣಿ ಕ್ಷಮೆ ಕೋರಬೇಕಾಗಿಲ್ಲ ಎಂದರು! ಕೆಲವು ವಿದೇಶಗಳಲ್ಲಿನ ಖಾಲಿಸ್ತಾನಿ ಸಂಘಟನೆಗಳು ಸ್ವರ್ಣ ದೇವಾಲಯಕ್ಕೆ ಭೇಟಿ ಕೊಡದಂತೆ ಮಾಡಿ ಆಕೆ ಸಿಖ್ಖರಿಗೆ ಗೌರವ ಸಲ್ಲಿಸದಂತೆ ತಡೆಯುವ ಪ್ರಯತ್ನವಿದೆಂದು ಅದಕ್ಕೆ ಮತ್ತೀಯ ತಿರುವು ಕೊಡಲು ಪ್ರಯತ್ನಿಸಿದರು.

"ನಿಜ, ಬ್ರಿಟನ್ನಿನ ರಾಣಿಯ ಈ ಭೇಟಿ ಆಕೆ ಬ್ರಿಟನ್ನಿನ ಸಂವಿಧಾನಾತ್ಮಕ ಮುಖ್ಯಸ್ಥರಾಗಿ ನೀಡುವ ಅಧಿಕೃತ ಭೇಟಿ, ಭಾರತ-ಬ್ರಿಟನ್ ಸಂವಿಧಾನಗಳ ಅಂಶ ಇದು. ಆದರೆ ಈ ಭೇಟಿಯನ್ನು ಭಾರತದ ಸ್ವಾತಂತ್ರ್ಯದ 50 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಯೋಜಿಸಲಾಗಿದೆ. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ಭಾರತೀಯರ ಮೇಲೆ ಬ್ರಿಟಿಶ್ ಸಾಮ್ರಾಜ್ಯಶಾಹಿಗಳು ಎಸಗಿದ ಅತ್ಯಂತ ಹೇಯ ಕೃತ್ಯ. ಮಹಾರಾಣಿ ಬ್ರಿಟನ್ನಿನ ಮುಖ್ಯಸ್ಥೆಯಾಗಿ ಅಮೃತಸರಕ್ಕೆ ಭೇಟಿ ನೀಡಿ, ಸ್ವರ್ಣ ದೇವಾಲಯಕ್ಕೆ ಹೋಗಿಪಕ್ಕದಲ್ಲೇ ಇರುವ ಜಲಿಯನ್‌ವಾಲಾ ಬಾಗ್ ಉಪೇಕ್ಷಿಸಿದರೆ, ಭಾರತೀಯ ಜನತೆಯಲ್ಲಿ ದೇಶಪ್ರೇಮಿ ಕ್ರೋಧವನ್ನು ಬಡಿದೆಬ್ಬಿಸಿದ ಆ ಅತ್ಯಾಚಾರದ ಬಗ್ಗೆ ಮೌನವಾಗಿದ್ದರೆ ಅದು ತರವಲ್ಲ. 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಆಕೆ ಈ ಭಾವನೆ ತೋರದಿದ್ದರೆ ಭಾರತೀಯ ಜನತೆಯ ದೇಶಪ್ರೇಮಿ ಭಾವನೆಗಳಿಗೆ ಘಾಸಿಯಾಗುತ್ತವೆ. ಭಾರತಕ್ಕೆ ಬಂದು ಭಾರತ-ಬ್ರಿಟನ್ ಸಂಬಂಧಗಳನ್ನು ಬಲಪಡಿಸುವ ಪ್ರಕ್ರಿಯೆಗೆ ಕಾಣಿಕೆ ನೀಡುವ ಅವರಿಗೆ ಸ್ವಾಗತವಿದೆ. ಆದರೆ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಭಾರತೀಯರಿಗೆ ಜಲಿಯನ್‌ವಾಲಾ ಬಾಗ್ ಕೂಡಾ ಅಷ್ಟೇ ಮಹತ್ವದ್ದು" ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಗಸ್ಟ್ 20 ರಂದು ನೀಡಿದ ಹೇಳಿಕೆಯಲ್ಲಿ ಅಭಿಪ್ರಾಯ ಪಟ್ಟಿತ್ತು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬಹುದು.

ಪದಬಂಧ-3

- ವಿಶ್ವ



ಮೇಲಿನಿಂದ ಕೆಳಕ್ಕೆ

2. ಸ್ವಾತಂತ್ರ್ಯ ಗಳಿಸಲೆಂದು ಹೋರಾಡಲು ಹುಟ್ಟಿದ ಸೇನೆ (7)
3. ಗಂಡನ ಚಿತೆಯಲ್ಲಿ ಬಿದ್ದು ಹೆಂಡತಿಯೂ ಸಾಯಬೇಕೆಂಬ ಕ್ರೂರ ಪದ್ಧತಿ (2)
6. ಭಾರತದ ಸ್ವಾತಂತ್ರ್ಯ ಹೋರಾಟದ ಒಂದು ಪ್ರಮುಖ ಘಟ್ಟ (7)
9. ಮುಖಂಡರಿಗೆ ಹೀಗೂ ಹೇಳುವರು(3)
10. 1886 ರಲ್ಲಿ ನಡೆದ ಬಟ್ಟೆ ಗಿರಣಿ ಕಾರ್ಮಿಕರ ಸಂಪು ಭಾರತದ ಪ್ರಥಮ ಕಾರ್ಮಿಕ ಮುಷ್ಕರ, ಇದು ನಡೆದ ಸ್ಥಳ(4)
11. ಇಂಡಿಯನ್ ರಿಪಬ್ಲಿಕನ್ ಆರ್ಮಿಯ ಅಧ್ಯಕ್ಷರಾಗಿದ್ದವರು (4)
13. ಎರಡನೇ ಮಹಾಯುದ್ಧದ ವೇಳೆ ಜಗತ್ತಿನ ಮೊದಲ ಯುದ್ಧ ವಿರೋಧಿ ಮುಷ್ಕರ ನಡೆದ ಸ್ಥಳ (3)

ಎಡದಿಂದ ಬಲಕ್ಕೆ

1. ಬ್ರಿಟಿಶರ ಗುಂಡಿಗೆಯನ್ನು ಥರಗುಟ್ಟಿಸಿದ ಯುವಕ (8)
4. ಮಹಿಳೆಯೊಬ್ಬರು ಪ್ರಧಾನ ಪಾತ್ರ ವಹಿಸಿದ ಶಸ್ತ್ರಾಗಾರದ ಮೇಲೆ ಸ್ವಾತಂತ್ರ್ಯ ಹೋರಾಟಗಾರರ ಧಾಳಿ ಇಲ್ಲಿ ನಡೆಯಿತು(4)
5. ಭಾರತದ ಒಂದು ಸಾಮಾಜಿಕ ಅನಿಷ್ಟ(5)
7. ಬಂಡವಾಳಶಾಹಿ ವ್ಯವಸ್ಥೆಯನ್ನು ಇದು ಆಗಾಗ ಕಾಡುತ್ತದೆ(7)
8. ಶೋಷಕ ವ್ಯವಸ್ಥೆಯಲ್ಲಿ ಬೆಲೆಗಳು ಹೀಗಿರುವುದೇ ಇಲ್ಲ (4)
9. ಕಮ್ಯುನಿಸ್ಟರು, ಸಮಾಜವಾದಿಗಳ ಆಸಕ್ತಿಯಿಂದ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದವರು(3)
12. ಸ್ವಾತಂತ್ರ್ಯ ಹೋರಾಟಗಾರರ ಒಂದು ಪ್ರಮುಖ ಬಂಗಾಳಿ ಪತ್ರಿಕೆ (4)
14. ಸ್ವಾತಂತ್ರ್ಯ ಸಮರದ ಕ್ರಾಂತಿಕಾರಿ ಮಹಿಳೆಯರಲ್ಲಿ ಒಂದು ಪ್ರಮುಖ ಹೆಸರು (3)

ಬೋನಸ್ ಮಿತಿಗಳನ್ನು ತೆಗೆಯಲು ಸುಗ್ರೀವಾಜ್ಞೆ
ಕಾರ್ಮಿಕ ಸಂಘಗಳ ಆಗ್ರಹ

ಐದು ಕೇಂದ್ರ ಕಾರ್ಮಿಕ ಸಂಘಗಳ ಮುಖಂಡರು ಪ್ರಧಾನ ಮಂತ್ರಿಗಳಿಗೆ ಒಂದು ಪತ್ರ ಬರೆದು ಬೋನಸ್ ಕಾನೂನಿನಲ್ಲಿ ವಿಧಿಸಿರುವ ಮಿತಿಗಳನ್ನು ತೆಗೆದುಹಾಕಲು ಸರಕಾರ ತಕ್ಷಣ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಬೇಕು ಎಂದು ಆಗ್ರಹಪಡಿಸಿದ್ದಾರೆ.

ಈಗ ಈ ಕಾನೂನಿನಲ್ಲಿ ಹಾಕಿರುವ ಮಿತಿಗಳು ಎಷ್ಟೋ ಹಿಂದಿನ ಕಾಲದ್ದು ಅದಕ್ಕೀಗ ಅರ್ಥವೇ ಇಲ್ಲ ಇದರಿಂದಾಗಿ ಈಗ ಹೆಚ್ಚಿನ ಕಾರ್ಮಿಕರಿಗೆ ಬೋನಸ್ ಸಿಗುವುದೇ ಇಲ್ಲ, ಹಲವರಿಗೆ ಕನಿಷ್ಟ ವೇತನ ಕೂಡ ದೊರೆಯುತ್ತಿಲ್ಲ.


ಕಳೆದ ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಸರ್ವಾನುಮತದಿಂದ ಬೋನಸ್ ಕಾನೂನಿನಲ್ಲಿ ವಿಧಿಸಿರುವ ಮಿತಿಗಳನ್ನು ತೆಗೆದು ಹಾಕಬೇಕು ಎಂದು ಒತ್ತಾಯಿಸಿದ್ದವು. ಈಗ ಸಂಸತ್ ಅಧಿವೇಶನ ಇಲ್ಲದಿರುವುದರಿಂದ ಹಾಗೂ ಹಬ್ಬಗಳ ಸಮಯವಾದ್ದರಿಂದ ಈ ಬಗ್ಗೆ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಬೇಕು ಎಂದು ಕಾರ್ಮಿಕ ಸಂಘಟನೆಗಳ ಮುಖಂಡರು ಪ್ರಧಾನ ಮಂತ್ರಿಗಳಿಗೆ ಈ ಪತ್ರದ ಮೂಲಕ ಆಗ್ರಹಪಡಿಸಿದ್ದಾರೆ.

ಎಐಟಿಯುಸಿ, ಬಿ.ಎಂ.ಎಸ್., ಸಿಐಟಿಯು, ಹೆಚ್.ಎಂ.ಎಸ್. ಹಾಗೂ ಇಂಟಕ್ ಮುಖಂಡರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

(ಐಎನ್‌ಎನ್)

ವಾರದ ವ್ಯಂಗ್ಯ ಚಿತ್ರ

ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್



KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು